ದಶಮಾನ ಕಂಡ ಜಿಲ್ಲೆಯ ಮೊದಲ ಪ್ರಾದೇಶಿಕ ದಿನ ಪತ್ರಿಕೆ

ದಾವಣಗೆರೆ, ಉಡುಪಿ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಗದಗ, ಬೆಂಗಳೂರು ಗ್ರಾಮಾಂತರ

KB 12 YEARS 2013

# ಕನ್ನಡ ಭಾರತಿ

ಸಂಪಾದಕರು : ಮಲ್ಲಿಕಾರ್ಜುನ್ ಕಬ್ಬೂರು

ನೊಂದವರ ನೈಜ ಕನ್ನಡಿ

ಸಂಪುಟ : 12 ಸಂಚಿಕೆ : 227
4-3-2025 ಮಂಗಳವಾರ

₹3 KA/SK/DVG-006/2023-2025 KARKAN/2013/50807 KANNADA BHARATHI REGIONAL DALIY DAVANAGERE dvgkanndabharathi@gmail.com Page : 6 VOLUME : 12 ISSUE : 227

## ಡಿ. ರೂಪಾ ವಿರುದ್ಧ ದೂರು ನೀಡಿದ್ದ ಐಪಿಎಸ್ ಅಧಿಕಾರಿ ವರ್ತಿಕಾ ಕಟಿಯಾರ್ ವರ್ಗಾವಣೆ



**ಬೆಂಗಳೂರು:** ಹಿರಿಯ ಐಪಿಎಸ್ ಅಧಿಕಾರಿ ರೂಪಾ ಡಿ. ಮೌದ್ಗಿಲ್ ಅವರ ವಿರುದ್ಧ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಲಿಖಿತ ದೂರು ನೀಡಿದ್ದ ಐಪಿಎಸ್ ಅಧಿಕಾರಿ ವರ್ತಿಕಾ ಕಟಿಯಾರ್ ಅವರನ್ನು ಸೋಮವಾರ ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಲಾಗಿದೆ.

2010 ರ ಬ್ಯಾಚ್‌ನ ಐಪಿಎಸ್, ಆಂತರಿಕ ಭದ್ರತಾ ವಿಭಾಗದ ಡಿಐಜಿಯಾಗಿದ್ದ ವರ್ತಿಕಾ ಕಟಿಯಾರ್ ಅವರನ್ನು ಸಿವಿಲ್ ಡಿಫೆನ್ಸ್ ಮತ್ತು ಹೋಮ್ ಗಾರ್ಡ್ ವಿಭಾಗಕ್ಕೆ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಇಂದು ಆದೇಶ ಹೊರಡಿಸಿದೆ.

ರೂಪಾ ಅವರ ವಿರುದ್ಧ ದೂರು ನೀಡಿದ ಬೆನ್ನಲ್ಲೇ ವರ್ತಿಕಾ ಅವರನ್ನು ಗೃಹ ರಕ್ಷಕ ದಳದ ಡಿಐಜಿ ಮತ್ತು ಹೆಚ್ಚುವರಿ ಕಮಾಂಡೆಂಟ್ ಆಗಿ ವರ್ಗಾವಣೆ ಮಾಡಿರುವುದು ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಆದಾಗ್ಯೂ, ಕರ್ನಾಟಕ ಸರ್ಕಾರ ಹೊರಡಿಸಿದ ಆದೇಶದಲ್ಲಿ ವರ್ಗಾವಣೆಗೆ ಯಾವುದೇ ಕಾರಣವನ್ನು ನೀಡಿಲ್ಲ.

ಕಳೆದ ತಿಂಗಳು, ಕಟಿಯಾರ್ ಅವರು 2000 ಬ್ಯಾಚ್‌ನ ಐಪಿಎಸ್ ಅಧಿಕಾರಿ ರೂಪಾ ಡಿ ಮೌದ್ಗಿಲ್ ವಿರುದ್ಧ ರಾಜ್ಯ ಸರ್ಕಾರ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಲಿಖಿತ ದೂರು ನೀಡಿದ್ದರು. ರೂಪಾ ಅವರು ತಮ್ಮ ಅನುಪಸ್ಥಿತಿಯಲ್ಲಿ ಇಬ್ಬರು ಕಿರಿಯ ಪೊಲೀಸ್ ಅಧಿಕಾರಿಗಳ ಮೂಲಕ ನಿಯಂತ್ರಣ ಕೊಠಡಿಯಿಂದ ಕೀ ತೆಗೆದುಕೊಂಡು ತಮ್ಮ ಕಚೇರಿ ಪ್ರವೇಶಿಸಿದ್ದಾರೆ ಎಂದು ಆರೋಪಿಸಿದ್ದಾರೆ.

## ಕಾಂಗ್ರೆಸ್ ಕಾರ್ಯಕರ್ತನ ಮೇಲೆ ಹಲ್ಲೆ: ಶಾಸಕ ವೇದವ್ಯಾಸ ಕಾಮತ್ ವಿರುದ್ಧ ಎಫ್ಐಆರ್ ದಾಖಲು



**ಮಂಗಳೂರು:** ಶಕ್ತಿನಗರ ಬಳಿಯ ಶ್ರೀ ಕೃಷ್ಣ ಭಜನಾ ಮಂದಿರದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತನ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಮಂಗಳೂರು ನಗರ ದಕ್ಷಿಣ ಶಾಸಕ ವೇದವ್ಯಾಸ ಕಾಮತ್ ಸೇರಿದಂತೆ 12 ಜನರ ವಿರುದ್ಧ ಎಫ್ಐಆರ್ ದಾಖಲಿಸಲಾಗಿದೆ.

ಭಾನುವಾರ ತಡರಾತ್ರಿ ಈ ಘಟನೆ ನಡೆದಿದ್ದು, ಕಂಕನಾಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾಂಗ್ರೆಸ್ ಕಾರ್ಯಕರ್ತ ಯಶವಂತ ಪ್ರಭು ನೀಡಿದ ದೂರಿನ ಪ್ರಕಾರ, ಬ್ರಹ್ಮ ಕಲಶೋತ್ಸವ ಸಮಾರಂಭಕ್ಕೆ ಅತಿಥಿಗಳನ್ನು ಸ್ವಾಗತಿಸುವಲ್ಲಿ ಸ್ವಯಂಸೇವಕರಾಗಿ ಸಹಾಯ ಮಾಡುತ್ತಿದ್ದಾಗ ಈ ಘಟನೆ ಸಂಭವಿಸಿದೆ.

### ದತ್ತು ಸ್ವೀಕಾರ ಕೇಂದ್ರದ 2 ನೇ ಘಟಕಕ್ಕೆ ಚಾಲನೆ

## ಬೇಡವಾದ ಶಿಶುವನ್ನು ಅಮ್ಮನಂತೆ ಆರೈಕೆ : ಡಾ.ಪ್ರಭಾ ಮಲ್ಲಿಕಾರ್ಜುನ್



**ದಾವಣಗೆರೆ:** ದತ್ತು ಸ್ವೀಕಾರ ಕೇಂದ್ರದಲ್ಲಿ ತಾಯಿಗೆ ಬೇಡವಾದ ಶಿಶುವನ್ನು ತಾಯಿಗಿಂತಲೂ ಮಿಗಿಲಾದ ಆರೈಕೆ ಕೇಂದ್ರದಲ್ಲಿ ಮಾಡಲಾಗುತ್ತದೆ. ಸಾರ್ವಜನಿಕರು ಈ ಮಕ್ಕಳೊಂದಿಗೆ ಹುಟ್ಟು ಹಬ್ಬ, ಹೊಸ ವರ್ಷವನ್ನು ಆಚರಿಸಿಕೊಳ್ಳಿ ಎಂದು ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ, ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಶೇಷ ದತ್ತು ಸಂಸ್ಥೆ ಅಮೂಲ್ಯ(ಜಿ) ಕೇಂದ್ರ ಘಟಕ-2, ಮತ್ತು ಫಿಜಿಯೋತೆರಪಿ ಕೇಂದ್ರವನ್ನು ಉದ್ಘಾಟಿಸಿ ಮಾತಾನಾಡಿರು.

ಎಲ್ಲೊ ಬಿಟ್ಟು ಹೋದ ಕೂಸು, ಹೆತ್ತ ತಾಯಿಗೇ ಬೇಡವಾದ ಶಿಶುಗಳನ್ನು ಮಕ್ಕಳ ದತ್ತು ಸ್ವೀಕಾರ ಕೇಂದ್ರದಲ್ಲಿ ತಾಯಿಯ ಕರುಳ ಬಳ್ಳಿಯಂತೆ ನೋಡಿಕೊಳ್ಳಲಾಗುತ್ತದೆ. ಎರಡು ದಿನದ ನವಜಾತ ಶಿಶುವಿನಿಂದ ಎರಡು ತಿಂಗಳವರೆಗಿನ ಶಿಶುಗಳು ದತ್ತು ಕೇಂದ್ರಕ್ಕೆ ತಲುಪುತ್ತವೆ ಎಂದರು. ಕೇಂದ್ರದಲ್ಲಿ 10 ಮಕ್ಕಳನ್ನು ಪೋಷಿಸಲು ಮಾತ್ರ ಅವಕಾಶವಿದೆ. ಆದರೆ ಈಗ 27 ಮಕ್ಕಳು ದಾಖಲಾಗಿವೆ. ಇಂದು ಸುಮಾರು 2 ತಿಂಗಳಿಂದ 3 ತಿಂಗಳ 5 ಮಗುವಿಗೆ ನಾಮಕರಣ ಮಾಡಲಾಯಿತು. ವಾತ್ಸಲ್ಯಾ ಸದನಕ್ಕಾಗಿ ಸ್ಥಳದ ಕುರಿತು ಚರ್ಚೆಯನ್ನು ಕೂಡ ಮಾಡಲಾಯಿತು.

**ಕೇಂದ್ರದಲ್ಲಿನ ಸೌಲಭ್ಯಗಳು:** ನವಜಾತ ಶಿಶುಗಳನ್ನು ಎಷ್ಟೇ ನಿಗಾವಹಿಸಿ ಪೋಷಣೆ ಮಾಡಿದರೂ ಅನಾರೋಗ್ಯದಿಂದು ಶಿಶುಗಳು ಬಳಲುತ್ತವೆ. ಈ ದತ್ತು ಕೇಂದ್ರದಲ್ಲಿ ಅಷ್ಟೆ ಸುರಕ್ಷಿತವಾಗಿ ಪೋಷಿಸಲಾಗುತ್ತದೆ. ಸೊಳ್ಳೆಗಳ ತಡೆಗೆ ಮೆಸ್, ಹೊಸ ತೊಟ್ಟಿಲು, ಮಕ್ಕಳ ಬಟ್ಟೆ ತೊಳೆಯಲು ವಾಷಿಂಗ್ ಮೆಶಿನ್‌ಗಳಿವೆ. ಆಯಾಗಳು ಮಕ್ಕಳನ್ನು ಹೇಗೆ ಪೋಷಿಸುತ್ತಾರೆ ಎಂದು ನಿಗಾ ವಹಿಸಲು ಸಿಸಿ ಕ್ಯಾಮೆರಾ ಅಳವಡಿಸಿದೆ.

ಇಲ್ಲಿ ಎಂಟು ಜನ ಆಯಾಗಳು, ಇಬ್ಬರು ಸಾಮಾಜಿಕ ಕಾರ್ಯಕರ್ತ, ಇಬ್ಬರು ಸಂಯೋಜಕರು, ಒಬ್ಬ ನರ್ಸ್ ಸೇರಿ ಹದಿಮೂರು ಸಿಬ್ಬಂದಿ ದತ್ತು ಸ್ವೀಕಾರ ಕೇಂದ್ರದಲ್ಲಿದ್ದಾರೆ. ಆಯಾಗಳು ನಾಲ್ಕು ತಾಸಿಗೆ ಒಬ್ಬರಂತೆ ಮೂರು ಪಾಳಿಯಲ್ಲಿ ತಾಯಿಯಂತೆ ಕೆಲಸ ಮಾಡುವರು.

ದತ್ತು ವಿಧಾನ: ಯಾವುದೇ ಮಗು ಕೇಂದ್ರಕ್ಕೆ ಬಂದ ಕೂಡಲೇ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಮಾಹಿತಿ ದಾಖಲು ಮಾಡಲಾಗುತ್ತದೆ. ಮಗು ಕುರಿತು ಪತ್ರಿಕೆಗಳಿಗೆ ಮಾಹಿತಿ ನೀಡಲಾಗುತ್ತದೆ. ಆನಂತರ ವಾರಸುದಾರರಿಗಾಗಿ ಎರಡು ತಿಂಗಳು ಕಾಯಲಾಗುತ್ತದೆ. ಯಾರೂ ಬರದಿದ್ದರೆ ಮಕ್ಕಳ ಸಂರಕ್ಷಣಾ ಸಮಿತಿಯಿಂದ ಈ ಮಗು ಅನಾಥ ಎಂದು ಅನುಮತಿ ಪಡೆದು ದತ್ತು ಸ್ವೀಕಾರ ಕೇಂದ್ರಕ್ಕೆ ಪಡೆಯಲಾಗುತ್ತದೆ. ನಂತರ ಮಗುವಿನ ವಿವರ ಆನ್‌ಲೈನ್‌ಗೆ ಹಾಕಲಾಗುತ್ತದೆ. ಆನ್‌ಲೈನ್‌ನಲ್ಲಿಯೇ ದತ್ತು ಪಡೆಯ ಬಯಸುವ ಪೋಷಕರು ಕೂಡ ತಮ್ಮ ಮಾಹಿತಿ ನಮೂದಿಸುತ್ತಾರೆ. ಅನಂತರ ಪೋಷಕರ ಹಿನ್ನೆಲೆ, ಉದ್ದೇಶಗಳ ಬಗ್ಗೆ ತನಿಖೆ ನಡೆಸಲಾಗುತ್ತದೆ. ಎಲ್ಲವೂ ಸರಿಯೆಂದು ಕಂಡು ಬಂದಲ್ಲಿ ಸಾಕುವ ಪೋಷಕರಿಗೆ ಮಗುವನ್ನು ದತ್ತು ನೀಡಲಾಗುತ್ತದೆ. ಆದರೆ ಒಂದು ಮಗು ದತ್ತು ಪಡೆಯಲು ಕನಿಷ್ಠ ಒಂದು ವರ್ಷ ಬೇಕಾಗುತ್ತದೆ. ಹೀಗೆ ಸ್ವೀಕರಿಸಿದ ನಂತರ ಎರಡು ವರ್ಷದವರೆಗೂ ದತ್ತು ಕೇಂದ್ರ ಮಗುವಿನ ಪೋಷಣೆ ಕುರಿತು ಕಾಲ ಕಾಲಕ್ಕೆ ವರದಿ ಸಂಗ್ರಹಿಸುತ್ತದೆ.

ದಾವಣಗೆರೆಯಲ್ಲಿ 2012 ರಿಂದ ದತ್ತು ಸ್ವೀಕಾರ ಕೇಂದ್ರ ಆರಂಭವಾಗಿದ್ದು, ಇಲ್ಲಿಯವರೆಗೆ ಸುಮಾರು 212 ಮಕ್ಕಳನ್ನು ದಾಖಲಿಸಿ ಕೊಂಡಿದ್ದಾರೆ. ಈವರೆಗೆ 73 ಮಕ್ಕಳನ್ನು ದತ್ತು ನೀಡಲಾಗಿದೆ. ಅದರಲ್ಲಿ 64 ಮಕ್ಕಳ ಸ್ವದೇಶಿ ದಂಪತಿ, 9 ಮಕ್ಕಳು ವಿದೇಶದ ದಂಪತಿ ದತ್ತು ಸ್ವಿಕರಿಸಿದ್ದಾರೆ.

ಜಿಲ್ಲಾಧಿಕಾರಿ ಗಂಗಾಧರಸ್ವಾಮಿ.ಜಿ.ಎಂ, ಜಿ.ಪಂ ಮುಖ್ಯಕಾರ್ಯನಿರ್ವಾಹಣಾಧಿಕಾರಿ ಅಧಿಕಾರಿ ಸುರೇಶ.ಬಿ.ಇಟ್ನಾಳ್, ಜಿಲ್ಲಾ ಸರ್ಜನ್ ಡಾ. ನಾಗೇಂದ್ರಪ್ಪ, ಡಿಹೆಚ್‌ಓ ಷಣ್ಮುಖಪ್ಪ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕವಿತಾ ಉಪಸ್ಥಿತರಿದ್ದರು.

## ಸಮುದಾಯದ ಒಗ್ಗಟ್ಟಿನಿಂದ ಸರ್ಕಾರಗಳಿಗೆ ನಮ್ಮ ಶಕ್ತಿಯ ಅರಿವಾಗಲಿದೆ: ಬಸವ ಮಾಚಿದೇವ ಶ್ರೀ



**ದಾವಣಗೆರೆ:** ಸಮುದಾಯದ ಏಳಿಗೆ, ಬದಲಾವಣೆ ಕೇವಲ ಒಬ್ಬಿಬ್ಬರಿಂದ ಆಗಲು ಸಾಧ್ಯವಿಲ್ಲ. ಎಲ್ಲರೂ ಸೇರಿದಾಗ ಮಾತ್ರ ಅಭಿವೃದ್ಧಿ ಸಾಧ್ಯ. ನಮ್ಮ ಹಿರಿಯರು ಹೇಳುವಂತೆ ಎಲ್ಲರೂ ಸೇರಿಕೊಂಡು ಒಗ್ಗಟ್ಟು ಪ್ರದರ್ಶಿಸಿದರೆ ಮಾತ್ರ ನಮ್ಮ ಸಮುದಾಯದ ಶಕ್ತಿ ಎಲ್ಲ ರಾಜಕಾರಣಿಗಳಿಗೆ, ಸರ್ಕಾರಗಳಿಗೆ, ಪ್ರಮುಖರಿಗೆ ಗೊತ್ತಾಗಲಿದೆ ಎಂದು ಚಿತ್ರದುರ್ಗದ ಮಾಚಿದೇವ ಮಹಾಸಂಸ್ಥಾನ ಮಠದ ಜಗದ್ಗುರು ಬಸವ ಮಾಚಿದೇವ ನುಡಿದರು.

ನಗರದ ಹೊರವಲಯದಲ್ಲಿ ಜಿಲ್ಲಾಪಂಚಾಯತ್ ಸಮೀಪ ಇರುವ ಮಡಿಕಟ್ಟೆಯಲ್ಲಿ ನೂತನವಾಗಿ ಅಳವಡಿಸಿರುವ ಬಟ್ಟೆ ತೊಳೆಯುವ ಆಧುನಿಕ ಯಂತ್ರಗಳ ಉದ್ಘಾಟನಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.

ಸಮಾಜದ ಬಂಧುಗಳೆಲ್ಲ ಒಂದೆಡೆ ಸೇರಿವುದರಿಂದ ಒಗ್ಗಟ್ಟು ಬರುತ್ತದೆ. ನಮ್ಮ ಸಮೂಹಕ್ಕೆ, ನಮ್ಮ ವ್ಯವಸ್ಥೆಗೆ ಬಲ ಬಂದಂತೆ ಆಗುತ್ತದೆ. ಪದಾಧಿಕಾರಿಗಳೆಂದರೆ ಕೇವಲ ಅಧಿಕಾರಕ್ಕಾಗಿ ಮಾತ್ರ ಅಲ್ಲ ಹಾಗೂ ಸಮಾರಂಭಗಳಿಗೆ ಕೇವಲ ಪದಾಧಿಕಾರಿಗಳು ಸೇರುವುದು ಅಲ್ಲ. ಅವು ಕೇವಲ ನಿರ್ವಹಣೆ ಮಾಡುವ ಸಲುವಾಗಿ ನೇಮಕ ಮಾಡಿದೆ. ಅವರ ಜೊತೆಗೆ ನಾವು ಸಹಕಾರ ನೀಡಬೇಕಿದೆ ಎಂದು ಹೇಳಿದರು.

ಮಡಿಕಟ್ಟೆಯಲ್ಲಿ ವೃತ್ತಿಪರರಿಗೆ ಅನುಕೂಲ ಆಗಲಿ ಎನ್ನುವ ರೀತಿಯಲ್ಲಿ ಎಲ್ಲಾ ಮುಖಂಡರು ಕೆಲಸ ಮಾಡಿದ್ದಾರೆ. ಆಧುನಿಕ ಬಟ್ಟೆ ತೊಳೆಯುವ ಯಂತ್ರಗಳು ಇದೀಗ ದಾವಣಗೆರೆಯಲ್ಲಿ ಬಂದಿವೆ. ಇದರಿಂದ ನಿಮ್ಮ ಕಷ್ಟ ದೂರಾಗಲಿದೆ. ಮುಂದಿನ ಪೀಳಿಗೆ ತೊಟ್ಟಿಯಲ್ಲಿ ನಿಂತು ಬಟ್ಟೆ ತೊಳೆಯಲು ಮುಂದೆ ಬರಲ್ಲ. ಈಗಾಗಲೇ ನಮ್ಮ ಸಮಾಜದಲ್ಲಿ ತೊಟ್ಟಿಯಲ್ಲಿ ನಿಂತು ಬಟ್ಟೆ ತೊಳೆಯುವ ಸಂಸ್ಕೃತಿ ದೂರಾಗಿ, ವಾಷಿಂಗ್ ಮಿಷಿನ್ ಹಾಕಿಕೊಳ್ಳುವತ್ತ ಸಾಗುತ್ತಿದ್ದಾರೆ. ಉದ್ಯಮಿಗಳು ಆಧುನಿಕ ಯಂತ್ರಗಳತ್ತ ಹೋಗುತ್ತಿದ್ದಾರೆ. ಆದ-ರೆ, ಅವುಗಳ ಬಳಕೆಯನ್ನು ನಾವು ಸದುಪಯೋಗ ಪಡೆಯಬೇಕು ಎಂದು ಹೇಳಿದರು.

ನಮ್ಮ ಸಮಾಜದ ಉದ್ಯಮ ಲಾಭದಾಯಕವಾಗಿದ್ದು, ಅದರತ್ತ ನಾವು ಸಾಗಬೇಕಿದೆ. ಹಳೇ ಕತೆ ಬಿಟ್ಟು, ಆಧುನಿಕತೆಯತ್ತ ನಾವು ಸಾಗಬೇಕಾಗಿದೆ. ಪರಿಶ್ರಮ ಪಟ್ಟರೆ ಲಾಭವಿದೆ. ಹಿಂದಿನ ವ್ಯವಸ್ಥೆಯನ್ನು ನಿಧಾನವಾಗಿ ಕೈ ಬಿಡಬೇಕಾಗಿದೆ. ವಸತಿ ಸಚಿವ ಜಮೀರ್ ಅಹಮದ್‌ರನ್ನು ಭೇಟಿ ಮಾಡಿ ಮಡಿಕಟ್ಟೆ ಸಮಿತಿಯ ಸದಸ್ಯರಿಗೆ ವಸತಿ ಸಮುಚ್ಛಯ ನಿರ್ಮಿಸಲು ಮುಂದಾಗಬೇಕಿದೆ. ಎಲ್ಲರೂ ಸಮಾನಾಗಿ ದುಡಿದು ಮುಂದೆ ಬನ್ನಿ, ಮನೆಯಲ್ಲಿ ಸುಮ್ಮನೆ ಕುಳಿತವರನ್ನು ಕರೆದುಕೊಂಡು ಬಂದು ದುಡಿಮೆಗೆ ಹಚ್ಚಿದರೆ ಸ್ವಾವಲಂಬಿಗಳಾಗಲು ಸಾಧ್ಯ ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಡಿಕಟ್ಟೆಯ ಅಧ್ಯಕ್ಷ ಕಿಶೋರ್‌ಕುಮಾರ್ ವಹಿಸಿದ್ದರು. ಈ ವೇಳೆ ಮಡಿಕಟ್ಟೆಯ ವೃತ್ತಿಪರ ಮಡಿವಾಳರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಅಭಿವೃದ್ಧಿ ಹಣ ದುರಪಯೋಗ: ಸರ್ಕಾರದ ವಿರುದ್ಧ ಪ್ರತಿಭಟಿಸಲು ದಸಂಸ ನಿರ್ಧಾರ




**ದಾವಣಗೆರೆ:** 2024 ರಿಂದ 2025 ರವರರೆಗೆ ಪರಿಶಿಷ್ಟರ ಜಾತಿ ಪ. ಪಂಗಡದ ಅಭಿವೃದ್ಧಿ (SCP/TSP)ಹಣವನ್ನು ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸರ್ಕಾರಗಳು ಒಟ್ಟು 2.20,000 ರೂಪಾಯಿಗಳನ್ನು ಸಾಮಾನ್ಯಯೋಜನೆಗೆ ವರ್ಗಾಯಿಸಿಕೊಂಡು, ದ್ರೋಹ ಬಗೆದಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ದಾದಾ ಸಾಹೇಬ್ ಡಾ. ಎನ್. ಮೂರ್ತಿ ಸ್ಥಾಪಿತ) ವತಿಯಿಂದ ಆಕ್ಷೇಪಿಸಲಾಯಿತು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಾ. ಎನ್. ಮೂರ್ತಿ,2023-24 ಹಾಗೂ 2024-25 ಸಾಲಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರ 25 ಸಾವಿರ ಪರಿಶಿಷ್ಟರ ಅಭಿವೃದ್ಧಿ ಹಣವನು 5 ಗ್ಯಾರಂಟಿಗೆ ಬಳಸಿಕೊಂಡಿದೆ. ಮುಂದಿನ 2025-26 ಸಾಲಿನಲ್ಲಿ 14,484 ಕೋಟಿ ಹಣ ಸಹ ಬಳಸಿಕೊಳ್ಳಲು ಯೋಜನೆಯನ್ನು ನಡೆಸಿದೆ. ಸರ್ಕಾರದ ಇಂತಹ ದಲಿತ ದ್ರೋಹ, ವಂಚನೆ ಮೋಸವನ್ನು ದ.ಸಂ.ಸ ತೀವ್ರವಾಗಿ ಖಂಡಿಸಲಿದೆ ಎಂದರು.

2025-26ನೇ ಸಾಲಿನ ಬಜೆಟ್‌ನಲ್ಲಿ ಪ.ಜಾ/ಪ.ವರ್ಗದ ಕಲ್ಯಾಣಕ್ಕೆ ಅವರ ಜನ ಸಂಖ್ಯೆಗನುಗುಣವಾಗಿ ಹೆಚ್ಚಿನ ಹಣ ನಿಗದಿ ಮಾಡಬೇಕು ಹಾಗೂ ಸಬಲೀಕರಣಕ್ಕೆ "ವಿಶೇಷ ಬಜೆಟ್" ಘೋಷಣೆ ಮಾಡಬೇಕು ಸೇರಿದಂತೆ ಅನೇಕ ಹಕ್ಕೊತ್ತಾಗಳನ್ನು ಸಮಿತಿ ಆಗ್ರಹಿಸಲಿದೆ ಎಂದರು.

ಹಾಗೂ ದುರುಪಯೋಗ ಪಡಿಸಿಕೊಂಡಿರುವ 25 ಸಾವಿರ ಕೋಟಿ ಹಣವನ್ನು ಹೆಚ್ಚುವರಿಯಾಗಿ ಮುಂದಿನ ಬಜೆಟ್‌ನಲ್ಲಿ ಸೇರಿಸಿ ದಲಿತರ ಅಭಿವೃದ್ಧಿಗೆ ಮುಂದಾಗಬೇಕು ಎಂದು

ಆಗ್ರಹಿಸಿ ಪ್ರತಿಭಟಿಸಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಭಾರಿ ಹೋರಾಟ ನಡೆಸಲುದ್ದೇಶಿಸಿದೆ. ತಪ್ಪಿದಲ್ಲಿ ರಾಜ್ಯಾದ್ಯಾಂತ ಭಾರಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ, ಸಮಿತಿಯ ಜಿಲ್ಲಾಧ್ಯಕ್ಷ ಹೆಚ್. ಮಂಜುನಾಥ್, ಆರ್. ಯಶ್ವಂತ್, ಪುಲ್ಲಯ್ಯ, ಶಶಿಧರ್ ಬೈಲಹೊನ್ನಯ್ಯ, ನವೀನ್, ಸಂತೋಷ್ ಇನ್ನಿತರರು ಉಪಸ್ಥಿತರಿದ್ದರು.

### ರಾಮಮಂದಿರ ಸ್ಫೋಟಿಸಲು ಸಂಚು

## ಶಂಕಿತ ಉಗ್ರ ಅಬ್ದುಲ್ ರೆಹಮಾನ್ ಬಂಧನ : ಗ್ರನೇಡ್ ವಶ



**ಅಹಮದಾಬಾದ್:** ಗುಜರಾತ್ ಎಟಿಎಸ್ ನಡೆಸಿದ ಪ್ರಮುಖ ಕಾರ್ಯಾಚರಣೆಯಲ್ಲಿ ಭಯೋತ್ಪಾದಕ ಸಂಘಟನೆಯೊಂದಿಗೆ ಸಂಬಂಧ ಹೊಂದಿದ್ದ ಶಂಕಿತ ಉಗ್ರ 19 ವರ್ಷದ ಅಬ್ದುಲ್ ರೆಹಮಾನ್‌ನನ್ನು ಹರಿಯಾಣದ ಫರಿದಾ ಬಾದ್ ನಲ್ಲಿ ಬಂಧಿಸಲಾಗಿದೆ. ವಿಚಾರಣೆಯ ಸಮಯದಲ್ಲಿ ಸಂಗ್ರಹಿಸಲಾದ ಗುಪ್ತಚರ ಮಾಹಿತಿಯ ಮೇರೆಗೆ ದಾಳಿ ನಡೆಸಿ ಅಬ್ದುಲ್ ರೆಹಮಾನ್ ನನ್ನು ಬಂಧಿಸಲಾಗಿದೆ. ದಾಳಿ ವೇಳೆ ಪಾಳುಬಿದ್ದ ಮನೆಯೊಂದರಲ್ಲಿ ಎರಡು ಜೀವಂತ ಹ್ಯಾಂಡ್ ಗ್ರೆನೇಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಫರಿದಾಬಾದ್ ಪೊಲೀಸರ ಸಹಾಯದಿಂದ, ಎಟಿಎಸ್ ಸಂಪೂರ್ಣ ಶೋಧ ನಡೆಸಿ, ಸಂಭಾವ್ಯ ಭಯೋತ್ಪಾದಕ ದಾಳಿಯನ್ನು ವಿಫಲಗೊಳಿಸಿದೆ.

## ಸಿರಿಧಾನ್ಯ ಬಳಕೆ ಉತ್ತಮ ಆರೋಗ್ಯಕ್ಕೆ ಸಹಕಾರಿ : ಕೋಟಾ ಶ್ರೀನಿವಾಸ ಪೂಜಾರಿ



**ಚಿಕ್ಕಮಗಳೂರು:** ಕಲಬೆರಕೆ ಆಹಾರ ಪದಾರ್ಥಗಳ ಹಾವಳಿಯಿಂದ ಆತಂಕಪಡುತ್ತಿರುವ ಸಂದರ್ಭದಲ್ಲಿ ಸಿರಿಧಾನ್ಯ ಉತ್ಪನ್ನಗಳ ಬಳಕೆಯಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ ಎಂದು ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಹೇಳಿದರು.

ಅವರು ನಗರದ ಪಾಂಚಜನ್ಯ ಸಭಾಂಗಣದಲ್ಲಿ ಬೆಳವಾಡಿಯ ತೃಪ್ತಿ ಸಿರಿಧಾನ್ಯ ಸರಿ ಸಂಸ್ಥೆ, ಚಿಕ್ಕಮಗಳೂರು ಆರ್ಟ್ ಸೊಸೈಟಿ ಹಾಗೂ ಚಿತ್ರಕಲಾ ಶಿಕ್ಷಕರ ಸಂಘದ ವತಿಯಿಂದ ಏರ್ಪಡಿಸಲಾಗಿದ್ದ ತೃಪ್ತಿ ಸಿರಿಧಾನ್ಯ ಸರಿ ಉತ್ಪನ್ನಗಳ ಬಿಡುಗಡೆ ಹಾಗೂ ಚಿತ್ರಕಲಾ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು.

ಕಲಬೆರಕೆ ಇಲ್ಲದ ವಸ್ತುಗಳನ್ನು ಮಾರಾಟ ಮಾಡಲು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿಗೆ ವ್ಯವಸ್ಥೆ ತಲುಪಿದೆ. ಮುಖಕ್ಕಿಂತ ಮುಖವಾಡಕ್ಕೆ ಹೆಚ್ಚು ಪ್ರಚಾರ ಸಿಗುವಂತಾಗಿದೆ. ನಮ್ಮ ಯೋಚನೆ ಮತ್ತು ವಿಚಾರ ಎರಡೂ ವ್ಯವಸ್ಥೆಯ ಹತ್ತಿರಕ್ಕಿರಬೇಕು ಎಂದು ಅವರು ತಿಳಿಸಿದರು.

ಕರ್ನಾಟಕ ಸರ್ಕಾರದಲ್ಲಿ ಆಹಾರ ಉತ್ಪನ್ನಗಳ ಗುಣಮಟ್ಟ ಪರೀಕ್ಷೆಗೆ ನಾಲ್ಕು ಪ್ರಯೋಗಾಲಯಗಳಿವೆ. ಹಣ್ಣುಗಳಿಗೆ ವಿಷಯುಕ್ತ ರಾಸಾಯನಿಕಗಳನ್ನು ಬೆರೆಸಿ ಬಣ್ಣ ಹೆಚ್ಚಿಸುವುದು ಸೇರಿದಂತೆ ಇತರೆ ಕಲಬೆರಕೆಗಳನ್ನು ಅದು ಪರೀಕ್ಷಿಸಬೇಕು. ಆದರೆ ಆ ನಾಲ್ಕೂ ಲ್ಯಾಬ್‌ಗಳು ಸಹ ಹಾಳಾಗಿವೆ ಸರಿಯಾದ ವರದಿ ಕೊಡುವ ಸ್ಥಿತಿಯಲ್ಲಿಲ್ಲ ಎಂದು ವರದಿಗಳು ಹೇಳುತ್ತವೆ. ಈ ರೀತಿ ಹಾಳುವ ಮಾಡುವ ವರ್ಗವೇ ಇದೆ. ಇಂತಹ ಪರಿಸ್ಥಿತಿಯಲ್ಲಿ ನಾವು ಆಹಾರದ ಬಗ್ಗೆ ಆತಂಕಪಡುತ್ತಿರುವ ಸಂದರ್ಭದಲ್ಲಿ ಸಿರಿಧಾನ್ಯ ಉತ್ಪನ್ನಗಳ ಬಳಕೆ ಸೂಕ್ತ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, ನಮ್ಮ ನಿಜವಾದ ಆಹಾರ ಪದ್ಧತಿಯನ್ನು ಮರೆತ ಕಾರಣಕ್ಕೆ ಜಿಗಿದಾಡಬೇಕಾದ ವಯಸ್ಸಿನಲ್ಲೇ ಕಾಯಿಲೆ ತಂದುಕೊಳ್ಳುತ್ತಿದ್ದೇವೆ. ಆಹಾರ ಔಷಧಿ ಆಗುವ ಬದಲಿಗೆ, ಔಷಧಿಯೇ ಆಹಾರವಾಗಿ ಬದಲಾಗಿರುವುದರ ಪರಿಣಾಮ ಇದು. ಮತ್ತೆ ಪ್ರಕೃತಿಯ ಜೊತೆಗೆ ನಮ್ಮ ಬದುಕನ್ನು ಪುನರ್ ಸ್ಥಾಪಿಸುವುದೊಂದೇ ಅದಕ್ಕಿರುವ ಪರಿಹಾರ ಎಂದು ಹೇಳಿದರು.

ವಾತಾ, ಪಿತ್ತ, ಕಫ ಮೂರೂ ಸಮಚಿತ್ತದಲ್ಲಿದ್ದರೆ ನಮಗೆ ಇನ್ನಾವ ವೈದ್ಯರೂ ಬೇಕಿಲ್ಲ, ನಮ್ಮ ಆರೋಗ್ಯ ಕೆಟ್ಟಿತೆಂದು ಮೊದಲು ಸೂಚನೆ ಕೊಡುವುದೇ ಈ ಮೂರು ಸಂಗತಿ. ಅದನ್ನು ನಾವು ಆಹಾರದಲ್ಲೇ ನಿಯಂತ್ರಿಸಿಕೊಳ್ಳಲು ಸಾಧ್ಯವಿದೆ, ಆದರೆ ದುರ್ದೈವ ಆಹಾರವನ್ನೂ ನಾವು ವಿಷಯ ಮಾಡಿಬಿಟ್ಟಿದ್ದೇವೆ. ಅಕ್ಕಿ, ತರಕಾರಿ, ಹಣ್ಣು ಬೆಳೆಯುವುದು ಮತ್ತು ಸಂಸ್ಕರಿಸುವ ವೇಳೆ ಬಳಸುವ ರಾಸಾಯನಿಕಗಳು ವಿಷವಾಗಿ ಪರಿಣಮಿಸುತ್ತಿದೆ. ಇದಕ್ಕೆ ಪರಿಹಾರ ಹುಡುಕಿಕೊಳ್ಳಬೇಕಿದೆ. ವಿಚಾರ, ಆಹಾರ ಮತ್ತು ವಿಹಾರಗಳನ್ನು ಸರಿಪಡಿಸಿಕೊಂಡರೆ ಆರೋಗ್ಯ ಸರಿಯಾಗಿಟ್ಟಿಕೊಳ್ಳಲು ಉತ್ತಮ ಮಾರ್ಗ ಎಂದು ಹೇಳಿದರು.

ವಿಷಮಯ ಆಹಾರದಿಂದ ತಪ್ಪಿಸಿಕೊಳ್ಳುವ ಪುಟ್ಟ ಪ್ರಯತ್ನವನ್ನು ತೃಪ್ತಿ ಸಿರಿಧಾನ್ಯ ಸರಿ ಸಂಸ್ಥೆ ಮಾಡುತ್ತಿದೆ. ಅದನ್ನು ಪ್ರೋತ್ಸಾಹಿಸಿ ಆರೋಗ್ಯ ಸುರಕ್ಷತೆಗೆ ಆದ್ಯತೆ ನೀಡೋಣ ಎಂದರು.

ತೃಪ್ತಿ ಸಿರಿಧಾನ್ಯ ಸರಿ ಸಂಸ್ಥೆಯ ರವೀಂದ್ರ ಬೆಳವಾಡಿ ಮಾತನಾಡಿದರು. ಚಿಕ್ಕಮಗಳೂರು ಆರ್ಟ್ ಸೊಸೈಟಿ ಅಧ್ಯಕ್ಷೆ ಲತಾರವೀಂದ್ರ ಅಧ್ಯಕ್ಷತೆ ವಹಿಸಿದ್ದರು. ಕೆನರಾ ಬ್ಯಾಂಕ್ ಅಧಿಕಾರಿ ಮನೋಜ್, ಜಂಟೀ ಕೃಷಿ ನಿರ್ದೇಶಕಿ ಎಚ್.ಎಲ್.ಸುಜಾತ, ಶಾಂತಿನಿಕೇತನ ಚಿತ್ರಕಲಾ ವಿದ್ಯಾಲಯದ ಪ್ರಾಂಶುಪಾಲ ವಿಶ್ವಕರ್ಮ ಆಚಾರ್ಯ, ಸಿರಿ ನೇಚರ್ಸ್‌ರೂಟ್ಸ್‌ನ ರಮೇಶ್ ಇತರರು ಉಪಸ್ಥಿತರಿದ್ದರು.

## ಉಕ್ಕಡಗಾತ್ರಿ ಅಜ್ಜಯ್ಯನಿಗೆ ಹರಕೆ ತೀರಿಸಿದ ಭಕ್ತರು



ಮಲೆಬೇನ್ನೂರು: ಉಕ್ಕಡಗಾತ್ರಿ ಅಜ್ಜಯ್ಯನ ಭಕ್ತರು ಹರಕೆ, ತುಲಾಭಾರ ತಮ್ಮ ಸಂಕಲ್ಪಾನುಸಾರ ಅಜ್ಜಯ್ಯನಿಗೆ ಸಮರ್ಪಿಸಿದರು.
ಸಕ್ಕರೆ ತೂಕದಲ್ಲಿ, ಬೆಲ್ಲದ ತೂಕದಲ್ಲಿ, ತೆಂಗಿನಕಾಯಿ ತೂಕದಲ್ಲಿ, ನಾಣ್ಯಗಳ ತೂಕದಲ್ಲಿ ತುಲಾಭಾರ ನೆಡೆಯಿತು. ಭಕ್ತರು ಅಜ್ಜಯ್ಯನಲ್ಲಿ ಬೇಡಿಕೊಂಡತೆ ಭಕ್ತಿ ಸಮರ್ಪಿಸಿದರು.ಸ್ನಾನ ಘಟ್ಟದಲ್ಲಿ ಸ್ನಾನ ಮಾಡಿ ವಿಜ್ಞೇಶ್ವರನಲ್ಲಿ ಪೂಜೆ ಸಲ್ಲಿಸಿದರು. ಕೆಲವರು ದಡದಲ್ಲಿ ಅಜ್ಜಯ್ಯನ ಪೋಟೋ ಇಟ್ಟು ಅರಿಷಿಣ, ಕುಂಕುಮ ಲೇಪಿಸಿ, ನದಿ ನೀರನ್ನು ಬಾಟಲಿಗಳಲ್ಲಿ ತುಂಬಿಟ್ಟು ಪೂಜೆ ಸಲ್ಲಿಸಿದರು. ಅಬಾಲವೃದ್ದಾರಾಗಿ ನಿಂಬೆ ಹಣ್ಣುಗಳನ್ನು ನದಿ ದಡದಲ್ಲಿ ಮೈಗೆಲ್ಲಾ ಲೇಪಿಸಿಕೊಂಡು ದಿಂಡುರಳು ಸಲ್ಲಿಸಿದರು. ಭೂತ, ಪ್ರೇತಗಳು, ಮೈಯಲ್ಲಿ ಕಾಯಿಲೆ,ಕಸಾಲೆಗಳು ದೂರವಾಗುತ್ತವೆ ಎಂದು ಕೆಲವರು ತಿಳಿಸಿದರು.
ಇನ್ನೂ ಕೆಲವರು ನದಿ ನೀರನ್ನು ತಲೆಯಮೇಲೆ ಕುಟುಂಬದಲ್ಲಿ ಹೊತ್ತು ಅದಕ್ಕೆ ಪೂಜೆ ಸಲ್ಲಿಸಿ ಸನ್ನಿಧಿಗೆ ಭಕ್ತಿ ಸಮರ್ಪಿಸಿದರು. ಇದರಿಂದ ತಲೆಯಮೇಲೆ ಇರುವ ಭಾರ ಮತ್ತು ಕಷ್ಟಗಳಿಂದ ದೂರ ಆಗುತ್ತವೆ ಎಂಬ ನಂಬಿಕೆ ವ್ಯಕ್ತಪಡಿಸಿದರು. ಭಕ್ತರು ಹರಕೆ ಹೊತ್ತು ಕೊಂಡಂತೆ ದವಸ ಧಾನ್ಯಗಳನ್ನು ಒಪ್ಪಿಸುತ್ತಿದ್ದರು.
ಅಜ್ಜಯ್ಯನಿಗೆ ವಿಧಿ ವಿಧಾನಗಳೊಂದಿಗೆ ಅಭಿಶೇಕ, ವಿಶೇಷ ಪೂಜೆ ಪೂಜಾಲಂಕಾರ ಮಾಡಲಾಗಿತ್ತು. ಸೇರಿದ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಪೋಲಿಸ್ ಬಂದೋಬಸ್ತ್ ಇತ್ತು. ನಿಂಬೆ ಹಣ್ಣು, ಬಾಳೆಹಣ್ಣು, ತೆಂಗಿನಕಾಯಿ , ಉದ್ದಿನ ಕಡ್ಡಿ, ಕರ್ಪೂರ ವ್ಯಾಪಾರ ವಹಿವಾಟು ಕಂಡು ಬಂತು.ಮಕ್ಕಳ ಆಟಿಕೆಗಳು, ಬಳೆ, ಬೆಂಡು ಬೆತ್ತಾಸು, ಫಳಾರದ ವ್ಯಾಪಾರ ಜೋರಾಗಿತ್ತು.



# ಇಂದಿನ ರಾಶಿ ಭವಿಷ್ಯ

### ಮೇಷ ರಾಶಿ

ಎಣ್ಣೆಯುಕ್ತ ಮತ್ತು ಮಸಾಲೆಯುಕ್ತ ಆಹಾರ ತಪ್ಪಿಸಿ. ದಿನದ ಆರಂಭದಲ್ಲಿ ಇಂದು ನೀವು ಯಾವುದೇ ಆರ್ಥಿಕ ನಷ್ಟವನ್ನು ಹೊಂದಿರಬಹುದು.ಇದರಿಂದ ನಿಮ್ಮ ಪೂರ್ತಿ ದಿನ ಹದಗೆಡಬಹುದು. ನಿಮ್ಮ ಮಕ್ಕಳ ಸಮಸ್ಯೆಗಳನ್ನು ನಿಭಾಯಿಸಲು ಸ್ವಲ್ಪ ಸಮಯ ತೆಗೆದುಕೊಳ್ಳಿ. ಧೃತಿಗೆಡಬೇಡಿ – ವೈಫಲ್ಯಗಳು ಸಹಜ ಅವುಗಳು ಜೀವನದ ಸೌಂದರ್ಯವಾಗಿವೆ. ಕಡಿಮೆ ಅಡೆತಡೆಗಳೊಂದಿಗೆ–ಇದು ಅದ್ಭುತ ಸಾಧನೆಗಳ ದಿನದಂತೆ ಕಾಣುತ್ತದೆ ತಾವು ಬಯಸಿದ್ದು ಸಿಗದಿದ್ದಲ್ಲಿ ಕಿರಿಕಿಯಾಗಿ ವರ್ತಿಸುವ ಸಹೋದ್ಯೋಗಿಗಳ ಎಚ್ಚರದಿಂದಿರಿ.

### ವೃಷಭ ರಾಶಿ

ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ಕೈಬಿಡಬೇಡಿ. ಮೌಲ್ಯ ಹೆಚ್ಚಾಗುವ ವಸ್ತುಗಳನ್ನು ಖರೀದಿಸಲು ಪರಿಪೂರ್ಣ ದಿನ. ನಿಮ್ಮ ಅತಿಥಿಗಳ ಜೊತ ಒರಟಾಗಿ ನಡೆದುಕೊಳ್ಳಬೇಡಿ. ನಿಮ್ಮ ವರ್ತನೆ ಕೇವಲ ನಿಮ್ಮ ಕುಟುಂಬಕ್ಕೆ ಮಾತ್ರವೇ ಅಸಮಾಧಾನ ತರದೇ ಸಂಬಂಧಗಳಲ್ಲೂ ಶೂನ್ಯತೆಯನ್ನು ತರಬಹುದು. ನಿಮ್ಮ ಪ್ರೇಮಿಗೆ ಇಷ್ಟವಿಲ್ಲದ ಉಡುಪುಗಳು ಅವರಿಗೆ ಮುಜುಗರ ಉಂಟುಮಾಡಬಹುದಾದ್ದರಿಂದ ಅವುಗಳನ್ನು ಧರಿಸಬೇಡಿ. ನೀವು ಕಷ್ಟಕರವೆಂದು ತೋರುವ ಸಮಸ್ಯೆಗಳನ್ನು ಪರಿಹರಿಸಲು ನಿಮಗಿರುವ ಸಂಪರ್ಕಗಳನ್ನು ಬಳಸಬೇಕಾಗುತ್ತದೆ

### ಮಿಥುನ ರಾಶಿ

ಒಬ್ಬ ಸಂತನಿಂದ ಆಧ್ಯಾತ್ಮಿಕ ಜ್ಞಾನ ಸಾಂತ್ವನ ಮತ್ತು ಆರಾಮವನ್ನು ಒದಗಿಸುತ್ತದೆ. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ. ಕೌಟುಂಬಿಕ ಸಮಸ್ಯೆಗೆ ಮೊದಲ ಆದ್ಯತೆ ನೀಡಬೇಕು. ನೀವು ವಿಳಂಬವಿಲ್ಲದೇ ಇದನ್ನು ಚರ್ಚಿಸಬೇಕು, ಏಕೆಂದರೆ ಒಮ್ಮೆ ಇದನ್ನು ಬಗೆಹರಿಸಿದ ನಂತರ ಮನೆಯಲ್ಲಿನ ಜೀವನ ನಡೆಸಲು ಹೆಚ್ಚು ಸುಲಭವಾಗುತ್ತದೆ ಮತ್ತು ನಿಮ್ಮ ಕುಟುಂಬದ ಸದಸ್ಯರ ಮೇಲೆ ಪ್ರಭಾವ ಬೀರಲು ನಿಮಗೆ ಯಾವುದೇ ತೊಂದರೆ ಕಂಡುಬರುವುದಿಲ್ಲ.

### ಕರ್ಕ ರಾಶಿ

ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ನೀವು ನಿಮ್ಮ ಹೂಡಿಕೆಗಳನ್ನು ಸಂಪ್ರದಾಯಬದ್ಧವಾಗಿ ಉಳಿತಾಯ ಮಾಡಿದರೆ ಹಣ ಮಾಡುತ್ತೀರಿ. ನಿಮಗೆ ಆಶ್ಚರ್ಯವಾಗುವ ಹಾಗೆ ನಿಮ್ಮ ಸಹೋದರ ನಿಮ್ಮನ್ನು ಪಾರು ಮಾಡುತ್ತಾರೆ. ನೀವು ಒಬ್ಬರೊಬ್ಬರನ್ನು ಸಂತೋಷವಾಗಿಡಲು ಒಟ್ಟೊಟ್ಟಿಗೆ ಕೆಲಸ ಮಾಡಬೇಕು.

### ಸಿಂಹ ರಾಶಿ

ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಹಣದ ಲಾಭ ನಿಮ್ಮ ನಿರೀಕ್ಷೆಯಂತಿರುವುದಿಲ್ಲ. ಸ್ನೇಹಿತರು ಜೊತೆಗಿನ ಚಟುವಟಿಕೆಗಳು ಆಹ್ಲಾದಕರವಾಗಿರುತ್ತವೆ – ಇಲ್ಲದಿದ್ದರೆ ನೀವು ಖಾಲಿ ಕೈಯಲ್ಲಿ ಜೊತೆ ತೆರಳುತ್ತೀರಿ. ಪ್ರಣಯದ ಬಂಧಗಳು ನಿಮ್ಮ ಸಂತೋಷವನ್ನು ಆಸಕ್ತಿಕರವಾಗಿಸುತ್ತವೆ. ಇಂದು ಕೆಲಸದಲ್ಲಿ ನಿಮಗೆ ನಿಜಕ್ಕೂ ಒಳ್ಳೆಯದಾಗಬಹುದು, ಇಂದು ನಿಮ್ಮನ್ನು ದ್ವೇಷಿಸುವವರಿಗೆ 'ಹಲೋ' ಎಂದಲ್ಲಿ.

### ಕನ್ಯಾ ರಾಶಿ

ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ಅನಿರೀಕ್ಷಿತ ಬಿಲ್ಗಳು ಹಣಕಾಸಿನ ಹೊರೆಯನ್ನು ಹೆಚ್ಚಿಸುತ್ತದೆ. ಪ್ರೀತಿ ಸಾಂಗತ್ಯ ಮತ್ತು ಬಂಧ ಏರಿಕೆಯಲ್ಲಿರುತ್ತವೆ. ಪ್ರೀತಿ ಇಂದ್ರಿಯಗಳ ಮಿತಿಯನ್ನು ಮೀರಿದ್ದಾಗಿದೆ, ಆದರೆ ನಿಮ್ಮ ಇಂದ್ರಿಯಗಳು ಇಂದು ಪ್ರೀತಿಯ ಭಾವಪರವಶತೆಯನ್ನು ಅನುಭವಿಸುತ್ತವೆ. ನೀವು ಏನೂ ಮಾಡಿದರೂ ಪರಿಪೂರ್ಣವಾಗಿ ಮಾಡುತ್ತೀರಿ – ನಿಮ್ಮ ಸುತ್ತಲಿನವರಿಗೆ ನೀವೆಷ್ಟು ಪರಿಣಾಮಕಾರಿಯೆಂದು ತೋರಿಸುವ ಮೂಲಕ ನಿಮ್ಮ ಮೌಲ್ಯವನ್ನು ಸಾಬೀತು ಮಾಡಿ.

### ತುಲಾ ರಾಶಿ

ಇತ್ತೀಚೆಗೆ ನಿಮ್ಮಲ್ಲಿ ಕೆಲವರು ಓವರ್ಟೈಮ್ ಮಾಡುತ್ತಿರುತ್ತಾರೆ ಹಾಗೂ ನಿಮ್ಮ ಚೈತನ್ಯ ಉಡುಗುತ್ತಿರುತ್ತದೆ– ಇಂದು ನೀವು ಒತ್ತಡ ಹಾಗೂ ಸಂದಿಗ್ಧತೆಯನ್ನು ಬಯಸುವುದಿಲ್ಲ. ಯಾವುದೇ ಆಪ್ತ ಸಂಬಂಧಿಕರ ಬೆಂಬಲದಿಂದ ನೀವು ನಿಮ್ಮ ವ್ಯಾಪಾರದಲ್ಲಿ ಉತ್ತಮವಾಗಿ ಮಾಡಬಹುದು. ಇದು ನಿಮಗೆ ಆರ್ಥಿಕ ಲಾಭವನ್ನು ನೀಡುತ್ತದೆ. ಒಬ್ಬ ಹತ್ತಿರದ ಸಂಬಂಧಿಗೆ ಹೆಚ್ಚು ಗಮನ ನೀಡಬೇಕಾಗಬಹುದಾದರೂ ಅವರು ಬೆಂಬಲ ಮತ್ತು ಆರೈಕೆ ನೀಡಬಹುದು. ಪ್ರಣಯದ ಅವಕಾಶಗಳಿವೆ – ಆದರೆ ಅವು ಕ್ಷಣಿಕವಾಗಿರುತ್ತವೆ

### ವೃಶ್ಚಿಕ ರಾಶಿ

ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ತಮ್ಮ ವ್ಯಾಪರಕ್ಕಾಗಿ ಮನೆಯಿಂದ ಹೊರಗೆ ಹೋಗಿರುವ ವ್ಯಾಪಾರಿಗಳು, ತನ್ನ ಹಣವನ್ನು ಜಾಗರೂಕವಾಗಿಡಿ, ಹಣದ ಕಳ್ಳತನವಾಗುವ ಸಾಧ್ಯತೆ ಇದೆ. ಥಿಯೇಟರ್ ಅಥವಾ ನಿಮ್ಮ ಸಂಗಾತಿಯ ಜೊತೆಗಿನ ಊಟ ನಿಮ್ಮನ್ನು ಒಂದು ಶಾಂತವಾದ ಮತ್ತು ಅದ್ಭುತ ಲಹರಿಯಲ್ಲಿರಿಸುವಂತೆ ತೋರುತ್ತದೆ.

### ಧನು ರಾಶಿ

ಕ್ರೀಡೆಗಳು ಸಾರ್ವಕಾಲಿಕ ಯೌವನದ ರಹಸ್ಯವಾಗಿದ್ದರಿಂದ ಯಾವುದಾದರೂ ಆಟಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ನಿಮ್ಮ ಸಹಾನುಭೂತಿ ಮತ್ತು ತಿಳುವಳಿಕೆಗೆ ಪ್ರತಿಫಲ ದೊರಕುತ್ತದೆ. ಆದರೆ ಯಾವುದೇ ಆತುರದ ತೀರ್ಮಾನ ಒತ್ತಡ ಉಂಟುಮಾಡಬಹುದಾದ್ದರಿಂದ ಎಚ್ಚರಿಕೆಯಿಂದಿರಿ.

### ಮಕರ ರಾಶಿ

ನಿಮ್ಮ ಚಿಂತನೆ ಮತ್ತು ಶಕ್ತಿಯನ್ನು ನೀವು ವಾಸ್ತವವಾಗಿ ಏನನ್ನು ನೋಡಬಯಸುತ್ತೀರೋ ಅದನ್ನು ಸಾಧಿಸುವಲ್ಲಿ ನಿರ್ದೇಶಿಸಿ. ಇದುವರೆಗೆ ನಿಮ್ಮ ಸಮಸ್ಯೆಯಂದರೆ ನೀವು ಪ್ರಯತ್ನಿಸದೇ ಕೇವಲ ಆಸೆಪಡುತ್ತೀರಿ. ನಿಮ್ಮ ಹಿಂದಿನ ಸಾಲವನ್ನು ಇಂದಿನ ವರೆಗೂ ಮರುಪಾವತಿ ಮಾಡದೇ ಇರುವ ನಿಮ್ಮ ಸಂಬಂಧಿಕರಿಗೆ ಇಂದು ಸಾಲ ಕೊಡಬಾರದು.

### ಕುಂಭ ರಾಶಿ

ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ ಎಂದು ಭರವಸೆ ಇದೆ. ಇಂದು ನೀವು ಇತರರ ಅಗತ್ಯಗಳಿಗೆ ಗಮನ ನೀಡಬೇಕಾದರೂ ಮಕ್ಕಳೊಂದಿಗೆ ಅತೀ ಉದಾರತೆ ತೋರಿಸುವುದು ತೊಂದರೆಗೆ ಕಾರಣವಾಗುತ್ತದೆ.

### ಮೀನ ರಾಶಿ

ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ವಿಶ್ವಾಸರಾಹಿತ್ಯ ಅಹಂಭಾವ ಮತ್ತು ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ. ಇಂದು, ನೀವು ಸಾಕಷ್ಟು ಸಕಾರಾತ್ಮಕತೆಯೊಂದಿಗೆ ಮನೆಯಿಂದ ಹೊರಬರುತ್ತೀರಿ, ಆದರೆ ಕೆಲವು ಅಮೂಲ್ಯ ವಸ್ತುವಿನ ಕಳ್ಳತನದಿಂದಾಗಿ, ನಿಮ್ಮ ಮನಸ್ಥಿತಿಗೆ ತೊಂದರೆಯಾಗಬಹುದು.

## ಹೃದಯ ಭಾಗದಿಂದ ಸಾಹಿತ್ಯದೊಂದಿಗೆ ಕವನ ರಚಿಸಿರೆ ಕವನಕ್ಕೆ ಬೆಲೆ ಬರುತ್ತದೆ–ನಾನಾಗೌಡ ಮಾಲಿ ಪಾಟೀಲ್




**ದಾವಣಗೆರೆ:** ಸಾಹಿತ್ಯ ಕೇವಲ ಪ್ರಚಾರಕ್ಕೆ ಸೀಮಿತವಾಗದೇ ಮನದಾಳದಿಂದ ಹೃದಯ ಭಾಗದಿಂದ ಸಾಹಿತ್ಯದೊಂದಿಗೆ ಕವನ ರಚಿಸಿರೆ ಕವನಕ್ಕೆ ಭವ್ಯ ದಿವ್ಯ ಬೆಲೆ ಬರುತ್ತದೆ. ಇತ್ತೀಚಿನ ದಿನಮಾನಗಳಲ್ಲಿ ನಾನಾ ಯುವ ಸಾಹಿತಿಗಳ ಹಳೆಗನ್ನಡ ಸಾಹಿತ್ಯದ ಅಭಿರುಚಿ ಕಾಳಜಿ ಇಲ್ಲದಿರುವುದು ವಿಷಾದನೀಯ. ಪಂಪ, ರನ್ನ, ಜನ್ನ, ಕುಮಾರವ್ಯಾಸ ಹೀಗೆ ಹತ್ತ ಹಲವು ಕವಿ, ಸಾಹಿತಿ, ದಿಗ್ಗಜರ ಪರಿಚಯ, ನೆನಪು, ಹಿರಿಯರ–ಕಿರಿಯರಿಗೆ ಮನದಟ್ಟು ಮಾಡುವ ಅಗತ್ಯವಿದೆ ಎಂದು ರಾಯಚೂರಿನ ಯುವ ಸಾಹಿತಿ ನಾನಾಗೌಡ ಮಾಲಿ ಪಾಟೀಲ್ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡರು.


ದಾವಣಗೆರೆಯ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ನಿನ್ನೆ ನಗರದ ಪ್ರವಾಸಿ ಮಂದಿರ ರಸ್ತೆಯಲ್ಲಿರುವ ರೋಟರಿ ಬಾಲಭವನದಲ್ಲಿ ?ಕಾವ್ಯ ಕುಂಚ? ಕವನ ಸಂಕಲನ ಮತ್ತು ?ಕುಂಚ ಕೈಪಿಡಿ? ಲೇಖನಗಳ ಸಂಗ್ರಹದ ಪುಸ್ತಕ ಲೋಕಾರ್ಪಣೆ ಮಾಡಿ ಮಾತನಾಡಿದರು. ದಕ್ಷಿಣ ಕನ್ನಡ ಜಿಲ್ಲೆಯ ಮುಡುಬಿದಿರೆಯ ಹಿರಿಯ ಸಾಹಿತಿ, ಕವಿ ಡಾ. ರಾಮಕೃಷ್ಣ ಶಿರೂರು ಮುಖ್ಯ ಅತಿಥಿಗಳಾಗಿ ವೇದಿಕೆಯಲ್ಲಿ ಉಪಸ್ಥಿತರಿದ್ದು ಕನ್ನಡ ಸಂಸ್ಕೃತಿ ಇಲಾಖೆ, ಶಿಕ್ಷಣ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತು ಮಾಡದೇ ಇರುವ ಹೊಸ, ಹೊಸ ಪರಿಕಲ್ಪನೆಯೊಂದರ ಕಲೆ, ಸಾಹಿತ್ಯ, ಸಂಗೀತ, ಶಿಕ್ಷಣಗಳ ನಿರಂತರ ಕಠಿಣ ಪರಿಶ್ರಮದಿಂದ ಸ್ವತಂತ್ರವಾಗಿ ವೈಭವಪೂರ್ಣವಾಗಿ ಕಳೆದ ಮೂರುವರೆ ದಶಕಗಳಿಂದ ನಡೆಸುತ್ತಿರುವ ಕರ್ನಾಟಕದ ಏಕೈಕ ಸಂಸ್ಥೆ ದಾವಣಗೆರೆಯ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಇದರ ರೂವಾರಿ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ್‌ಶೆಣೈಯವರು. ಪ್ರಾಥಮಿಕ ಶಿಕ್ಷಣಕ್ಕೆ ಸೀಮಿತವಾದರೂ ಕಲೆ, ಸಾಹಿತ್ಯ, ಯಕ್ಷಗಾನ, ಶಿಕ್ಷಣದ ಪರಿಜ್ಞಾನದೊಂದಿಗೆ ಬೆಣ್ಣೆನಗರಿ ದಾವಣಗೆರೆಯಲ್ಲಿ ವೈಭವೀಕರಿಸುವುದು ಶ್ಲಾಘನೀಯ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಕಾವ್ಯ ಕುಂಚ ಕವನ ಸಂಕಲನದ ಪ್ರಧಾನ ಸಂಪಾದಕರಾದ ಸಾಲಿಗ್ರಾಮ ಗಣೇಶ್ ಶೆಣೈಯವರು ಮಾತನಾಡಿ, ಸಂಘಟನೆಗಳು ನಿರಂತರ ಮುಂದುವರಿಯಬೇಕಾದರೆ ಕರ್ತವ್ಯನಿಷ್ಠೆ, ಸಮಯಪ್ರಜ್ಞೆ, ಬದ್ಧತೆಗಳು ಅಗತ್ಯವಿದೆ. ಸಂಘ–ಸಂಸ್ಥೆಗಳು ಕೇವಲ ಆರಂಭಶೂರತ್ವಕ್ಕೆ ಸೀಮಿತವಾಗದೇ ಸಂಘಟಕರು ಸಾಮಾಜಿಕ ಕಾಳಜಿಯೊಂದಿಗೆ ಸಂಕುಚಿತ ಭಾವನೆಬಿಟ್ಟು ವಿಶಾಲವಾದ ಸೇವಾ ಮನೋಭಾವನೆಯೊಂದಿಗೆ ತೊಡಗಿಸಿಕೊಂಡಾಗ ಸಂಘಟನೆಗಳು ಸಬಲತೆಯಾಗುತ್ತದೆ ಎಂದರು.

ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕರಾದ ಶ್ರೀಮತಿ ಜ್ಯೋತಿ ಗಣೇಶ್‌ಶೆಣೈ, ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ವಿವಿಧ ಬಡಾವಣೆಗಳ ಶಾಖೆಗಳ ಅಧ್ಯಕ್ಷರುಗಳಾದ ಶ್ರೀಮತಿ ಪ್ರಭಾ ರವೀಂದ್ರ, ವಿ.ಕೃಷ್ಣಮೂರ್ತಿ, ರಾಜಶೇಖರ ಬೆನ್ನೂರು, ಶ್ರೀಮತಿ ಲಲತಾ ಕಲ್ಲೇಶ್, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ಉಮೇಶ್ ವೇದಿಕೆಯಲ್ಲಿ ಗೌರವ ಉಪಸ್ಥಿತರಿದ್ದರು.

ಶ್ರೀಮತಿ ಶ್ರೀಮತಿ ಚಂದ್ರಶೇಖರ ಅಡಿಗರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸಮಾರಂಭಕ್ಕೆ ಶ್ರೀಮತಿ ಪುಷ್ಪಾ ಮಂಜುನಾಥ್ ಸ್ವಾಗತಿಸಿದರು. ರಾಜ್ಯ ಮಟ್ಟದ ಕವಿಗೋಷ್ಠಿಯಲ್ಲಿ ಭಾಗವಹಿಸಿ ಕವನ ವಾಚನ ಮಾಡಿದ ವಿವಿಧ ಜಿಲ್ಲೆಗಳ ಕವಿ, ಕವಯತ್ರಿಯರಿಗೆ ಅಭಿನಂದನಾ ಪತ್ರ, ಕನ್ನಡ ತಾಯಿ ಭುವನೇಶ್ವರಿಯ ಸ್ಮರಣಿಕೆ ಹಾಗೂ ಕಾವ್ಯ ಕುಂಚ ಕವನ ಸಂಕಲನ ವಿತರಿಸಲಾಯಿತು. ಶ್ರೀಮತಿ ಶೈಲಾ ವಿನೋದ ದೇವರಾಜ್ ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಲಲಿತಾ ಕಲ್ಲೇಶ್ ವಂದಿಸಿದರು.

## ಎಂ.ಬಿ. ಸೋಮಶೇಖರ ಗೌಡರಿಗೆ ವಿದ್ಯಾನಗರ ರೋಟರಿಯಿಂದ ಶ್ರದ್ಧಾಂಜಲಿ



**ದಾವಣಗೆರೆ:** ಇತ್ತೀಚಿಗೆ ನಿಧನರಾದ ವಿದ್ಯಾನಗರ ರೋಟರಿ ಕ್ಲಬ್ ಸಂಸ್ಥಾಪಕ ಅಧ್ಯಕ್ಷ ರೋ. ಎಂ.ಬಿ. ಸೋಮಶೇಖರ ಗೌಡರು ನಮ್ಮ ಕ್ಲಬ್ ನ ಧೃವತಾರೆಯಂತಿದ್ದರು ಎಂದು ವಿದ್ಯಾನಗರ ರೋಟರಿ ಕ್ಲಬ್ ಅಧ್ಯಕ್ಷ ರೋ. ಎಸ್.ಎನ್. ಮಳವಳ್ಳಿ ತಿಳಿಸಿದರು.

ಬ್ ಾ ನ ್ ಾ ವ ಾ ರ ್ ದಾವಣಗೆರೆಯ ವಿದ್ಯಾನಗರ ರೋಟರಿ ಕ್ಲಬ್ ನಲ್ಲಿ ಆಯೋಜಿಸಿದ ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ರೊಟೇರಿಯನ್ ಗಳಾದ ಎಸ್ ಎನ್ ಮಲ್ಲಪ್ಪ, ಎಸ್ ಸಿ ಮಹಾರುದ್ರಪ್ಪ,

ಎಚ್ ಕೆ ಕಲ್ಲಪ್ಪ, ಎಚ್ ದಯಾನಂದ್ ಹಾಗೂ ಎನ್ ಬಿ ಮೃತ್ಯುಂಜಯಪ್ಪ ಮಾತನಾಡಿ ದಿವಂಗತರು 1998ರಲ್ಲಿ ವಿದ್ಯಾನಗರ ರೋಟರಿ ಕ್ಲಬ್ ಸ್ಥಾಪಿಸಿ ಅದರ ಸಂಸ್ಥಾಪಕ ಅಧ್ಯಕ್ಷರಾಗಿ ಹಲವಾರು ಸಮಾಜಮುಖಿ ಕಾರ್ಯಕ್ರಮಗಳಾದಂತಹ ವೈದ್ಯಕೀಯ ಕ್ಯಾಂಪ್ ಗಳು, ಬಡ ಹಾಗೂ ಹೆಣ್ಣು ಮಕ್ಕಳ ಪ್ರಾಥಮಿಕ ಹಾಗೂ ಮೂಲಭೂತ ವಿದ್ಯಾಭ್ಯಾಸ, ಪೋಲಿಯೋ ಲಸಿಕೆ ಕಾರ್ಯಕ್ರಮಗಳು, ಉಚಿತ ಕಣ್ಣು ಪರೀಕ್ಷೆ ಹಾಗೂ ಚಿಕಿತ್ಸಾ ಶಿಬಿರಗಳನ್ನು ನಡೆಸಿದ್ದರು ಎಂದು ಸ್ಮರಿಸಿದರು.

ಸಂಸ್ಥೆಗೆ ಸರ್ಕಾರದಿಂದ ನಿವೇಶನ ಪಡೆದು ಕೊಂಡು ಸಂಸ್ಥೆಯ ಸ್ವಂತ ಕಟ್ಟಡ ನಿರ್ಮಾಣ ಹಾಗೂ ಲೋಕಾರ್ಪಣೆಯ ತನಕ ಹಾಗೂ ಅವರ ಮಾರ್ಗದರ್ಶನದಲ್ಲಿ 2011ರಲ್ಲಿ ಕತ್ತಲೆಗೆರೆಯಲ್ಲಿ ಆಯೋಜಿಸಿದ ಬೃಹತ್ ಉಚಿತ ವೈದ್ಯಕೀಯ ತಪಾಸಣಾ ಶಿಬಿರದಲ್ಲಿ ಸುಮಾರು 3000 ಜನ ಪ್ರಯೋಜನ ಪಡೆದುಕೊಂಡ ಕುರಿತು ಹಾಗೂ ಕಳೆದ 25 ವರ್ಷಗಳಿಂದ ಸಂಸ್ಥೆಗೆ ಮಾರ್ಗದರ್ಶನ ನೀಡಿ ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ಬೆಳೆಸಿದ ಕುರಿತು ನೆನಪಿಸಿಕೊಂಡರು.

ದಿವಂಗತರ ಅಗಲಿಕೆ ಸಮಾಜಕ್ಕೆ ಹಾಗೂ ಸಂಸ್ಥೆಗೆ ತುಂಬಲಾರದ ನಷ್ಟ ಎಂದು ಸರ್ವರು ಅಭಿಪ್ರಾಯಪಟ್ಟು, ಅವರನ್ನು ಆದರ್ಶವಾಗಿಟ್ಟುಕೊಂಡು ಸಂಸ್ಥೆಯನ್ನು ಇನ್ನೂ ಹೆಚ್ಚಿನ ಮಟ್ಟಕ್ಕೆ ಬೆಳೆಸಲು ಆ ಮೂಲಕ ಅವರಿಗೆ ನಿಜ ಶ್ರದ್ಧಾಂಜಲಿ ಅರ್ಪಿಸಲು ಸರ್ವರು ಸಂಕಲ್ಪ ಮಾಡಿದರು.ಸಭೆಯಲ್ಲಿ ಇತರೆ ರೋಟೇರಿಯನ್ ಗಳಾದ ಎಮ್ ಎನ್ ಬಿಲ್ಲಳ್ಳಿ, ಎಂ.ಬಿ. ಚಂದ್ರಪ್ಪ, ಚಂದ್ರಾಚಾರ್, ಬಿ.ಎಸ್. ಪ್ರಕಾಶ್, ಸಿ.ಬಿ. ಕುಬೇರಪ್ಪ ಹಾಗೂ ಇತರರು ಭಾಗವಹಿಸಿದ್ದರು.

## ಮಂಜಮ್ಮನವರ ಸೇವೆ ಅನುಕರಣೀಯ

**ದಾವಣಗೆರೆ** : ಜಿಲ್ಲೆಯ ಸವಳಂಗ ಗ್ರಾಮದ ವಾಸಿ, ಲಿಂಗತ್ವ ಅಲ್ಪಸಂಖ್ಯಾತೆ ಮಂಜಮ್ಮನವರ ಸೇವಾಕಾರ್ಯ ಅನುಕರಣೀಯ. ಇವರು ತಾವು ಭಿಕ್ಷೆ ಬೇಡಿದ ಹಣದಲ್ಲಿ ತಮ್ಮ ಜೀವನಕ್ಕೆ ಬೇಕಾದಷ್ಟನ್ನು ಇಟ್ಟುಕೊಂಡು ಉಳಿದುದನ್ನು ಸಮಾಜಕ್ಕೆ ಮರಳಿ ನೀಡುವ ಸತ್ಕಾರ್ಯವೆಸಗುತ್ತಿರುವುದು ಶ್ಲ್ಯಾಘನೀಯ. ಇದು ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎನ್ನುವ ಸದ್ಬುದ್ಧಿ ಮತ್ತು ಶರಣ ತತ್ವದ ಕಾಯಕ ದಾಸೋಹದ ಅನುಷ್ಠಾನ. ಸರ್ಕಾರಿ ಶಾಲೆಗಳ ಒಳಿತಿಗಾಗಿ ಸಹಾಯ ಮಾಡಿರುವ ಇವರ ದಾನ ಗುಣವನ್ನು ಮೆಚ್ಚುವಂತಿದೆ. ಇಂದಿನ ಸಮಾಜದಲ್ಲಿ ಲಿಂಗತ್ವ ಅಲ್ಪಸಂಖ್ಯಾತರೆಂದರೆ ಕೀಳು ಭಾವನೆ, ನಿಂದಿಸಿ, ಮೂಗು ಮುರಿಯುವವರೇ ಹೆಚ್ಚು.ಆದರೆ ಮಂಜಮ್ಮನವರು ತಮ್ಮ ವೃತ್ತಿಗೆ ಘನತೆ ತರುವ ಕಾರ್ಯವೆಸಗುತ್ತಿದ್ದಾರೆ. ಇಂದಿನ ದಿನಮಾನಗಳಲ್ಲಿ ತಮ್ಮ ಸ್ವಂತಕ್ಕೆ ಆಸ್ತಿ ಮಾಡುವ ಶ್ರೀಮಂತರು, ಸ್ವಾರ್ಥಿಗಳು ಈ ರೀತಿಯ ದಾನದ ಗುಣವನ್ನು ಬೆಳೆಸಿಕೊಂಡು ಬಡವರ ಶಿಕ್ಷಣ ಮತ್ತು ಆರೋಗ್ಯಕ್ಕೆ ಬಳಸಿದರೆ ಸಾಮಾಜಿಕ ನ್ಯಾಯ ಮಾಡಿದಂತಾಗುತ್ತದೆ. ನಿಜವಾಗಲೂ ಇಂದಿನ ದಿನಗಳಲ್ಲಿ ಮುಚ್ಚಿ ಹೋಗುತ್ತಿರುವ ಅನೇಕ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಪಡಿಸಲು ಮುಂದಾಗುವ ಇಂತಹ ದಾನಿಗಳಿರುವುದು ಸಂತೋಷದ ಸಂಗತಿ.

ಅಲ್ಲದೆ ದೇವಸ್ಥಾನಗಳಿಗೆ ಹೆಚ್ಚಿನ ದೇಣಿಗೆ ಕೊಟ್ಟು ಊರುತುಂಬ ದೇವಾಲಯಗಳನ್ನು ನಿರ್ಮಿಸುವುದರ ಬದಲು ಇಂತಹ ಸತ್ಕಾರ್ಯಗಳನ್ನು ಮಾಡುವ ಮಂಜಮ್ಮನವರು ಮಾದರಿ. ಇವರ ಸದ್ಗುಣ, ಸತ್ಕಾರ್ಯ ನಮ್ಮೆಲ್ಲರಿಗೂ ಅನುಕರಣೀಯ.

## ಸರ್ಕಾರಿ ಶಾಲೆಗಳ ಉಳಿವಿಗೆ ಬಜೆಟ್ ನಲ್ಲಿ ವಿಶೇಷ ಪ್ಯಾಕೇಜ್ ಘೋಷಿಸಬೇಕು: ಮೊಹಮ್ಮದ್ ಜಿಕ್ರಿಯಾ



**ದಾವಣಗೆರೆ:** ದಾಖಲೆಯ ಬಜೆಟ್ ಮಂಡನೆ ಮಾಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಬಾರಿಯ ಆಯವ್ಯಯದಲ್ಲಿ ಸರ್ಕಾರಿ ಶಾಲೆಗಳ ಉಳಿವಿಗೆ ಮತ್ತು ಶ್ರೇಯೋಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುವ ಜೊತೆಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಜವಾಹರ ಬಾಲ್ ಮಂಚ್ ದಾವಣಗೆರೆ ಜಿಲ್ಲಾಧ್ಯಕ್ಷ ಮೊಹಮ್ಮದ್ ಜಿಕ್ರಿಯಾ ಮನವಿ ಮಾಡಿದ್ದಾರೆ.

ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಸಂಖ್ಯೆ ಕಡಿಮೆಯಾಗುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಅನುಕೂಲಕರ ವಾತಾವರಣ ಸೃಷ್ಟಿಸಿ, ಹೆಚ್ಚಿನ ಮಕ್ಕಳು ಶಾಲೆಗೆ ಬರುವಂತೆ ಮಾಡುವಂಥ ಕಾರ್ಯಕ್ರಮಗಳನ್ನು ರೂಪಿಸಬೇಕು. ಇತ್ತೀಚಿನ ದಿನಗಳಲ್ಲಿ ಸಾಂಕ್ರಾಮಿಕ ಮಾರಕ ಕಾಯಿಲೆಗಳಿಗೆ ಅನೇಕ ಮಕ್ಕಳು ತುತ್ತಾಗುತ್ತಿದ್ದು, ಪ್ರತಿ ಶಾಲೆಯಲ್ಲೂ ಉಚಿತ ವೈದ್ಯಕೀಯ ತಪಾಸಣೆ ಶಿಬಿರ ಹೆಚ್ಚಾಗಿ ನಡೆಸುವಂತಾಗಬೇಕು. ಮಕ್ಕಳಿಗೆ ಸರಿಯಾದ ಸಮಯಕ್ಕೆ ಪಠ್ಯಪುಸ್ತಕಗಳು ಮತ್ತು ಶೂ ದೊರಕುವಂತೆ ಕ್ರಮ ಕೈಗೊಳ್ಳಬೇಕು. ಜೊತೆಗೆ ಮೂಲಭೂತ ಸೌಲಭ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ಹೇಳಿದ್ದಾರೆ.

ಐತಿಹಾಸಿಕ ಸಿದ್ಧರಾಮೋತ್ಸವದ ಮೂಲಕ ಸಿದ್ದರಾಮಯ್ಯನವರಿಗೆ ರಾಜಕೀಯದಲ್ಲಿ ಮತ್ತಷ್ಟು ಉತ್ತುಂಗಕ್ಕೇರುವಂತೆ ಮಾಡಿದ ಮಧ್ಯಕರ್ನಾಟಕದ ಕೇಂದ್ರ ಬಿಂದು ದಾವಣಗೆರೆ ಜಿಲ್ಲೆಗೆ ವಿಶೇಷ ಕೊಡುಗೆ ನೀಡಬೇಕು. ಇದು ನೆನಪಿನಲ್ಲಿ ಉಳಿಯುವಂತಿರಬೇಕು. ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಕ್ರಮ, ವಿದ್ಯಾರ್ಥಿಗಳು, ರೈತರು, ಮಧ್ಯಮವರ್ಗದವರಿಗೆ ಹೆಚ್ಚಿನ ಅನುಕೂಲ ಕಲ್ಪಿಸಿಕೊಡಬೇಕು.

ಕನ್ನಡಿಗರ ಮೇಲೆ ಮಹಾರಾಷ್ಟ್ರದ ಮರಾಠಿಗರು ಪದೇ ಪದೇ ದೌರ್ಜನ್ಯ ಎಸಗುತ್ತಿದ್ದು, ಶಿಕ್ಷಿಸುವ ಕಠಿಣ ಕಾನೂನು ಜಾರಿಗೊಳಿಸಲು ಮುಂದಾಗಬೇಕು ಎಂದು ಮೊಹಮ್ಮದ್ ಜಿಕ್ರಿಯಾ ಅವರು ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

## ಐವತ್ತು ಕವಿಗಳ ಐನೂರು ಕವಿತೆಗಳ ಕವನಸಂಕಲನಕ್ಕೆ ಕವನಗಳ ಆಹ್ವಾನ

**ದಾವಣಗೆರೆ** : ರಾಜ್ಯಮಟ್ಟದ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಂಘಟನೆಯಾದ ಗ್ರಾಮಾಂತರ ಬುದ್ಧಿಜೀವಿಗಳ ಬಳಗವು ತನ್ನ 40 ನೇ ವಾರ್ಷಿಕೋತ್ಸವದ ಹಾಗೂ ಸುವರ್ಣ ಕರ್ನಾಟಕ ಮಹೋತ್ಸವದ ಅಂಗವಾಗಿ ಐವತ್ತು ಕವಿಗಳ ಐನೂರು ಕವನಗಳ ಕಾವ್ಯ ಸಂಗಮ ಎಂಬ ಬೃಹತ್ ಕೃತಿಯನ್ನು ಹೊರತರಲು ಯೋಜಿಸಿದೆ.

ಈ ಕೃತಿಯಲ್ಲಿ ಪ್ರತಿಯೊಬ್ಬ ಕವಿಯ ಪರಿಚಯ ಲೇಖನ ,ಭಾವಚಿತ್ರ ಹಾಗೂ ಪ್ರತಿಯೊಬ್ಬರ ಹತ್ತು ಸ್ವರಚಿತ ಕವನಗಳನ್ನು ಪ್ರಕಟಿಸಲಾಗುವುದು. ಪ್ರತಿಯೊಬ್ಬ ಕವಿಗೂ ಕಾರ್ಯಕ್ರಮದಲ್ಲಿ ಸುವರ್ಣ ಕರ್ನಾಟಕ ಕಾವ್ಯಚೇತನ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ಕಾವ್ಯ ಸಂಗಮ ಕೃತಿಯು ಪರಸ್ಪರ ಸಹಕಾರತತ್ವದಲ್ಲಿಪ್ರಕಟಗೊಳ್ಳಲಿದೆ.ಆಸಕ್ತಿಯುಳ್ಳ ಕವಿಗಳು ತಮ್ಮ ಹತ್ತು ಸ್ವರಚಿತ ಕವನಗಳನ್ನು ಮಾರ್ಚ 30 ರ ಒಳಗಾಗಿ ಡಾ.ಭೇರ್ಯ ರಾಮಕುಮಾರ್ ,ಅದ್ಯಕ್ಷರು ,ಗ್ರಾಮಾಂತರ ಬುದ್ಧಿಜೀವಿಗಳ ಬಳಗ,ಅರ್ಕೇಶ್ವರಬಡಾವಣೆ , ಕೆ.ಆರ್.ನಗರ ಟೌನ್ ಮೈಸೂರು ಜಿಲ್ಲೆ ಈ ವಿಳಾಸಕ್ಕೆ ಕಲಿಸುವುದು. ಇಮೇಲ್ ವಿಳಾಸ bheryaramakumar@gmail.com ಈ ವಿಳಾಸಕ್ಕೂ ತಮ್ಮ ಹತ್ತು ಕವನಗಳು ,ತಮ್ಮ ಪರಿಚಯ ವಿವರ ಹಾಗೂ ಭಾವಚಿತ್ರವನ್ನು ಕಳಿಸುವುದು.ಹೆಚ್ಚಿನ ವಿವರಗಳಿಗೆ ಮೊಬೈಲ್ ಸಂಖ್ಯೆ 6363172368 ಸಂಪರ್ಕಿಸುವುದು ಎಂದು ಸಂಸ್ತೆಯ ಅಧ್ಯಕ್ಷರಾದ ಡಾ.ಭೇರ್ಯ ರಾಮಕುಮಾರ್ ಕೋರಿದ್ದಾರೆ.

## ಇಂದು ಪೂರ್ವಭಾವಿ ಸಭೆ

**ಚಿತ್ರದುರ್ಗ** : ಜಿಲ್ಲಾ ಕೇಂದ್ರದಲ್ಲಿ ಮಾ. 12 ರಂದು ರೇಣುಕಾಚಾರ್ಯ ಜಯಂತಿ ಹಾಗೂ ಮಾ. 14 ರಂದು ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ಆಚರಣೆ ಸಂಬಂಧ ಮಾ. 04 ರಂದು ಪೂರ್ವಭಾವಿ ಸಭೆಯನ್ನು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ರೇಣುಕಾಚಾರ್ಯ ಜಯಂತಿ ಆಚರಣೆ ಸಂಬಂಧ ಪೂರ್ವಭಾವಿ ಸಭೆ ಮಾ. 04 ರಂದು ಬೆಳಿಗ್ಗೆ 11 ಗಂಟೆಗೆ ಹಾಗೂ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ಆಚರಣೆ ಸಂಬಂಧ ಪೂರ್ವಭಾವಿ ಸಭೆ ಅದೇ ದಿನ ಬೆಳಿಗ್ಗೆ 11.30 ಗಂಟೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆಯಲಿದೆ. ಎಲ್ಲ ಸಮಾಜದ ಮುಖಂಡರು ಸಭೆಗೆ ಹಾಜರಾಗಿ ಸಲಹೆ ಸೂಚನೆಗಳನ್ನು ನೀಡಬಹುದಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದಾರೆ.

## ನಾಟ್ಯದಿಂದ ಶಾಂತಿ, ಸಹನೆ, ನೆಮ್ಮದಿ ಪ್ರಾಪ್ತಿ: ಅಶೋಕ್ ಶರ್ಮ



**ಚಿಕ್ಕಮಗಳೂರು:** ಇಡೀ ಭರತ ಭೂಮಿಯಎಲ್ಲೇ ಆಗಲಿ ನಾಟ್ಯ ಕಲೆಗೆ ಅದ್ವಿತೀಯವಾದಗೌರವ ಪ್ರಾಪ್ತಿಯಾಗುತ್ತದೆ. ಹಾಗೆಯೇ ಶಾಂತಿ, ಸಹನೆ, ನೆಮ್ಮದಿ ಸಹ ಒಲಿದು ಬರುತ್ತದೆಎಂದು ಸಿರ್ಗಾಪುರ ಶ್ರೀ ದತ್ತಕ್ಷೇತ್ರದದತ್ತಾರಾಧಕಅಶೋಕ್ ಶರ್ಮ ಹೇಳಿದರು.

ನಗರದಕಲ್ಕಟ್ಟೆ ಪುಸ್ತಕದ ಮನೆ, ಬಿಲೀವ್ ಫಿಸಿಯೋಥೆರಪಿ ಕ್ಲಿನಿಕ್, ಶ್ರೀಕ್ಷೇತ್ರ ಬಿಂಡಿಗದೇವೀರಮ್ಮ ವ್ಯವಸ್ಥಾಪನಾ ಸಮಿತಿ, ಹಾಗೂ ಮಲ್ಲಿಗೆ ಸುಗಮ ಸಂಗೀತಟ್ರಸ್ಟ್‌ಆಶ್ರಯದಲ್ಲಿ ಶನಿವಾರ ಸಂಜೆನಗರದ ಕುವೆಂಪು ಕಲಾಮಂದಿರದಲ್ಲಿಪ್ರೇಕ್ಷಕರ ಹೃನ್ಮನ ತಣಿಸಿದ 'ಶಿವ ಶಿವ ಪರಶಿವ? ನೃತ್ಯನಮನ–5 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸನಾತನಧರ್ಮದ ನೆಲೆಯಾಗಿರುವ ಭರತ ಭೂಮಿಯಲ್ಲಿ ಬಹಳ ವಿದ್ಯೆಗಳೂ, ವೈವಿಧ್ಯಮಯ ಕಲೆಗಳೂ ಸಾಕಷ್ಟಿವೆ. ಅಂತಹ ಕಲೆಗಳಲ್ಲಿ ಸನಾತನವಾಗಿ ಶಿವನಿಂದ ಬಂದ ಕಲೆ ಎಂದರೆಅದು ನಾಟ್ಯ.ಅದಕ್ಕೆ ಶಿವತಾಂಡವ ನೃತ್ಯಎನ್ನುತ್ತೇವೆ. ನೃತ್ಯಕಲೆಯಲ್ಲಿ ಶಿವನು ಸಾಕ್ಷಾತ್ಕಾರವಾಗಿಕಲೆಯನ್ನು ರೂಢಿಸಿಕೊಂಡಿರುವ ಮಕ್ಕಳ ಜೊತೆಗಿದ್ದೇಇರುತ್ತಾನೆ. ಭರತನಾಟ್ಯ, ಯಕ್ಷಗಾನ ಕಲೆ. ಜಾನಪದ ಗೀತೆಗಳು ಅನಂತರದಲ್ಲಿ ಬಂದಿವೆ. ಸಂಗೀತವೂ ಹಾಗೆ. ಎಲ್ಲ ಕಷ್ಟಗಳನ್ನು, ನೋವನ್ನು ಮರೆಸುವ ವೈಶಿಷ್ಟ್ಯವಿರುವುದೇ ಸಂಗೀತಕ್ಕೆ.ಇಲ್ಲಿನ ಪ್ರತಿಭಾವಂತರಿಗೆ ಸಂಪೂರ್ಣಯಶಸ್ಸು ಸಿಕ್ಕಿ ಅವರ ಕಲೆ ಇಡೀರಾಜ್ಯದಲ್ಲಿ, ರಾಷ್ಟ್ರದಲ್ಲಿ ಬೆಳಗಲಿ ಎಂದುಆಶಯ ವ್ಯಕ್ತಪಡಿಸಿದರು.

ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದಕಲ್ಕಟ್ಟೆ ಪುಸ್ತಕದ ಮನೆಯ ವ್ಯವಸ್ಥಾಪಕಿರೇಖಾ ನಾಗರಾಜರಾವ್ ಕಳೆದ ಐದು ವರ್ಷಗಳಿಂದ ಈ ಕಾರ್ಯಕ್ರಮವನ್ನುಕಲ್ಕಟ್ಟೆ ಪುಸ್ತಕದ ಮನೆ ನಡೆಸಿಕೊಂಡು ಬರುತ್ತಿದೆಎಂದು ತಿಳಿಸಿದರು.

.ಎಐಟಿಕಾಲೇಜಿನ ಪ್ರಾಚಾರ್ಯ ಡಾ.ಸಿ.ಟಿ.ಜಯದೇವ್, ಮಲ್ಲಿಗೆ ಸುಧೀರ್ ಮಾತನಾಡಿದರು.ರೂಪಾ ನಾಯ್ಕ್‌ಕಾರ್ಯಕ್ರಮ ನಿರೂಪಿಸಿದರು. ಕಲ್ಕಟ್ಟೆ ಪುಸ್ತಕದ ಮಹಾಪೋಷಕರಾದಡಾ. ಜೆ.ಪಿ.ಕೃಷ್ಣೇಗೌಡ ಹಾಗೂ ಸುರೇಂದ್ರ ಶೆಟ್ಟಿ, ಬಿಲೀವ್ ಫಿಸಿಯೋ ಥೆರಪಿಯ ಸಲಹೆಗಾರಜೆ. ರಮೇಶ್, ರಾಕೇಶ್ ಹಿರೇಮಗಳೂರು, ಬಾಳೆಹೊನ್ನೂರು ನಾಗರಾಜಭಟ್‌ಹಾಗೂ ನಾಗರಾಜರಾವ್‌ಕಲ್ಕಟ್ಟೆಇದ್ದರು.

ಎ ಚ್ . ಎ ಂ . ನಾ ಗ ರಾ ಜ ರಾ ವ್ ಕ ಲ್ಕ ಟ್ಟೆ ವಿರಚಿತಗಾಯಕ ದಿವಂಗತ ಜಿ.ವಿ.ಅತ್ರಿ ಸಂಗೀತ ಸಂಯೋಜಿಸಿರುವ ಭಕ್ತಿಗೀತೆಗಳನ್ನು ಆಧರಿಸಿ ಶಿವನಿಗೆ ಶರಣು ಸಮರ್ಪಣೆ ಮಾಡಿದ ಈ ಕಾರ್ಯಕ್ರಮದಲ್ಲಿ ನಗರದ ಶ್ರೀ ಶ್ರೀಕಂಠೇಶ್ವರ ಕಲಾಮಂದಿರ ಹಾಗೂ ಶೃಂಗೇರಿಯ ನಾಟ್ಯ ವೈಭವ ನೃತ್ಯಅಕ ಾಡೆ ಮಿ ಯ ು ಕ ಲಾ ವಿ ದ ರು ವಿ ದು ಷಿ ಯ ು ರಾ ದ ಸುಮನಾ ರಾಮಚಂದ್ರ ಹಾಗೂ ಶೃಂಗೇರಿಯ ಸುನೀತಾ ನವೀನ್‌ಗೌಡ ನಿರ್ದೇಶನದಲ್ಲಿ ಸುಮಾರುಎರಡು ಗಂಟೆಗಳಿಗೂ ಹೆಚ್ಚು ಕಾಲ ಸಂಸ್ಕೃತಿ ಪ್ರಿಯರನ್ನು ರಂಜಿಸಿದರು.

ಒಟ್ಟುಒಂಭತ್ತುಶಿವಕ್ಷೇತ್ರಗಳ ಮಹಿ ಮೆ ಯ ು ನ್ನು ಕೊ ಂ ಡಾ ಡು ವ ಗೀ ತೆ ಗ ಳಿ ಗೆ ಅತ್ಯುತ್ತಮವಾಗಿನೃತ್ಯಗಳನ್ನು ಪ್ರದರ್ಶಿಸಿದರು. ಆರಂಭದಕಾಶಿ ಕ್ಷೇತ್ರಕುರಿತಗೀತೆಗೆ ನೃತ್ಯ ನಿರ್ದೇಶಕಿಸುನೀತಾ ಸ್ವತಃ ವಿದ್ಯಾರ್ಥಿನಿಯರಜೊತೆ ನೃತ್ಯ ಪ್ರದರ್ಶನ ನೀಡಿರುವುದು ಗಮನ ಸೆಳೆಯಿತು.ನೃತ್ಯ ಸರಣಿಗೆ ಗೀತೆಗಳಲ್ಲಿದ್ದ ಜಿ.ವಿ.ಅತ್ರಿ, ಬಿ.ಆರ್.ಛಾಯಾ, ಎಲ್.ಎನ್.ಶಾಸ್ತ್ರಿ, ಅರ್ಚನಾಉಡುಪಅವರಧ್ವನಿ ಮಾಧುರ್ಯ ಮುದ ನೀಡಿತು.

**ನಮ್ಮಿಂದ ಭೂಮಿ ಬಂಜೆ: ಕೃಷಿಕ ಅಶೋಕ್ ವಿಷಾದ**

ರಾಸಾಯನಿಕ ಕೃಷಿಗೆ ಮಾರು ಹೋಗಿ ರಾಸಾಯನಿಕವನ್ನು ಭೂಮಿತಾಯಿಗೆ ಸುರಿದು ನಾವಿಂದು ಭೂಮಿಯನ್ನು ಬಂಜೆ ಮಾಡುತ್ತಿದ್ದೇವೆ. ಕಲ್ಕಟ್ಟೆಕನ್ನಡಿಗ ಪ್ರಶಸ್ತಿಗೆ ಭಾಜನರಾದ ಚೌಳಹಿರಿಯೂರಿನ ಪ್ರಗತಿಪರ ಕೃಷಿಕ ಜಿ.ಅಶೋಕ್‌ಕುಮಾರ್ ವಿಷಾದಿಸಿದ್ದು ಹೀಗೆ.

.ಇಮಾಮ್ ಸಾಬಿ–ಗೋಕುಲಾಷ್ಟಮಿ ಸಂಬಂಧ ಕಲ್ಕಟ್ಟೆಕನ್ನಡಿಗ ಪ್ರಶಸ್ತಿ ಸ್ವೀಕರಿಸಿದ ಇನ್ನೋರ್ವರಾದ ವೃತ್ತಿ ಮಾರ್ಗದರ್ಶಕ, ಪಿ.ಯು.ಮಂಡಳಿಯ ಸಹಾಯಕ ನಿ ದ ೇ ರ್ ಶ ಕ ಜಿ ಯ ಾ ಉ ಲ್ಲಾ ಖಾ ನ್ ಮಾತನಾಡಿ, ಇಮಾಮ್ ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧಎನ್ನುವ ಗಾದೆಇರುವಂತೆಇದೀಗ ರಂಜಾನ್ ಉಪವಾಸ ಆರಂಭವಾಗಲಿರುವಾಗಲೇ ನನಗೆ 'ಶಿವ ಶಿವ ಪರಶಿವ? ಹೆಸರಿನಲ್ಲಿ ನಡೆಯುತ್ತಿರುವಕಾರ್ಯಕ್ರಮದಲ್ಲಿತಾವುಪ್ರಶಸ್ತಿಗೆ ಭಾಜನವಾಗಿರುವುದು ಸಂತಸತಂದಿದೆ. ಬಾಲ್ಯದಿಂದಲೂ ಶಿವನೆಂದರೆ ತಮಗೆಬಹಳ ಆಕರ್ಷಣೆ.ಸುಂದರ ಹಾಗೂ ಉತ್ತಮ ಅಂಗಸೌಷ್ಠವ ಹೊಂದಿ ಬ ಲ ಶಾ ಲಿ ಯ ಾ ದ ವ ನ ೆ ಂ ದ ರ ೆ ಅ ದ ು ಶಿವ. ಅದರಜೊತೆಗೆ ಹಿಂದೆತಾವು ವಿದ್ಯಾರ್ಥಿಗಳಿಗೆ ಪರಿಸರದ ಬೋಧನೆ ಮಾಡುತ್ತಿದ್ದಾಗಉದಾಹರಣೆ ನೀಡುತ್ತಿದ್ದುದೇ ಶಿವನನ್ನು.ಶಿರದ ಮೇಲೆ ಗಂಗೆ ಇದ್ದಾಳೆ. ವನ್ಯಜೀವಿ ಸಂರಕ್ಷಣೆಗೆ ಪೂರಕವಾಗಿ ನಾಗರ ಹಾವುಆತನಲ್ಲಿದೆ.ಪ್ರತಿಯೊಂದು ವಿಚಾರದಲ್ಲೂ ಪರಿಸರ ಸಂರಕ್ಷಣೆಗೆ ಪೂರಕವಾಗಿದ್ದಾನೆಎನ್ನುವ ಬಗ್ಗೆ ವಿವರಣೆ ನೀಡುತ್ತಿದ್ದೆಎಂದು ನೆನಪಿಸಿಕೊಂಡರು.

# ನಿಧನ ಸುದ್ದಿಗಳು

### ಐಗೂರು ಕೆ.ಎಸ್. ಬಸಮ್ಮ ನಿಧನ

**ಬೆಂಗಳೂರು** : ಸಿಟಿ, ಗಂಗೇನಹಳ್ಳಿ, ಗಂಗಾನಗರ ಬಡಾವಣೆ ವಾಸಿ ಕೆ.ಆರ್. ಶಿವಮೂರ್ತಿ ಅವರ ಧರ್ಮಪತ್ನಿಕೆ.ಎಸ್. ಬಸಮ್ಮ ಇವರು ದಿನಾಂಕ : 02.03.2025ರ ಭಾನುವಾರ ಮಧ್ಯಾಹ್ನ 2.45ಕ್ಕೆ ನಿಧನರಾದರು. ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 03.03.2025ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

### ಶ್ರೀಮತಿ ಸಾವಿತ್ರಮ್ಮ ಭೀಮದಾಸ್ ಕೋಲ್ಕುಂಟೆ ನಿಧನ

**ದಾವಣಗೆರೆ** : ಸಿಟಿ, 117 'ಎ' ಬ್ಲಾಕ್, 8ನೇ ಕ್ರಾಸ್, ದೇವರಾಜ ಅರಸು * ಬಡಾವಣೆ ವಾಸಿ ದಿ. ಭೀಮದಾಸ್ ಕೆ.ಪಿ. ಅವರ ಧರ್ಮಪತ್ನಿ ಶ್ರೀಮತಿ ಸಾವಿತ್ರಮ್ಮ ಇವರು ದಿನಾಂಕ : 01.03.2025ರ ಶನಿವಾರ ಸಂಜೆ ದೈವಾಧೀನರಾದರು. ಮೃತರಿಗೆ 91 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ಮೃತರ ಸ್ವಗೃಹದಲ್ಲಿ 9 ಗಂಟೆಯ ವರೆಗೆ ಇರಿಸಲಾಗುವುದು ಅಂತ್ಯಕ್ರಿಯೆಯನ್ನು ದಿನಾಂಕ : 03.03.2025ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಯಿತು.

# ಉತ್ತಮ ಮೌಲ್ಯ ಶಿಕ್ಷಣದ ಗುರಿ



**ಚಿತ್ರದುರ್ಗ:** ಮಾನವನಲ್ಲಿ ಉತ್ತಮವಾದ ಗುಣ, ಮೌಲ್ಯಗಳನ್ನು ಬೆಳಸುವುದೇ ನಿಜವಾದ ಶಿಕ್ಷಣವಾಗಿದೆ ಎಂದು ದಾವಣಗೆರೆಯ ವಿರಕ್ತಮಠದ ಡಾ. ಶ್ರೀ ಬಸವಪ್ರಭು ಸ್ವಾಮೀಜಿ ತಿಳಿಸಿದರು.

ಪಿಳ್ಳೇಕೆರೆನಹಳ್ಳಿಯಲ್ಲಿನ ಬಾಪೂಜಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ದಾವಣಗೆರೆ ವಿವಿ ವತಿಯಿಂದ ಹಮ್ಮಿಕೊಂಡಿದ್ದ ಹತ್ತು ಬೆಳದಿಂಗಳು ವಿಶೇಷ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು. ಮಾನವ ಬಾಹ್ಯಕ್ಕಿಂತ, ಆಂತರಿಕವಾಗಿ ಸುಂದರವಾಗಿ ಕಾಣುವಂತಾಗಬೇಕಿದೆ. ಇದು ಶಾಶ್ವತ ಸೌಂದರ್ಯ. ಇದನ್ನು ಪಡೆದವರು ಜೀವನ ಪೂರ್ತಿ ಸುಂದರವಾಗಿರುತ್ತಾರೆ. ಗುಣ-ಸದ್ಗುಣ ಸೇರಿ ಸೌಂದರ್ಯ ಆಗಲಿದೆ. ಇಂದಿನ ದಿನಮಾನದಲ್ಲಿ ವಿದ್ಯಾವಂತರೇ ತಪ್ಪುಗಳನ್ನು ಮಾಡುತ್ತಿದ್ದಾರೆ. ತಮ್ಮ ಪಾಲಕರನ್ನು ಮನೆಯಿಂದ ವೃದ್ಧಾಶ್ರಮಕ್ಕೆ ಕಳುಹಿಸುತ್ತಿದ್ದಾರೆ. ವಿದ್ಯಾವಂತರ ರಕ್ತ ಸಂಬಂಧಕ್ಕಿಂತ ಹಣದ ಸಂಭಂಧಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಿದ್ದಾರೆ. ಮಾನವರನ್ನು ಕೀಳಾಗಿ ಕಾಣುತ್ತಿದ್ದಾರೆ. ಹಣಕ್ಕೆ ಹೆಚ್ಚಿನ ಬೆಲೆಯನ್ನು ನೀಡುತ್ತಿದ್ದಾರೆ ಎಂದು ಹೇಳಿದರು.

ಮಾನವನಲ್ಲಿ ಗುಣ ಹಾಗೂ ಮೌಲ್ಯಗಳನ್ನು ಬೆಳೆಸುವಲ್ಲಿ ಶಿಕ್ಷಣ ಹೆಚ್ಚಿನ ಪಾತ್ರವನ್ನು ವಹಿಸುತ್ತದೆ. ನಿಜವಾದ ಶಿಕ್ಷಣ ಎಂದರೆ ಮಾನವ ಜೀವನವನ್ನು ಉತ್ತಮ ಗೊಳಿಸುವುದು ಆಗಿದೆ. ಶಿಕ್ಷಣವನ್ನು ಪಡೆಯುವುದರಿಂದ ಉತ್ತಮವಾದ ಜೀವನವನ್ನು ಪಡೆಯಲು ಸಾಧ್ಯವಿದೆ. ಪಾಲಕರಿಗೆ ಮೋಸ ಮಾಡಬೇಡಿ, ಸುಳ್ಳನ್ನು ಹೇಳಬೇಡಿ. ತಂದೆ-ತಾಯಿ, ಗುರು-ಹಿರಿಯರನ್ನು ಗೌರವಿಸಿ ಎಂದು ತಿಳಿಸಿದರು. ಮಾನವ ಶಿಕ್ಷಣವನ್ನು ಪಡೆದರೆ ಸಮಾಜದಲ್ಲಿ ಗೌರವ ಸಿಗುತ್ತದೆ. ಇಲ್ಲವಾದಲ್ಲಿ ರಾಕ್ಷಸನಾಗುತ್ತಾನೆ. ಬದುಕಿನಲ್ಲಿ ಕಾಯಕನಿಷ್ಠೆ ರೂಢಿಸಿಕೊಳ್ಳಿ, ಸಮಯಕ್ಕೆ ಹೆಚ್ಚಿನ ಮಹತ್ವ ನೀಡಿ. ಅದರ ಸದುಪಯೋಗ ಮಾಡಿಕೊಳ್ಳಿ, 25 ವರ್ಷ ನೀವು ಕಷ್ಟಪಟ್ಟರೆ 75 ವರ್ಷ ನೆಮ್ಮದಿ ಜೀವನ ನಡೆಸಬಹುದು ಎಂದರು.

ಸಮಾರಂಭ ಉದ್ಘಾಟಿಸಿದ ಕರ್ನಾಟಕ ರಾಜ್ಯ ಮುಕ್ತ ವಿವಿ ಡೀನ್ ಪ್ರೊ.ಲಕ್ಷ್ಮೀ ಮಾತನಾಡಿ, ಸಧೃಡವಾದ ಸಮಾಜವನ್ನು ನಿರ್ಮಾಣ ಮಾಡಲು ಶಿಕ್ಷಣದಿಂದ ಮಾತ್ರ ಸಾಧ್ಯ. ಶಿಕ್ಷಕರಾದವರು ನಾಲ್ಕು ಗೋಡೆಗಳ ಮಧ್ಯದಲ್ಲಿ ಗುಣಮಟ್ಟದ ಬೋಧನೆ ಮೂಲಕ ದೇಶದ ಭವಿಷ್ಯ ರೂಪಿಸುವ ನಿರ್ಮಾತೃರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಎಂ.ವಿರೇಶ್ ಮಾತನಾಡಿ, ಸಮಾಜವನ್ನು ತಿದ್ದುವ ಕಾರ್ಯವನ್ನು ಗುರುಳು ಮಾಡುತ್ತಾರೆ ಎಂದರು.

ಎಚ್.ಎನ್.ಶಿವಕುಮಾರ್ ಅವರ ಕೈ ಬರಹದ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಅತಿ ಹೆಚ್ಚು ಅಂಕ ಪಡೆದ ಬಿ.ಇಡಿ ಪ್ರಶಿಕ್ಷಣಾರ್ಥಿಗಳನ್ನು ಸನ್ಮಾನಿಸಲಾಯಿತು. ದಾವಣಗೆರೆ ವಿವಿಯ ಮುಖ್ಯಸ್ಥ ಡಾ.ವೆಂಕಟೇಶ್, ಡಾ.ಆಶೋಕ ಕುಮಾರ್ ವಿ.ಪಾಳೇದ, ರಾಧಿಕಾ, ಪ್ರೊ.ಜಯಲಕ್ಷ್ಮೀ ಇದ್ದರು.

## ಗುರುರುದ್ರಸ್ವಾಮಿ ಕಲ್ಮಠದಲ್ಲಿ ಶಿವರಾತ್ರಿ ಪೂಜಾ ಕಾರ್ಯಕ್ರಮ

**ನ್ಯಾಮತಿ:** ಚಿನ್ನಿಕಟ್ಟೆ ಶ್ರೀ ಗುರುರುದ್ರಸ್ವಾಮಿ ಕಲ್ಮಠ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಅಂಗವಾಗಿ ಜಾಗರಣೆ, ಮಹಾರುದ್ರಾಭಿಷೇಕ ಮತ್ತು ಧರ್ಮಸಭೆ ನಡೆಯಲಿದೆ ಎಂದು ಶ್ರೀ ಗುರುರುದ್ರಸ್ವಾಮಿ ಕಲ್ಮಠ ದೇವಸ್ಥಾನದ ಕಾರ್ಯದರ್ಶಿ ಪ್ರದೀಪ್ ಇಂಜಿನಿಯರ್ ತಿಳಿಸಿದ್ದಾರೆ. ನ್ಯಾಮತಿ ತಾಲೂಕು ಚಿನ್ನಿಕಟ್ಟೆ ಶ್ರೀ ಗುರುರುದ್ರಸ್ವಾಮಿ ಕಲ್ಮಠ ದೇವಸ್ಥಾನದ ಗುರುಗಳಾದ ಶ್ರೀ ನಿರಂಜನ ಸ್ವಾಮೀಜಿ ಇವರ ನೇತೃತ್ವದಲ್ಲಿ ಎಲ್ಲಾ ಪೂಜಾ ಕಾರ್ಯಗಳು ನೆರವೇರಲಿವೆ.ಫೆ.26ನೇ ಬುಧವಾರ ರಾತ್ರಿ ಜಾಗರಣೆ ಹಾಗೂ 27ನೇ ಗುರುವಾರ 18ಏ ವರ್ಷದ ಮಹಾಶಿವರಾತ್ರಿ ಅಂಗವಾಗಿ ಬೆಳಿಗ್ಗೆ ಶ್ರೀ ಗುರುರುದ್ರಸ್ವಾಮಿ ಮತ್ತು ಅನ್ನದಾನಯ್ಯ ಕರ್ತೃಗದ್ದುಗೆಗಳಿಗೆ ಮಹಾರುದ್ರಾಭಿಷೇಕದ ವಿಶೇಷ ಪೂಜೆ ಮತ್ತು ಧರ್ಮಸಭೆ ಜರುಗಲಿದೆ ನಂತರ ಅನ್ನಸಂತರ್ಪಣೆ ಇರುತ್ತದೆ ಎಂದರು.ಸೊರಭ ತಾಲೂಕು ಜಡೆ ಹಿರೇಮಠದ ಶ್ರೀ ಅಮರೇಶ್ವರ ಶಿವಾಚಾರ್ಯ ಸ್ವಾಮೀಜಿ, ಸುರಬ ತಾಲೂಕು ಮೂಡಿ ಶ್ರೀ ಶಿವಲಿಂಗೇಶ್ವರ ಮಠದ ಶ್ರೀ ಸದಾಶಿವ ಸ್ವಾಮೀಜಿ ಹಾಗೂ ತೀರ್ಥಹಳ್ಳಿ ತಾಲೂಕು ಕೊಣಂದೂರು ಬೃಹನ್ಮಠದ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಇವರು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಚಿನ್ನಿಕಟ್ಟೆ ಶಾಲೆಯಲ್ಲಿ 2024-25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.ಶಿವಮೊಗ್ಗ ಶ್ರೀ ನರೇಂದ್ರ ಗುರೂಜಿ, ಚಿನ್ನಿಕಟ್ಟೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಸಿ.ಎಂ.ಲಕ್ಷ್ಮೀ ಮುಖ್ಯ ಅತಿಥಿಳಾಗಿ ಭಾಗವಹಿಸಲಿದ್ದು ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಮಹಾಶಿವರಾತ್ರಿ ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸ್ವಾಮಿಯ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ಪ್ರದೀಪ್ ಇಂಜಿನಿಯರ್ ಕೋರಿದ್ದಾರೆ.

## ಸಮಾಜ ಸೇವೆಯಿಂದ ನೆಮ್ಮದಿ ಸಾಧ್ಯ

**ರಿಪ್ಪನ್‌ಪೇಟೆ:** ಸಮಾಜ ಸೇವೆ ಯಾವುದೇ ಸಮಾಜದಲ್ಲಿ ಸೇರುವಂತಹ ಸಾಮಾಜಿಕ ಸೇವೆಯಾಗಿದೆ.ಇದು ನೆಮ್ಮದಿಯನ್ನು ನೀಡುತ್ತದೆ.ಸಮಾಜ ಸೇವೆಯು ಸಮಾಜದಲ್ಲಿ ನಾನಾ ಅವಶ್ಯಕತೆಗಳನ್ನು ಪೂರೈಸಲು. ಕಷ್ಟದಲ್ಲಿರುವವರಿಗೆ ಸಹಾಯ ಮಾಡಲು ಮತ್ತು ಸಮಾನ ಮನೋಭಾವವನ್ನು ಉತ್ತಮಗೊಳಿಸಲು ಬಳಸಲಾಗುತ್ತದೆ ಎಂದು ಸೀನಿಯರ್ ಚೇಂಬರ್ ಇಂಟರ್ನ್ಯಾಷನಲ್ ರಾಷ್ಟ್ರ ಆಧ್ಯಕ್ಷ ಚಿತ್ರಕುಮಾರ್ ಹೇಳಿದರು.ಪಟ್ಟಣದ ಸತ್ಕಾರ ಭವನದಲ್ಲಿ ಆಯೋಜಿಸಲಗಿದ್ದ ಸೀನಿಯರ್ ಚೇಂಬರ್ ಇಂಟರ್ನ್ಯಾಷನಲ್ ರಿಪ್ಪನ್‌ಪೇಟೆ ನೂತನ ಘಟಕದ ಉದ್ಘಾಟನಾ ಕಾರ್ಯಕ್ರಮವನ್ನು ನೇರವೇರಿಸಿ ಮಾತನಾಡಿ ಸಮಾಜ ಸೇವೆ ಜನರನ್ನು ಒಟ್ಟುಗೂಡವ ಮೂಲಕ ಸಮಾಜದಲ್ಲಿ ಏಕತೆಯನ್ನು ಸ್ಥಾಪಿಸಲು ಸಾಧ್ಯವೆಂದರು.ಸೀನಿಯರ್ ಚೇಂಬರ್ ಇಂಟರ್ನ್ಯಾಷನಲ್ ರಿಪ್ಪನ್‌ಪೇಟೆ ನೂತನ ಘಟಕದ ನೂತನ ಅಧ್ಯಕ್ಷ ಪಿಯೂಸ್ ರೋಡ್ರಿಗಸ್ ಅಧ್ಯಕ್ಷತೆ ವಹಿಸಿದ್ದರು.ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನಿವೃತ್ತ ಮುಖ್ಯ ಪ್ರಧಾನ ವ್ಯವಸ್ಥಾಪಕ ಎಂ.ಆರ್.ಜಯೇಶ್ ಇಂಟರ್ನ್ಯಾಷನಲ್ ಉಪಾಧ್ಯಕ್ಷೆ ಪುಷ್ಪ ಎಸ್.ಶೆಟ್ಟಿ,ಲೇಖನ ನಾಯಕ್, ಬಿ.ಎಸ್.ಎನ್. ಎಲ್.ಶ್ರೀಧರ ಇನ್ನಿತರ ಹಲವರು ಪಾಲ್ಗೊಂಡಿದ್ದರು.

## ಅಂಬೇಡ್ಕರ್ ಮತ್ತು ಸಂವಿಧಾನದ ಕುರಿತು ತಿಳಿಯಬೇಕು

**ಶಿವಮೊಗ್ಗ:** ಇತ್ತೀಚಿನ ದಿನಗಳಲ್ಲಿ ಸಂವಿಧಾನದ ಕುರಿತು ವ್ಯತಿರಿಕ್ತವಾಗಿ ನಡೆದುಕೊಳ್ಳಲಾಗುತ್ತಿದ್ದು, ಇಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳು, ಯುವ ಜನತೆ ಸಂವಿಧಾನ ಹಾಗೂ ಅಂಬೇಡ್ಕರ್ ಬಗ್ಗೆ ತಿಳಿದುಕೊಳ್ಳುವುದು ಮುಖ್ಯವಾಗಿದೆ ಎಂದು ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಅನಿಲ್ ಕುಮಾರ್ ಭೂಮರಡ್ಡಿ ಹೇಳಿದರು.ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸೋಮವಾರ ನಗರದ ಕುವೆಂಪು ರಂಗಮಂದಿರಲ್ಲಿ ಆಯೋಜಿಸಿದ್ದ "ಅಂಬೇಡ್ಕರ್ ಓದು" ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ಇತ್ತೀಚಿನ ದಿನಗಳಲ್ಲಿ ಸಮಾಜದ ವ್ಯವಸ್ಥೆಯು ಕವಲು ಒಡೆದ ದಾರಿಯಾಗಿದೆ. ಈ ಸಮಯದಲ್ಲಿ ಅಂಬೇಡ್ಕರ್ ಕುರಿತಾದ ಇಂತಹ ಅರ್ಥಪೂರ್ಣ ಕಾರ್ಯಕ್ರಮಗಳು ರಾಜ್ಯಾದ್ಯಂತ ವರ್ಷವಿಡಿ ನಡೆಯಬೇಕು. ಆ ಮೂಲಕ ಸಂವಿಧಾನದ ಪರಿಕಲ್ಪನೆ ಎಲ್ಲರಿಗೂ ಅರ್ಥವಾಗಬೇಕು ಎಂದರು.ಗಣರಾಜ್ಯೋತ್ಸವ ದಿನವು ದೇಶಕ್ಕೆ ಮಹೋನ್ನತವಾಗಿದೆ. ಯಾಕೆಂದರೆ ಸಂವಿಧಾನವನ್ನು ಕೂಡ ಅದೇ ದಿವಸ ಸಮರ್ಪಿಸಲಾಗಿದೆ. ನಮ್ಮ ದೇಶಕ್ಕೆ ಸಂವಿಧಾನವನ್ನು ಸಿದ್ದಪಡಿಸಲು ಅಂಬೇಡ್ಕರ್ ಒಳಗೊಂಡಂತೆ ಅನೇಕ ಮಹಾನೀಯರು ಹಲವು ದೇಶಗಳನ್ನು ಸುತ್ತಿ ಅಲ್ಲಿನ ಸಂವಿಧಾನವನ್ನು ಅಧ್ಯಯನ ಮಾಡಿ ಅದರಿಂದ ಅನೇಕ ಮಾಹಿತಿ ಹೆಕ್ಕಿ ತೆಗೆದು ಈ ದೇಶಕ್ಕೆ ಬೃಹತ್ ಸಂವಿಧಾನ ಕೊಟ್ಟಿದ್ದಾರೆ ಎಂದು ತಿಳಿಸಿದರು.ನಮ್ಮೆಲ್ಲರ ಬದುಕಿನ ಅಸ್ತಿತ್ವ ಸಂವಿಧಾನದ ಅಡಿಯಲ್ಲಿದೆ. ಈ ನಮ್ಮ ಸಂವಿಧಾನದಲ್ಲಿ ಶರಣರು, ತುಳಿತಕ್ಕೆ ಒಳಗಾದವರ ಸಮಾನತೆಯ ಆಶಯ ಇದೆ. ಆ ದಿಸೆಯಲ್ಲಿ ಪ್ರತಿಯೊಬ್ಬರು ಸಂವಿಧಾನವನ್ನು ಅರಿತುಕೊಳ್ಳಬೇಕು. ಅದರ ಗಂಭೀರತೆ ತಿಳಿಯಬೇಕು. ಈ ಮೂಲಕ ನಾವೆಲ್ಲ ದೇಶವನ್ನು ಮುನ್ನಡೆಸಬೇಕು. ಇದನ್ನು ಮರೆತರೆ ಸಮಾಜದಲ್ಲಾಗುವ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದರು.ಕುವೆಂಪು ವಿಶ್ವವಿದ್ಯಾಲಯದ ಸಂಶೋಧನಾರ್ಥಿ ಎಂ.ಸಂಪತ್‌ಕುಮಾರ್ ವಿಶೇಷ ಉಪನ್ಯಾಸ ನೀಡಿ, "ಅಂಬೇಡ್ಕರ್ ಓದು" ಎನ್ನುವುದು ಅವರ ತತ್ವ, ಆದರ್ಶಗಳ ಮೂಲಕ ಅರ್ಥೈಸಿಕೊಳ್ಳಬೇಕೆಂದರು.

# 12ನೇ ಶತಮಾನದಲ್ಲಿ ವಚನಕಾರರು ಕಾಯಕ ಸಿದ್ಧಾಂತ ಮತ್ತು ಮಾನವೀಯ ಮೌಲ್ಯಗಳನ್ನು ಸಮಾಜಕ್ಕೆ ನೀಡಿದ್ದಾರೆ



**ಜಗಳೂರು:** 12ನೇ ಶತಮಾನದಲ್ಲಿ ವಚನಕಾರರು ಕಾಯಕ ಸಿದ್ಧಾಂತ ಮತ್ತು ಮಾನವೀಯ ಮೌಲ್ಯಗಳನ್ನು ಸಮಾಜಕ್ಕೆ ನೀಡಿದ್ದಾರೆ ಎಂದು ಶರಣ ಸಾಹಿತ್ಯ ಪರಿಷತ್ತು ಜಿಲ್ಲಾ ಪ್ರಧಾನಕಾರ್ಯದರ್ಶಿ ಬಿ.ಎಂ.ವಿಶ್ವೇಶ್ವರಯ್ಯ ಹೇಳಿದರು.

ಪಟ್ಟಣದ ವಾಲ್ಮೀಕಿ ಭವನದಲ್ಲಿ ತಾಲ್ಲೂಕು ಕಸಾಪ ಮತ್ತು ಸಮಾಜಕಲ್ಯಾಣ ಮತ್ತು ಪ.ವರ್ಗಗಳ ಕಲ್ಯಾಣ ಇಲಾಖೆ,ಬಿಸಿಎಂ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ'ವಚನಕಾರರ ಜೀವನ ಸಂದೇಶ' ಕುರಿತುಅವರು ಉಪನ್ಯಾಸ ನೀಡಿದರರು.

ಪ್ರಪಂಚದ ಭಾಷೆಗಳಲ್ಲಿ ಕನ್ನಡ ಭಾಷೆ ಶ್ರೇಷ್ಠ ಭಾಷೆ,ಕೆಲ ಭಾಷೆಗಳಿಗೆ ಲಿಪಿಗಳಿಲ್ಲ,ಲಿಪಿ ಹೊಂದಿದ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮದಾಗಬೇಕು ಎಂದರು.

ಬಸವಣ್ಣನವರು 8 ನೇ ವರ್ಷದ ಅಪ್ರಾಪ್ತ ವಯಸ್ಸಿನಲ್ಲಿ ದಾರ್ಶನಿಕನಾಗಿ ಮನೆಬಿಟ್ಟು ಹೊರನಡೆದು ಧಾರ್ಮಿಕ ಸಮಾನತೆ ಸಾರಿದರು.ಅನುಭವಮಂಟಪದಲ್ಲಿ ಎಲ್ಲಾ ವರ್ಗದ,ಮಹಿಳೆಯರು,ಪುರುಷ ವಚನಕಾರರಿಗೆ ಸಮಾನ ಅವಕಾಶ,ಸ್ಥಾನಮಾನ ಕಲ್ಪಿಸಿದರು.ಅಂಬೇಡ್ಕರ್ ಅವರ ಸಂವಿಧಾನದ ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರತಿಬಿಂಬವಾಗಿತ್ತು ಎಂದು ತಿಳಿಸಿದರು.

ಕಸಾಪತಾಲೂಕು ಅಧ್ಯಕ್ಷೆ ಸುಜಾತಮ್ಮ ಮಾತನಾಡಿ,ದತ್ತಿ ಉಪನ್ಯಾಸ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಸಾಹಿತ್ಯಾಸಕ್ತಿಗೆ ಪ್ರೇರಣೆಯಾಗುತ್ತವೆ.ಸೃಜನಶೀಲ ಸಾಹಿತ್ಯದ ಪ್ರಕಾರಗಳಲ್ಲಿ ಜಾನಪದ ಸಾಹಿತ್ಯಗಳನ್ನು ವಿದ್ಯಾರ್ಥಿಗಳು ಬರವಣಿಗೆ ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪತ್ರಕರ್ತ ಮಾದಿಹಳ್ಳಿ ಮಂಜಪ್ಪಮಾತನಾಡಿ,ವಿದ್ಯಾರ್ಥಿ ಯುವಸಮೂಹದಲ್ಲಿ ಇತ್ತೀಚಿಗೆ ಸಾಹಿತ್ಯಾಸಕ್ತಿ ಕ್ಷೀಣವಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದ್ದು.ವಿದ್ಯಾರ್ಥಿಗಳು ಯಾಂತ್ರಿಕ ಬದುಕಿನಿಂದ ಹೊರಬಂದು ವ್ಯಾಸಂಗದಜೊತೆ ಬರವಣಿಗೆ,ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು.ಸ್ಪರ್ಧಾತ್ಮಕ ಜಗತ್ತಿನಲ್ಲಿ ಜ್ಞಾನ ಸಂಪತ್ತು ಸ್ಪರ್ಧಾ ಮನೋಭಾವ ಅತ್ಯವಶ್ಯಕ.ಮಹಿಳಾ ಸಾಧಕರಿಗೆ ಸಾವಿತ್ರಿಭಾಯಿಪುಲೆ,ಕಿರಣ್ ಬೇಡಿ,ಕಲ್ಪನಾಚಾವ್ಲಾ ಸ್ಪೂರ್ತಿಯಾಗಬೇಕು ಎಂದು ಕಿವಿಮಾತು ಹೇಳಿದರು.

ಪವನ್ ಗ್ಯಾಸ್ ಮಾಲಿಕ ಓಬಣ್ಣ ಅವರು ಜಾನಪದ ಸಾಹಿತ್ಯದ ಕುರಿತು ಉಪನ್ಯಾಸ ನೀಡಿದ ಅವರು,ಸಾಹಿತ್ಯದ ಮೂಲವಾಗಿರುವ ಜಾನಪದ ಕಲೆ ಇಂದಿಗೂಜೀವಂತ,ಭಜನೆ,ಸೋಬಾನೆ,ಜಾನಪದ,ಸಾಹಿತ್ಯದ ಪ್ರಕಾರಗಳು ಜಾನಪದ ,ಸಂಗೀತ,ಕಲೆಗಳ ಪ್ರಚಾರ ಅವಶ್ಯಕ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲ ನಾಗಲಿಂಗಪ್ಪ ಸ್ವಾಗತಿಸಿದರು. ಗೀತಾಮಂಜು ನಿರೂಪಿಸಿದರು.

ಪಿಎಲ್ ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಪಿ.ಜಿ.ಪರಮೇಶ್ವರಪ್ಪ, ಬ್ಯಾಂಕ್ ಪರಮೇಶ್ವರಪ್ಪ,ಬಿಟಿ ಹಾಲಪ್ಪ,ನಿಲಯಮೇಲ್ವಿಚಾರಕಿ ಮಂಗಳಕನವಳ್ಳಿ,ರಾಜ್ಯಪ್ರಶಸ್ತಿ ಪುರಸ್ಕೃತೆ ಕಾಟಮ್ಮ,ಜಾನಪದ ಕಲಾವಿದರಾದ ಭೀಮಕ್ಕ,ಲಿಂಗಣ್ಣನಹಳ್ಳಿ ಕಾಳಮ್ಮ,ಸಿದ್ದಮ್ಮನಹಳ್ಳಿ ರಂಗಮ್ಮ,ವಕೀಲ ಆರ್. ಓಬಳೇಶ್,ಚುಟುಕುಸಾಹಿತ್ಯ ಪರಿಷತ್ತುತಾಲೂಕು ಅಧ್ಯಕ್ಷೆ ಗೀತಾಮಂಜು,ಸತ್ಯಮೂರ್ತಿ,ಬಡಪ್ಪ ತೋರಣಗಟ್ಟೆ,ಆದಂ, ಪತ್ರಕರ್ತರಾದ ಎಚ್.ಆರ್ ಬಸವರಾಜ್,ಲೋಕೇಶ್ ಎಂ ಐಹೊಳೆ,ಶಿವಲಿಂಗಪ್ಪ ಇದ್ದರು.

# 'ನಾವೆಂದಿಗೂ ಯಶಸ್ವಿನ ಬಗ್ಗೆ ಕನಸು ಕಾಣುತ್ತ ಕೂರಬಾರದು"



**ರಿಪ್ಪನ್‌ಪೇಟೆ:** "ನಾವೆಂದಿಗೂ ಯಶಸ್ವಿನ ಬಗ್ಗೆ ಕನಸು ಕಾಣುತ್ತ ಕೂರಬಾರದು" ಯಶಸ್ಸು ಸಾಧಿಸುವ ಬಗ್ಗೆ ನಿರಂತರ ಕೆಲಸ ಮಾಡುವವರಾಗ ಬೇಕುಯೆಂದು ಮಳಲಿಮಠದ ಷ.ಬ್ರ.ಡಾ.ಗುರುನಾಗಭೂಷಣ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು. ಸಮೀಪದ ಮಳವಳ್ಳಿ ಶ್ರೀಮಹಾಲಿಂಗೇಶ್ವರ ಮತ್ತು ಬಸವಣ್ಣ ದೇವಸ್ಥಾನಲ್ಲಿ ಶ್ರೀಮಾಲಿಂಗೇಶ್ವರ ಮತ್ತು ಬಸವಣ್ಣ ದೇವರುಗಳ ಪ್ರತಿಷ್ಠಾ ವರ್ಧಂತಿ ಮಹೋತ್ಸವದ ಅಂಗವಾಗಿ "ಕಲಾಹೋಮ ಮತ್ತು ರುದ್ರಾಭಿಷೇಕ" ಧಾರ್ಮಿಕ ಕಾರ್ಯಕ್ರಮ ಮತ್ತು ಧರ್ಮಸಭೆಯ ದಿವ್ಯ ಸಾನಿದ್ಯ ವಹಿಸಿ ಆಶೀರ್ವಚನ ನೀಡಿ ಎಲ್ಲರೂ ಜಗತ್ತೇ ಬದಲಾಗಿದೆ ಎಂದು ಹೇಳುತ್ತಾರೆ.ಆದರೆ ಯೋಚಿಸಿ ಮೆಣಸಿನ ಕಾರ ಬದಲಾಗಿಲ್ಲ.ಮಾವಿನಹಣ್ಣಿನ ಸಿಹಿ ಬದಲಾಗಿಲ್ಲ, ಎಲೆಗಳ ಹಸಿರು ಬಣ್ಣ ಬದಲಾಗಿಲ್ಲ,ಬದಲಾಗಿದ್ದು ಮನುಷ್ಯರ ಮಾನವೀಯತೆ ಹಾಗಾಗಿ ಗುರು ಹಿರಿಯರಿಗೆ ಗೌರವಿಸಿ ಆದರಣೀಯ ಬದುಕನ್ನು ಸಾಗಿಸುವುದೇ ನಿಜವಾದ ಜೀವ ಅದ್ದರಿಂದ ಮಾನವೀಯ ಮೌಲ್ಯಗಳನ್ನು ಬದುಕಿನಲ್ಲಿ ಆಳವಡಿಸಿಕೊಂಡು ಬರಬೇಕು ಎಂದರು.

ಶ್ರೀಮಹಾಲಿಂಗೇಶ್ವರ ಮತ್ತು ಬಸವಣ್ಣ ದೇವಸ್ಥಾನ ಸೇವಾ ಸಮಿತಿ ಅಧ್ಯಕ್ಷ ನಾಗರಾಜ್‌ಗೌಡರು ಗೌರವಾಧ್ಯಕ್ಷ ಚನ್ನಪ್ಪಗೌಡರು,ಗ್ರಾಮ ಪಂಚಾಯಿತ್ ಸದಸ್ಯ ಚಂದ್ರಶೇಖರ ಮಳವಳ್ಳಿ,ಮಳವಳ್ಳಿ ಗ್ರಾಮಸ್ಥರು ಹಾಜರಿದ್ದರು.

# ಯೋಜನೆಗಳ ಯಶಸ್ಸಿಗೆ ಸಹಭಾಗಿತ್ವ ಅತ್ಯವಶ್ಯಕ

**ಶಿವಮೊಗ್ಗ:** ಯಾವುದೇ ಸಮಾಜಮುಖಿ ಯೋಜನೆಗಳ ಅನುಷ್ಠಾನ ಮತ್ತು ನಿರ್ವಹಣೆಯ ಯಶಸ್ಸಿಗೆ ಪ್ರಾದೇಶಿಕ ಶಕ್ತಿ ಕಾಳಜಿಯ ಸಹಭಾಗಿತ್ವ ಅತ್ಯವಶ್ಯಕ ಎಂದು ರಾಷ್ಟ್ರೀಯ ಶಿಕ್ಷಣ ಸಮಿತಿ ಅಧ್ಯಕ್ಷರಾದ ಜಿ.ಎಸ್.ನಾರಾಯಣ ರಾವ್ ಅಭಿಪ್ರಾಯಪಟ್ಟರು.ಸೋಮವಾರ ನಗರದ ಎಇಎಸ್ ಸಂಸ್ಥೆ ಹಾಗೂ ರೋಟರಿ ಕ್ಲಬ್ ವತಿಯಿಂದ ರೋಟರಿ ಜಾಗತಿಕ ಅನುದಾನದಲ್ಲಿ ನವೀಕರಣಗೊಂಡಿರುವ ಬಿ.ಆರ್.ಪ್ರಾಜೆಕ್ಟ್ ರಾಷ್ಟ್ರೀಯ ಸಂಯುಕ್ತ ಪದವಿಪೂರ್ವ ಕಾಲೇಜನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.ಸೇವಾ ಮನೋಭಾವ ಹೊಂದಿದ ಸಮಾನ ಮನಸ್ಕರರು ರೋಟರಿಯಂತಹ ಸಂಸ್ಥೆಗಳನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಸಮಾಜದ ಬೆಳವಣಿಗೆಗೆ ಅವರೆಲ್ಲ ತೋರುತ್ತಿರುವ ಕಾಳಜಿ ಪ್ರೇರಣೀಯ. ಅಂತಹ ಪ್ರೇರಣೆಯ ಸಹಭಾಗಿತ್ವಗಳು ಮತ್ತಷ್ಟು ಸಮಾಜದ ಅಭಿವೃದ್ಧಿಗೆ ಕಾರಣವಾಗುತ್ತದೆ. ಬಿ.ಆರ್.ಪಿ ವಿದ್ಯಾಸಂಸ್ಥೆಯು ಸೇರಿದಂತೆ ಮೂರು ಶಾಲಾ ಕಾಲೇಜುಗಳನ್ನು ರೋಟರಿಯ ಸಹಭಾಗಿತ್ವದ ಮೂಲಕ ಮೇಲ್ದರ್ಜೆಗೆ ಏರಿಸಲಾಗಿದೆ ಎಂದು ಹೇಳಿದರು.ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಆರೋಗ್ಯ, ಸಹಕಾರ ಕ್ಷೇತ್ರಗಳು ಅಭಿವೃದ್ಧಿ ಹೊಂದಿದಾಗ ಮಾತ್ರ ದೇಶದ ಅಭ್ಯುದಯ ಸಾಧ್ಯ. ಪುಸ್ತಕ ಮಾತ್ರ ಅಕ್ಷರವಲ್ಲ ನಮ್ಮ ಮಾತು ಕೂಡ ಅಕ್ಷರವೆ ಆಗಿದೆ. ಉತ್ತಮ ವ್ಯಕ್ತಿತ್ವ ಮಾತ್ರ ಜೀವನದಲ್ಲಿ ಅಗ್ರಸ್ಥಾನ ಪಡೆಯಲು ಸಾಧ್ಯವಾಗಲಿದ್ದು, ವ್ಯಕ್ತಿತ್ವಗಳ ನಿಜವಾದ ನಿರೂಪಣೆ ನಡೆಯುವುದು ಶಾಲೆಗಳಲ್ಲಿ ಮಾತ್ರ. ನಿಮ್ಮನ್ನು ಹಿಯಾಳಿಸಿದ ಜನಗಳಿಗೆ ಬೆರಳು ಮಾಡಿ ತೋರಿಸುವುದಕ್ಕಿಂತ, ಬದುಕಿನಲ್ಲಿ ಯಶಸ್ವಿಯಾಗಿ ಬೆಳೆದು ತೋರಿಸಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ರೋಟರಿ ಜಿಲ್ಲಾ ಗವರ್ನರ್ ಸಿ.ಎ.ದೇವಾನಂದ ಮಾತನಾಡಿ, ಈ ವರ್ಷ 'ಮ್ಯಾಜಿಕ್ ಆಫ್ ರೋಟರಿ' ಎಂಬ ಧ್ಯೇಯ ವಾಕ್ಯದಲ್ಲಿ ಸಮಾಜದಲ್ಲಿರುವ ಅನೇಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಕಾರ್ಯವನ್ನು ವಿಶ್ವದಾದ್ಯಂತ ರೋಟರಿ ಕ್ಲಬ್‌ಗಳು ಕಾರ್ಯನಿರ್ವಹಿಸುತ್ತಿದೆ. ರೋಟರಿ ಅನುಷ್ಠಾನಗೊಳಿಸುತ್ತಿರುವ ಇಂತಹ ಯೋಜನೆ ಯುವ ಸಮೂಹ ಸಮರ್ಪಕವಾಗಿ ಬಳಸಿಕೊಂಡಾಗ ಮಾತ್ರ ನಿಜವಾದ ಸಾರ್ಥಕತೆ ಸಾಧ್ಯ ಎಂದು ಹೇಳಿದರು.

# ಸರ್ಕಾರಿ ಜಾಗದಲ್ಲಿ ಇಲಾಖೆಯ ಅನುಮತಿ ಇಲ್ಲದೆ ಮಣ್ಣು ಗಣಿಗಾರಿಕೆ: ಅಧಿಕಾರಿಗಳ ಭೇಟಿ



**ಚಂದ್ರಗುತ್ತಿ:** ಸರ್ಕಾರಿ ಜಾಗದಲ್ಲಿ ಇಲಾಖೆಯ ಅನುಮತಿಇಲ್ಲದೆ ಭೂಮಿಯನ್ನು ವಿಕೃತಿಗೊಳಿಸುವುದಕ್ಕೆ ಅವಕಾಶವಿಲ್ಲ. ಕೂಡಲೆತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಕೈಗೊಳ್ಳುವುದಕ್ಕೆ ಮುಂದಾಗಿಎಂದು ತಹಸೀಲ್ದಾರ್ ಮಂಜುಳಾ ಹೆಗಡಾಳ್ ಕಂದಾಯ ಅಧಿಕಾರಿಗಳಿಗೆ ಸೂಚಿಸಿದರು.

ಚಂದ್ರಗುತ್ತಿ ಹೋಬಳಿ ಹೊಳೆಮರೂರು ಗ್ರಾಮದ ಕಂದಾಯಭೂಮಿ ಸನಂ 78 ರಲ್ಲಿಅನುಮತಿಇಲ್ಲದೆಅಪಾರ ಪ್ರಮಾಣದ ಮಣ್ಣುತೆಗೆದು ಮಣ್ಣು ವ್ಯಾಪಾರದಜೊತೆಅಕ್ರಮಒತ್ತುವರಿಯ ಪ್ರಯತ್ನ ನಡೆಯುತ್ತಿದೆ ಎಂಬ ಗ್ರಾಮಸ್ಥರದೂರಿನನ್ವಯ ಸ್ಥಳ ಪರಿಶೀಲನೆ ನಡೆಸಿದ ಅವರು ಮಹಜರು ಪಡೆದರು. ಭಾರೀ ಪ್ರಮಾಣದ ಮಣ್ಣು ಸಾಗಣಿಕೆ ನಡೆದಿದ್ದುಕೃತ್ಯಕ್ಕೆ ಬಳಕೆಯಾದ ಎಲ್ಲಾ ವಾಹನಗಳನ್ನು ಸೀಸ್ ಮಾಡಿ, ಮಣ್ಣು ಬಗೆದವನಿಗೆಕೂಡಲೇ ನೋಟೀಸ್‌ಕೊಡಿಎಂದರು.

ಪ್ರತಿವರ್ಷ ಈ ಭಾಗದಲ್ಲಿ ನೆರೆ ಹಾವಳಿಯಿದ್ದು, ಮಣ್ಣುತೆಗೆದ ಈ ಭಾಗಕ್ಕೆ ನೀರು ನುಗ್ಗುತ್ತದೆ. ನೀರು ನಿಂತರೆಗುಡ್ಡ ಕುಸಿಯುತ್ತದೆ. ಅಕ್ಕಪಕ್ಕದ ಜಮೀನುಗಳಿಗೂ ತೊಂದರೆಉಂಟಾಗುತ್ತದೆಎಂದು ಈ ವೇಳೆ ಸ್ಥಳದಲ್ಲಿದ್ದ ಗ್ರಾಮಸ್ಥರು ತಮ್ಮ ಅಳಲು ತೋಡಿಕೊಂಡರು.

ತಾಲ್ಲೂಕಿನಲ್ಲಿರಾಜಕೀಯ ವ್ಯಕ್ತಿಗಳೆ ಇಂತಹಕುಕೃತ್ಯಕ್ಕೆ ಮುಂದಾಗಿದ್ದು ಇಲ್ಲಿನ ಪರಿಸರಕ್ಕೆ ಭಾರೀ ಪೆಟ್ಟು ಬೀಳಲಿದೆ. ಹಿಂದೆಇಲ್ಲಿ ಸಾಕಷ್ಟುಅರಣ್ಯ ನಾಶವೂ ಆಗಿದ್ದು ಈಗ ಮಣ್ಣು, ಜಂಬಿಟ್ಟಿಗೆಗಾಗಿ ಪ್ರಕೃತಿದತ್ತ ನಿಸರ್ಗವನ್ನುಅವೈಜ್ಞಾನಿಕವಾಗಿ ಬಗೆದು ವಿರೋಪಗೊಳಿಸಿರುವುದು ಖಂಡನೀಯಎಂದು ಗ್ರಾಮಸ್ಥರುಒಕ್ಕೊರಲಿನಿಂದ ಆಗ್ರಹಿಸಿ ಪುನಃ ಇಲ್ಲಿ ಮಣ್ಣುತೆಗೆಯದಂತೆ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಪರಿಸರಕಾರ್ಯಕರ್ತ ಶ್ರೀಪಾದ್ ಬಿಚ್ಚುಗತ್ತಿ, ಕಂದಾಯಇಲಾಖೆಯ ವಿನೋದ್, ಕರಿ ಬಸವರಾಜ್, ಮೂರ್ತಿ, ರಕ್ಷಣಇಲಾಖೆಯ ಪ್ರದೀಪ್, ಸೇರಿದಂತೆ ಗ್ರಾಮದಅನೇಕರುಇದ್ದರು.

## ಆಂಜನೇಯಸ್ವಾಮಿ ಮಹಾರಥೋತ್ಸವ

**ಹೊನ್ನಾಳಿ:** ತಾಲೂಕಿನ ಮಲೇಕುಂಬಳೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿಯ ರಥಕ್ಕೆ ಅನೇಕ ಬಣ್ಣಗಳಿರುವ ಬಟ್ಟೆಗಳ ಬಾವುಟಗಳನ್ನು ಕಟ್ಟಿ ವಿವಿಧ ಹೂವುಗಳಿಂದ ಅಲಂಕರಿದ ಮಹಾ ರಥೋತ್ಸವ ಡೊಳ್ಳುಕುಣಿತ,ಕುದುರೆಕುಣಿತ ಹಲಗೆ ವಿವಿಧವಾದ್ಯಮೇಳಗಳೊಂದಿಗೆ ಅದ್ದೂರಿಯಾಗಿ ನಡೆಯಿತು.



ಬೆಳಗ್ಗೆ 10.40 ರಿಂದ 11.15 ರವರೆಗೆ ಸಾಮೂಹಿಕ ವಿವಾಹ ಕಾರ್ಯಕ್ರಮ ಎರಡು ಜೋಡಿಗಳ ವಿವಾಹ ನಡೆಯಿತು. ನಂತರ ಸರ್ವ ಭಕ್ತಾಧಿಗಳು ಮತ್ತು ಅಕ್ಕ-ಪಕ್ಕ ಗ್ರಾಮದ ಭಕ್ತರಿಗೆ ಉಚಿತ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು. ಸಂಜೆ 4ಕ್ಕೆ ಶ್ರೀ ಆಂಜನೇಯ ಸ್ವಾಮಿಯ ಮುಳ್ಳೋತ್ಸವ ಕಾರ್ಯಕ್ರಮದಲ್ಲಿ ಶ್ರೀಆಂಜನೇಯ ಸ್ವಾಮಿಯ ಹೂವುಗಳಿಂದ ಅಲಂಕರಿಸಿದ ಪಲ್ಲಕ್ಕಿಯಲ್ಲಿ ಕೂರಿಸಿ ಯುವಕರು ಪಲ್ಲಕ್ಕಿಯನ್ನೋತ್ತು ಕುಣಿದರು. ಮುಳ್ಳೋತ್ಸವ:- ಗ್ರಾಮದ ಮಹಿಳೆಯರು ಮುಖಂಡರು ಯುವಕರು ಮಕ್ಕಳು ಶ್ರೀಆಂಜನೇಯ ದೇವರ ಮುಳ್ಳೋತ್ಸವದಲ್ಲಿ ಪಾಲ್ಗೋಳ್ಳಲು ಉಪವಾಸ ವೃತ್ತದಿಂದ್ದು ಮುಳ್ಳನ್ನು ತುಳಿದು ತಮ್ಮ ಭಕ್ತಿ ಸರ್ಮಪಿಸಿದರು. ಕಾರ್ಣಿಕೋತ್ಸವ:-ಕಾರ್ಣಿಕ ನುಡಿಯುವ ದುಡ್ಡೇಶಪ್ಪ ದೈವ ನುಡಿಗಳನ್ನು ಆಡಿರುವುದು ಕಾರ್ಣಿಕ ನುಡಿ "ಶಿವನ ಕೊರಳಿನ ಘಟಸರ್ಪ ಎಡೆ ಬಿಚ್ಚಾಡಿತಲೇ ಭೂಲೋಕದ ಮುತ್ತು ಗಗನಕ್ಕೇರಿತಲೇ ಅದಕ್ಕೆ ನಾನಿದ್ದೇನೆ" ಸಂಜೆ 6ಕ್ಕೆ ಶ್ರೀ ಆಚಿಜನೇಯ ದೇವರ ಹೂವಿನ ಅಡ್ಡಪಲ್ಲಕ್ಕಿ ಉತ್ಸವ, ಗ್ರಾಮದ ರಾಜಬೀದಿಗಳಲ್ಲಿ ವಿವಿಧ ವಾದ್ಯಮೇಳಗಳೊಂದಿಗೆ ನಡೆಯಿತು. ಭಾನುವಾರ ಮಧ್ಯಾಹ್ನ ಶುಭ ಅಬಿಜನ್ ಲಗ್ನದಲ್ಲಿ ಶ್ರೀಆಂಜನೇಯ ಸ್ವಾಮಿಯ ಬ್ರಹ್ಮ ರಥೋತ್ಸವ ಅದ್ದೂರಿಯಾಗಿ ನಡೆಯಿತು.ಸಮಾಹಿಕ ವಿವಾಹ ಮತ್ತು ಮುಳ್ಳೋತ್ಸವದಲ್ಲಿ ಭಾಗವಹಿಸಿದ ಭಕ್ತರಿಗೆ ಮಲೇಕುಂಬಳೂರು ಗ್ರಾಮದ ಶ್ರೀ ಮಾರುತಿ ಯುವಕರ ಅನ್ನದಾಸೋಹ ಟ್ರಸ್ಟ್ ಕಮಿಟಿ ವತಿಯಿಂದ ಸಮಸ್ತ ಭಕ್ತಾದಿಗಳಿಗೆ ಅನ್ನಸಂತರ್ಪಣೆ ನಡೆಸಿಕೊಟ್ಟರು.

## ಕುಂಭಮೇಳಕ್ಕೆ ಹೋಗಿದ್ದ ಯೋಗಪಟು ಸಾವು

**ಶಿವಮೊಗ್ಗ:** ಶಿವಮೊಗ್ಗದಿಂದ ಕಣಾದ ಯೋಗ ತಂಡದೊಂದಿಗೆ ಪ್ರಯಾಗ್‌ರಾಜ್‌ಗೆ ಫೆ. 15ರಂದು ತೆರಳಿ ವಾಪಸ್ ಬರುವಾಗ ಸೋಮವಾರ ಬೆಳಗ್ಗೆ ವಿಜಯಪುರ ಜಿಲ್ಲೆಯ ಝಳಕಿ ಚೆಕ್ ಪೋಸ್ಟ್ ಬಳಿ ಯೋಗಪಟು ಶ್ರೀನಿವಾಸ್(71) ಹೃದಯಾಘಾತದಿಂದ ನಿಧನರಾಗಿದ್ದಾರೆ. ಇಲ್ಲಿನ ಬಸವೇಶ್ವರ ನಗರ ನಿವಾಸಿಯಾದ ಇವರು ಕುಂಭಮೇಳಕ್ಕೆ ತಮ್ಮ ಸಂಗಡಿಗರೊಂದಿಗೆ ತೆರಳಿದ 105 ಜನರ ತಂಡದಲ್ಲಿದ್ದರು. ಕಾಶಿ, ಅಯೋಧ್ಯೆ, ಮೊದಲಾದ ಸ್ಥಳಿಗೆ ಭೇಟಿ ನೀಡಿ ವಾಪಸ್ ಬರುವಾಗ ಅವರಿಗೆ ಹೃದಯಾಘಾತವಾಗಿದೆ. ಕೂಡಲೇ ಅವರನ್ನು ಇಂಡಿ ತಾಲೂಕು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಅವರು ಪತ್ನಿ ಹಾಗೂ ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗ ಅಗಲಿದ್ದಾರೆ ಎಂದು ಕಣಾದ ಯೋಗ ಮತ್ತು ರಿಸರ್ಚ್ ಫೌಂಡೇಷನ್ ನ ಮುಖ್ಯಸ್ಥ ಅನಿಲಕುಮಾರ್ ಶೆಟ್ಟರ್ ತಿಳಿಸಿದ್ದಾರೆ.



## ಇ-ಖಾತಾ, ಬಿ-ಖಾತಾ ಅಭಿಯಾನ ಆರಂಭ

ನ್ಯಾಮತಿ: ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಇ-ಖಾತಾ ಅಂಗವಾಗಿ ಹೆಲ್ಪ್ ಡೆಸ್ಕ್ ಮತ್ತು ಸಹಯವಾಣಿ ಕೇಂದ್ರವನ್ನು ಈಗಾಗಲೇ ತೆರೆದಿರುವುದಾಗಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಗಣೇಶ್ ರಾವ್.ಪಿ ತಿಳಿಸಿದರು.ಪಟ್ಟಣದ ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಶುಕ್ರವಾರ ಇ-ಖಾತಾ ಕರಪತ್ರಗಳನ್ನು ಪ್ರದರ್ಶಿಸಿ ಅವರು ಮಾತನಾಡಿದರು.ಪಟ್ಟಣ ಪಂಚಾಯಿಯ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳಿಗೆ ಬಿ-ಖಾತೆ ಪಡೆಯುವ ಕುರಿತು ಪಟ್ಟಣ ಪಂಚಾಯಿತಿ ವತಿಯಿಂದ ಈಗಾಗಲೇ ಧ್ವನಿ ಮುದ್ರಿಕೆಯ, ಕರಪತ್ರ ಮತ್ತು ಬ್ಯಾನರ್‌ಗಳ ಮೂಲಕ ಸಾರ್ವಜನಿಕರಿಗೆ ಮಾಹಿತಿಯನ್ನು ನೀಡುತ್ತಿರುವುದಾಗಿ ಅವರು ಹೇಳಿದರು.ಸರ್ಕಾರವು ಸೆಪ್ಟೆಂಬರ್ ತಿಂಗಳ ವರೆಗೂ 3 ತಿಂಗಳುಗಳವರೆಗೂ ಸಮಯ ನಿಗದಿ ಮಾಡಿದ್ದು ಅನಧಿಕೃತ ಕಟ್ಟಡ, ನಿವೇಶನ, ಕಟ್ಟಡಗಳಿಗೆ ಬಿ-ಖಾತೆ ನೀಡಲು ಅವಕಾಶ ಕಲ್ಪಿಸಿರುವುದಾಗಿ ತಿಳಿಸಿದರು.ಈ ಅವಕಾಶವನ್ನು ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಅನಧಿಕೃತ ನಿವೇಶನ ಹೊಂದಿರುವ ಭೂ ಮಾಲಿಕರು ಅಗತ್ಯ ದಾಖಲೆಗಳಾದ ಭೂಪರಿವರ್ತನೆ ಆದೇಶ, ಬಡಾವಣೆ ನಕ್ಷೆ, ಸ್ವತ್ತಿನ ಮಾಲೀಕತ್ವವನ್ನು ದೃಢೀಕರಿಸುವ ಅಗತ್ಯ ದಾಖಲೆ ಗುರುತಿನ ಪತ್ರಗಳೊಂದಿಗೆ ನ್ಯಾಮತಿ ಪಟ್ಟಣ ಪಂಚಾಯಿತಿ ವಿಶೇಷ ಇ-ಖಾತಾ ಅಂಗವಾಗಿ ಹೆಲ್ಪ್ ಡೆಸ್ಕ್ ಮತ್ತು ಸಹಯವಾಣಿ ಕೇಂದ್ರವನ್ನು ಸಂಪರ್ಕಿಸುವಂತೆ ತಿಳಿಸಿದ್ದಾರೆ.



# ಸುಂದರ ಕಲಾ ಮ್ಯೂಸಿಯಂ ಸತ್ಯದ ಅಭಯಾರಣ್ಯ

ಥಾಯ್ಲೆಂಡ್, ಪಟ್ಟಾಯ ಪ್ರವಾಸ ಮುಗಿಸಿ ಭಾರತಕ್ಕೆ ಹಿಂದಿರುಗುವ ದಿನವದು. ನಮ್ಮ ವಿಮಾನ ಬ್ಯಾಂಕಾಕ್ನಿಂದ ಮಧ್ಯಾಹ್ನ ಹೊರಡುವುದಿತ್ತು. ಅರ್ಧ ದಿನ ಹೇಗೆ ಕಳೆಯಬೇಕು ಎಂದುಯೋಚಿಸುತ್ತಿದ್ದಾಗ ಹತ್ತಿರದಲ್ಲೇ ವಿಶಿಷ್ಟವಾದ 'ದಿ ಸ್ಯಾಂಕ್ಚುರಿ ಆಫ್ ಟ್ರೂಥ್'ಮ್ಯೂಜಿಯಂ ಇರುವುದು ಗೊತ್ತಾಯಿತು. ಅದು ನಾವು ತಂಗಿದ್ದ ಹೋಟೆಲ್ನಿಂದ ತುಂಬಾ ಸನಿಹದಲ್ಲೇ ಇತ್ತು. ಅಲ್ಲಿಗೆಹೋಗಲು ನಿರ್ಧರಿಸಿದೆವು.

ಸರ್ವಧರ್ಮಗಳ ಸಂದೇಶಗಳನ್ನು ಸಾರುವ ಜಗತ್ತಿನ ಅತೀ ಎತ್ತರವಾದ ಕಲಾ ದೇಗುಲ ಥಾಯ್ಲೆಂಡ್ನಲ್ಲಿ ನಿರ್ಮಾಣವಾಗುತ್ತಿದೆ. ಇದನ್ನು ಸಂಪೂರ್ಣವಾಗಿ ಮರದಿಂದ ನಿರ್ಮಿಸಲಾಗುತ್ತಿದೆ. 44 ವರ್ಷಗಳಿಂದ ಇದರ ಕೆತ್ತನೆಯ ಕೆಲಸ ನಡೆಯುತ್ತಿದ್ದು, ಇದೇ ವರ್ಷ ಪೂರ್ಣಗೊಳ್ಳಲಿದೆ ಎನ್ನಲಾಗುತ್ತಿದೆ. ಇದು ಚೀನಾದ ವ್ಯಾಪಾರಿ ಲೆಕ್ ವಿರಿಯಾಫನ್ ಅವರ ಕನಸು.


ಅದೋ ನೆಲ ನೀರು ನೀಲಾಗಸಗಳ ಸಂಗಮ. ಅಲ್ಲಿ ಎಚ್ಎಂಎಸ್ ಬೀಗಲ್ನಂಥ ಬೃಹತ್ ಹಡಗು ಲಂಗರು ಹಾಕಿ ನಿಂತಂತೆ ಭಾಸವಾಗುತಿತ್ತು. ಹಿಂದೆ ಕಡಲು ಹರಡಿಕೊಂಡಿದೆ. ಹತ್ತಿರಹೋಗಿ ನೋಡಿದರೆ ಅದು ಹಡಗಲ್ಲ, ರಾಜ ಮಹಾರಾಜರ ಅರಮನೆ ಮೀರಿಸುವಂಥ ವೈಭವದ ಕಟ್ಟಡ!. ಹೌದು ಸಂಪೂರ್ಣ ಮರದ ದಿಮ್ಮಿಗಳಿಂದ ಕೆತ್ತನೆಯ ಕುಸುರಿ ಕೆಲಸದಿಂದ ಅರಳುತ್ತಿರುವ ಶ್ರೇಷ್ಠ ಸುಂದರ ಕಲಾಮ್ಯೂಸಿಯಂ.

ಅಲ್ಲಿ ಮರದ ಮೆಟ್ಟಿಲುಗಳಿದ್ದವು. ಹೆಲ್ಮೆಟ್ ಧರಿಸಿ ಹೆಜ್ಜೆ ಇರಿಸಿದೆವು. ಹಕ್ಕಿಪಕ್ಷಿಗಳ ಕಲರವ, ಹಸುರಿನ ಉದ್ಯಾನ, ತಿಳಿನೀರ ಸರೋವರ ಮುದ ನೀಡುತ್ತಿದ್ದವು. ಸಮುದ್ರ ತೀರದಲ್ಲಿ ಅದ್ಭುತವಾದ ಕಲಾಮ್ಯೂಸಿಯಂ ಅತ್ಯಾಕರ್ಷ ಕವಾಗಿ ಕಾಣಿಸುತ್ತಿತ್ತು. ಅಲ್ಲಿ ಪರಿಣತ ಕಲಾಕಾರರು ಉಳಿ, ಚಾಣ, ಬಾಚಿ ಹಿಡಿದು ಕೆತ್ತನೆಯಲ್ಲಿ ತೊಡಗಿದ್ದರು. ಥಾಯ್ಲೆಂಡ್, ಕಾಂಬೋಡಿಯಾಹಾಗೂ ಮಯನ್ಮಾರ್ ದೇಶಗಳ ಬಡಗಿಗಳು ದಶಕಗಳಿಂದ ಅಲ್ಲಿ ಕೆಲಸಮಾಡುತ್ತಿದ್ದರು. 'ದಿ ಸ್ಯಾಂ ಕ್ಚುರಿ ಆಫ್ ಟ್ರೂಥ್'ಗೆ ಮತ್ತೊಂದು ಹೆಸರು 'ಸತ್ಯದ ಅಭಯಾರಣ್ಯ'. ಮರದ ಕಲಾಮ್ಯೂಸಿಯಂ ಜಗತ್ತಿನಲ್ಲಿಯೇ ಅತಿ ಭವ್ಯ ಹಾಗೂ ಅಪರೂಪದ್ದು. ಬೌದ್ಧ, ಜೈನ, ಕ್ರೈಸ್ತ ಹಾಗೂ ಹಿಂದೂ ಧರ್ಮದ ನೂರಾರು ದೇವಾನು ದೇವತೆಗಳು ಅಲ್ಲಿ ಜೀವ ಪಡೆದಿದ್ದಾರೆ. ಇದು ದೇವಸ್ಥಾನ-ಕಳಸ-ಗೋಪುರಾಕೃತಿಗಳ ಸಮ್ಮಿಶ್ರಣ.



ಈ ಕಲಾಮ್ಯೂಸಿಯಂನಲ್ಲಿ ಹುಟ್ಟು, ಸಾವು, ಕುಟುಂಬ ಪ್ರೀತಿ, ದೈವ, ನಾಗರಿಕತೆ, ಸರಳ ಜೀವನ ಹಾಗೂ ಮೋಕ್ಷವೆಂಬ ಏಳು ಸತ್ಯಗಳು ಕೆತ್ತನೆಯ ರೂಪ ಪಡೆದು ಅನಾವರಣಗೊಂಡಿದೆ. ಧಾರ್ಮಿಕ, ಆಧ್ಯಾತ್ಮಿಕ ಹಾಗೂ ವಾಸ್ತವ ಕಲಾಕೃತಿಗಳನ್ನು ಸೂಕ್ಷ್ಮವಾಗಿ ಅಧ್ಯಯನಮಾಡಿದರೆ ಎಲ್ಲವೂ ಅರಿವಿಗೆ ಬರುತ್ತವೆ.

ದಿ



ಸ್ಯಾಂಕ್ಚುರಿ ಆಫ್ ಟ್ರೂಥ್ಹೊರಭಾಗದಲ್ಲಿರುವ ಕೆತ್ತನೆಗಳು

ಚೀನಾ ವ್ಯಾಪಾರಿಯ ಕನಸು ಜಗತ್ತಿನಲ್ಲಿಯೇ ಅತೀ ಎತ್ತರದ ಮರದ ಕಲಾಮ್ಯೂಸಿಯಂ ಇದು. 105 ಮೀಟರ್ ಎತ್ತರ, 100 ಮೀಟರ್ ಅಗಲ ಹಾಗೂ 2,115 ಚದರ ಮೀಟರ್ ವಿಸ್ತೀರ್ಣ (ಒಳಾಂಗಣ)ದ ಈ ಕಟ್ಟಡ ಚತುರ್ಭುಜ ವಿನ್ಯಾಸದಲ್ಲಿ ರೂಪುಗೊಂಡಿದೆ. ಅಚ್ಚರಿಗೊಳಿಸುವ ಈಮ್ಯೂಸಿಯಂಗೆ ರೋಚಕ ಕಥೆ ಇದೆ. ಲೇಕ್ ವಿರಿಯಾಫನ್ ಎಂಬ ಚೀನಾದ ವ್ಯಾಪಾರಿ ಬಹು ಹಿಂದೆಯೇ ಥಾಯ್ಲೆಂಡ್ಗೆ ಬಂದು ಉದ್ಯಮ ಆರಂಭಿಸಿ ದೊಡ್ಡ ಶ್ರೀಮಂತನಾದ. ಥಾಯ್ಲೆಂಡ್ ಸಮುದ್ರ ತೀರದುದ್ದಕ್ಕೂ ಅವನದೇ ಅಂಗಡಿ, ಮುಂಗಟ್ಟು,ಹೋಟೆಲ್ಗಳ ಸರಣಿ ಸ್ಥಾಪನೆಯಾದವು. ಸಮುದ್ರತೀರದಲ್ಲಿ ಸರ್ವಧರ್ಮಗಳ ಸಿದ್ಧಾಂತಗಳನ್ನು ಮರದ ಕೆತ್ತನೆಯ ಮೂಲಕ ಅನಾವರಣಗೊಳಿಸಬೇಕು ಎಂದು ಕನಸು ಕಂಡ. ಅದಕ್ಕಾಗಿ ಸುಮಾರು ಹದಿಮೂರು ಹೆಕ್ಟೇರ್ ಜಾಗವನ್ನು ಖರೀದಿಸಿ ಮೀಸಲಿರಿಸಿದ. 1981ರಲ್ಲಿ ಕೆತ್ತನೆ ಕೆಲಸ ಶುರುವಾಯಿತು. ಇದಕ್ಕಾಗಿ ವಿದೇಶಗಳಿಂದ ನೂರಾರು ನುರಿತ ಕುಸುರಿ ಕೆತ್ತನೆಯ ಬಡಗಿಗಳು ಬಂದಿಳಿದರು. ಕೆತ್ತನೆಗಾಗಿ ಸಾಗುವಾನಿ, ಮೊಹೋಗನಿ, ಮೈಡಿಂಗ್, ಮೈಪಂಚೆಟ್ನಂಥ ಮರದ ದಿಮ್ಮಿಗಳು ಸಂಗ್ರಹವಾದವು. ತುಂಬಾ ಹಳೆಯದಾದ ಮೈಟಾಕಿನ್ ಮರವನ್ನು ವಿಶೇಷ ಕೆತ್ತನೆಗೆ ತರಿಸಲಾಯಿತು.


ಮರದಮ್ಯೂಸಿಯಂ ಕೆಲಸ ಆರಂಭವಾಗಿ 44 ವರ್ಷಗಳು ಉರುಳಿವೆ. ಆದರೂ ಪೂರ್ಣವಾಗಿಲ್ಲ. 2025ರ ಅಂತ್ಯಕ್ಕೆ ಮ್ಯೂಸಿಯಂ ಪೂರ್ಣಗೊಳ್ಳಬಹುದು ಎನ್ನಲಾಗುತ್ತಿದೆ. ಮ್ಯೂಸಿಯಂನ ಹೃದಯ ಭಾಗದಿಂದ ಮೇಲಕ್ಕೆ ಒಂದು ಕಂಬದಂಥ ಗೋಪುರ ಚಾಚಿಕೊಂಡಿದೆ. ಅದರ ತುದಿಯಲ್ಲಿ ಬ್ರಹ್ಮನ ಚತುರ್ಮುಖ ಪ್ರತಿಮೆ ಕಾಣಿಸುತ್ತದೆ. ಈ ಚತುರ್ಮುಖ ತಂದೆ, ತಾಯಿ, ಗುರು ಹಾಗೂ ಆಳುವ ದೊರೆಯ ಸಂಕೇತ ರೂಪಗಳಾಗಿವೆ. ದಯೆ, ಸಮಚಿತ್ತ, ಪರೋ ಪಕಾರ, ಸಂತೃಪ್ತಿ ಇವು ಚತುರ್ಮುಖದ ಇತರ ಭಾವಗಳು. ಬ್ರಹ್ಮನಮೂರ್ತಿಯ ಸುತ್ತಲಿನ ಮೇಲ್ಛಾವಣಿಯ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ವಿಶೇಷತೆಗಳಿವೆ. ಭವಿಷ್ಯದ ಬದುಕು ಆರೋಗ್ಯಪೂರ್ಣ ವಾಗಿರಲು ಭೂತಕಾಲದ ನೀತಿ, ನಿಯಮ, ಸಿದ್ಧಾಂ ತಗಳ ಪಾಲನೆ ಆಗಬೇಕು ಎನ್ನುವುದನ್ನು ಪೂರ್ವ ದಿಕ್ಕಿನ ಚಿತ್ರಗಳು ತೋರಿಸುತ್ತವೆ. ಪಶ್ಚಿಮದಲ್ಲಿ ಬಾಲಕಿಯೊಬ್ಬಳು ಪಾರಿವಾಳಗಳಿಗೆ ಕಾಳು ತಿನ್ನಿಸುವ ಚಿತ್ರವಿದೆ. ಜಗತ್ತಿನ ಹಸಿವು ತಣಿಸುವ ಹಾಗೂ ಭೂಮಿಯನ್ನು ಫಲವತ್ತುಗೊಳಿಸುವ ಸಂಕೇತವದು. ಕಮಲದ ಹೂವಿನ ಮೇಲೆ ಧ್ಯಾನಾಸಕ್ತರಾಗಿ ಕುಳಿತು ಆಧ್ಯಾತ್ಮಕ ಚಿಂತನೆ ಭೋದಿಸುವ ದೇವತೆಯ ಚಿತ್ರ ಉತ್ತರ ದಿಕ್ಕಿನಲ್ಲಿದ್ದರೆ, ದಕ್ಷಿಣದಲ್ಲಿ ತಂದೆ, ತಾಯಿ, ಮಕ್ಕಳ ಕುಟುಂಬದ ಚಿತ್ರಗಳಿವೆ. ಇವೆಲ್ಲಾ ಅರ್ಥ ಪೂರ್ಣ ಬದುಕಿಗೆ ಮುಖ್ಯ. ಮೇಲ್ಛಾವಣಿಯ ನಾಲ್ಕೂ ದಿಕ್ಕಿನ ಮಧ್ಯ ಕುದುರೆ ಸವಾರನೊಬ್ಬ ಕಡಿವಾಣ ಹಿಡಿದು ಎಲ್ಲವನ್ನೂ ನಿಯಂತ್ರಣ ಮಾಡುವ ಚಿತ್ರ ವಿಶೇಷ ಪರಿಕಲ್ಪನೆ. ದಿ ಸ್ಯಾಂಕ್ಚುರಿ ಆಫ್ ಟ್ರೂಥ್ನಹೊರನೋಟ ನೆಲಮಹಡಿಯ ಒಳಂಗಣ ವೈ ವಿಧ್ಯಮಯ ಕೆತ್ತನೆಗಳಿಂದ ಕೂಡಿದೆ. ಮರದ ಕುಸುರಿ ಕೆತ್ತನೆಗಳು ಒಂದನ್ನೊಂದು ಮೀರಿಸುತ್ತವೆ. ಇಲ್ಲಿಯೂನಾಲ್ಕು ದಿಕ್ಕುಗಳಲ್ಲಿ ನಾಲ್ಕು ಹಜಾರಗಳಿದ್ದು, ವೈವಿಧ್ಯಮಯ ಕೆತ್ತನೆಗಳಿಂದ ತುಂಬಿಹೋಗಿವೆ. ಉತ್ತರ ದಿಕ್ಕಿನ ಹಜಾರದಲ್ಲಿ ಬೌದ್ಧ ಧರ್ಮದ ತತ್ವ ಸಿದ್ಧಾಂತಗಳಿಗೆ ಸಂಬಂಧಿಸಿದ ಚಿತ್ರಗಳಿವೆ. ಒಳ್ಳೆಯದನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಕೆಟ್ಟದನ್ನು ಮಾಡಿದರೆ ಕೆಟ್ಟದ್ದಾಗುತ್ತದೆ ಎನ್ನುವ ಸಿದ್ಧಾಂತವನ್ನು ಇಲ್ಲಿಯ ಕೆತ್ತನೆ ಸಂದೇಶ ನೀಡುತ್ತದೆ. ದಕ್ಷಿಣ ದಿಕ್ಕಿನ ಹಜಾರದಲ್ಲಿ ಸೌರಮಂಡಲದ ಸೂರ್ಯ , ಚಂದ್ರ, ಗ್ರಹ, ಉಪಗ್ರಹ, ನಕ್ಷತ್ರಾದಿಗಳಿದ್ದು ಅವು ಬದುಕಿನ ಹುಟ್ಟು, ಸಾವು, ಯಶಸ್ಸನ್ನು ನಿರ್ಧರಿಸುತ್ತವೆ. ಪಶ್ಚಿಮ ಹಜಾರದ ಪಂಚಭೂತಗಳಾದ ನೀರು, ಗಾಳಿ, ನೆಲ, ಬೆಂಕಿ, ಆಕಾಶಗಳ ಕೆತ್ತನೆಗಳಿದ್ದು, ಅವು ಬದುಕಿನಮೂಲಭೂತ ಅವಶ್ಯಕತೆಯನ್ನು ಸಾರುತ್ತವೆ. ಪೂರ್ವ ಹಜಾರದಲ್ಲಿಯ ಚಿತ್ರಗಳು ತಂದೆ, ತಾಯಿ, ಮಕ್ಕಳ ಕೌಟುಂಬಿಕ ಪ್ರೀತಿ, ಬಂಧನಗಳನ್ನು ಪ್ರತಿನಿಧಿಸುತ್ತವೆ. ಜೊತೆಗೆ ಕೈಲಾಸ ಶಿಖರದಲ್ಲಿ ಕುಳಿತ ಶಿವ, ಹಂಸದ ಮೇಲೆ ಕುಳಿತ ಬ್ರಹ್ಮ, ಕಡಲ ಮಧ್ಯ ಏಳು ಹೆಡೆ ಸರ್ಪದ ನೆರಳಿನಲ್ಲಿ ಪವಡಿಸಿದ ವಿಷ್ಣುವಿನ ಕೆತ್ತನೆ ಆಕರ್ಷ ಣೆಯಾಗಿವೆ. ಇಲ್ಲಿ ಹಾಲಿವುಡ್ ಸಿನಿಮಾಗಳಲ್ಲಿನ ಫ್ಯಾಂಟಸಿಯಂಥ ನೂರಾರು ದೇವಾನುದೇವತೆಗಳ ದೃಶ್ಯಾವಳಿಗಳು ಮನಸೂರೆಗೊಳ್ಳುತ್ತವೆ.

ಖಾಸಗಿ ಒಡೆತನದ 'ದಿ ಸ್ಯಾಂಕ್ಚುರಿ ಆಫ್ ಟ್ರೂಥ್' ಆರಂಭಿಸುವ ಮೊದಲೇ ವಿರಿಯಾಫನ್ 'ದಿ ಏನ್ಶಿಯಂಟ್ ಸಿಟಿ ಆಫ್ಮ್ಯೂಸಿಯಂ' ಸ್ಥಾಪಿಸಿ ಅನುಭವ ಪಡೆದಿದ್ದರು.

ಪಾಶ್ಚಾತ್ಯ ಜಗತ್ತಿನ ವಿಜ್ಞಾನ, ತಂತ್ರಜ್ಞಾನ ಬದುಕಿಗೆ ಐಷಾರಾಮಿ ಸೌಲಭ್ಯ ಒದಗಿಸಿದರೂ ಅವುಗಳಿಗೆಯಾವುದೇ ಧಾರ್ಮಿಕ ಕಟ್ಟಳೆಗಳಿಲ್ಲ. ಅವುಯಾವ ಪ್ರಾಚೀನತೆಯನ್ನು ಜಗತ್ತಿಗೆ ಸಾರುವುದಿಲ್ಲ. ಹಾಗಾಗಿ ವಿರಿಯಾಫನ್ ಏಷ್ಯ ಖಂಡದ ಧರ್ಮ , ಅಧ್ಯಾತ್ಮ, ಪುರಾಣ, ಸಂಪ್ರದಾಯ, ಸಂಸ್ಕೃತಿಗಳನ್ನು ಮೂಲ ನೆಲೆಯಾಗಿಟ್ಟುಕೊಂಡು 'ದಿ ಸ್ಯಾಂಕ್ಚುರಿ ಆಫ್ ಟ್ರೂಥ್' ಅನ್ನು ಸ್ಥಾಪಿಸಿದರು. ಒಳಾಂಗಣದ ಎಡ-ಬಲ, ಮೇಲೆ-ಕೆಳಗೆ ಎಲ್ಲಾ ಕಡೆ ಪ್ರತಿ ಸೆಂಟಿಮೀ ಟರ್ ಜಾಗವೂ ಕಲಾ ಪ್ರೌಢಿಮೆಯಿಂದ ತುಂಬಿಹೋಗಿದೆ. ಪೌರ್ವಾತ್ಯ ಜಗತ್ತಿನ ಬದುಕಿನ ಮೌಲ್ಯಗಳು, ತತ್ವ ಸಿದ್ಧಾಂತಗಳು ಪೀಳಿಗೆಯಿಂದ ಪೀಳಿಗೆಗೆ ಹಸ್ತಾಂ ತರವಾಗಬೇ ಕು. ಈ ನಿಟ್ಟಿನಲ್ಲಿ ಲೇಕ್ ವಿರಿಯಾಫನ್ ಎಲ್ಲಾ ಹಳೆಯ ಧಾರ್ಮಿಕ-ದೈವಿಕ ಶಕ್ತಿಗಳನ್ನು, ಮೌಲ್ಯಗಳನ್ನು ಕಲಾತ್ಮಕವಾಗಿ ಮರದ ಕೆತ್ತನೆಯಲ್ಲಿ ಅರಳಿಸಿದ್ದು ಮೆಚ್ಚುವಂಥ ಕೆಲಸ. ನಾವು ನೋಡಿದ ಅವಿಸ್ಮರಣೀಯ ಮರದ ಪ್ರತಿಮಾಸಂಗ್ರಹಾಲಯ ಎಂದೆಂದಿಗೂ ನೆನಪಿಲ್ಲಿ ಉಳಿಯುವಂಥದ್ದು.



# ಬದಲಾದ ಕಾಲದಲ್ಲಿ ದುಷ್ಟರ ಹತಾರವಾಗುತ್ತಿರುವ ಶ್ರೀಸಾಮಾನ್ಯ



## ಅಧ್ಯಕ್ಷೀಯ ಭಾಷಣ : ಅ.ರಾ.ಶ್ರೀನಿವಾಸ
### (ಸಾಗರ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ )

ನಮಸ್ಕಾರ, ಫಿಲ್ಟರ್ ಕಾಫಿ ಕುಡಿಯುವುದಕ್ಕೆ ರುಚಿ, ಆದರೆ ಫಿಲ್ಟರ್ ಮಾತು ಹಾಗೆ ರುಚಿಯಾಗುವುದಿಲ್ಲ. ಈಗ ಎಂತಹ ಸಮಯ ಬಂದಿದೆ ಎಂದರೆ ಹೊರಗೆ ಮಾತನಾಡುವುದಕ್ಕೆ ಭಯಪಡುವ ಸಮಯ ಇದಾಗಿದೆ. ಔಪಚಾರಿಕ ಮಿತಿಯೊಳಗೆ ನಮ್ಮ ಮನಸ್ಸಿಗೆ ಬಂದಂತೆ ಮಾತಾಡುವುದು ಈಗ ತುಂಬಾ ಕಷ್ಟವಾಗಿದೆ. ಮುಕ್ತವಾಗಿ ಮಾತಾಡುವಂತಹ ಅನುಕೂಲಕರ ವಾತಾವರಣ ಈಗ ಇಲ್ಲವಾಗಿದೆ. ಅಧಿಕಾರಸ್ಥರ ವಿರುದ್ಧ ಮಾತಾಡಿದರೆ ಸಾಕು ಕೂಡಲೇ ಅವರನ್ನು ನಗರ ನಕ್ಸಲರೆಂದೋ, ದೇಶದ್ರೋಹಿ ಎಂದೋ, ಅಭಿವೃದ್ಧಿ ವಿರೋಧಿ ಎಂದೋ ಮುದ್ರೆ ಒತ್ತಿ ದೇಶದ ಯಾವುದಾದರೂ ನ್ಯಾಯಾಲಯದಲ್ಲಿ ಕೇಸು ದಾಖಲಾಗುವ ಸಂಕಟ ಎದುರಿಗಿದೆ. ಈಗ ಏನಾಗಿದೆ ಅಂತಂದರೆ ಇಂತಹ ಭಯದ ಕಾರಣದಿಂದ ಸಾಹಿತ್ಯ ಕೂಡ ತನ್ನ ಪ್ರತಿಭಟನೆಯ ಧ್ವನಿಯನ್ನು, ಬಂಡಾಯದ ಧ್ವನಿಯನ್ನು ಕಳೆದುಕೊಂಡುಬಿಟ್ಟಿದೆ. ಸಮೂಹ ಮಾಧ್ಯಮಗಳಂತೂ ಕೇಳುವುದೇ ಬೇಡ; ಬಗ್ಗಿ ಎಂದರೆ ಮಲಗಿಯೇ ಬಿಟ್ಟಿವೆ. ಯಾವ ಪಕ್ಷ ಅಂತಲ್ಲ, ಎಲ್ಲ ಅಧಿಕಾರಸ್ಥರಿಗೂ ನಮಂತಹ ಸಾಹಿತ್ಯಕಾರರ, ಚಿಂತಕರ ಮಾತುಗಳನ್ನು ಕೇಳುವುದು ಇಷ್ಟವಾಗುವುದಿಲ್ಲ. ಅಷ್ಟೇಕೆ, ಸಾಗರದಂತಹ ಒಂದು ಸಣ್ಣ ಪ್ರದೇಶದ ಸಾಹಿತ್ಯ ಪರಿಷತ್ತಿನ ಸಂಘಟನೆಯಲ್ಲಿರುವವರಲ್ಲಿ ಕೆಲವರಿಗೆ ನಾನು ಏನಾದರೂ ಮಾತಾಡಿಬಿಡಬಹುದು ಎಂಬ ಭಯ, ಹಾಗಾಗಿ ನನ್ನ ಭಾಷಣದ ಪೂರ್ವ ಪರೀಶೀಲನೆ ಮಾಡುವುದೊಳ್ಳೆಯದು ಎಂಬ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸಿದ್ದರು ಎಂಬುದು ನನಗೆ ಗೊತ್ತಾಗಿದೆ. ನಾನು ಇದನ್ನು ನನಗೆ ಮಾಡಿದ ಅವಮಾನ ಎಂದು ತಿಳಿಯುವುದಿಲ್ಲ, ಬದಲಿಗೆ ಆ ಸ್ನೇಹಿತರಿಗಿರುವ ಆತಂಕ ಎಂದಷ್ಟೇ ತಿಳಿಯುತ್ತೇನೆ. ಪಾಪ ಅವರ ಬಗೆಗೆ ನಾನು ಕೇವಲ ಕನಿಕರ ತೋರಿಸಬಹುದು ಅಷ್ಟೆ. ನನಗೆ ಕಂಡಂತೆ ದೇಶದಲ್ಲಿ ಈಗ ಎಲ್ಲಕ್ಕಿಂತಲೂ ಅಪಾಯಕಾರಿಯಾಗಿರುವ ಸಂಗತಿ ಏನಾದರೂ ಇದ್ದರೆ ಅದು ಬೌದ್ಧಿಕ ದಾಸ್ಯ ಮತ್ತು ಗುಲಾಮಿ ಮಾನಸಿಕತೆ. ಹೋಗಲಿ ಬಿಡಿ, ಈ ಪರಿಸ್ಥಿತಿ ಮುಂದೆ ಎಂದಾದರೂ ಸುಧಾರಿಸಿ ಈ ಮೊದಲಿನಂತೆ ಅಭಿವ್ಯಕ್ತಿಯ ಮುಕ್ತವಾತಾವರಣ ನಿರ್ಮಾಣವಾಗಬಹುದು ಎಂದು ಆಸೆ ಇರಿಸಿಕೊಳ್ಳುತ್ತೇನೆ. ಸ್ನೇಹಿತರೇ, ಭಯಪಡುವುದು ಬೇಡ, ನಾನು ನಿಮ ಆತಂಕವನ್ನು ಧಿಕ್ಕರಿಸುವುದಿಲ್ಲ, ಗೌರವಿಸುತ್ತೇನೆ. ನಿಮ ಮನಸ್ಸಿಗೂ ತಟ್ಟಬಹುದಾದ ಮಾತುಗಳನ್ನೇ ಆಡುತ್ತೇನೆ, ನಿರಾಳವಾಗಿರಿ.

ನಾನು ಉಪದೇಶವನ್ನಾಗಲೀ, ಆದೇಶವನ್ನಾಗಲೀ ಕೊಡುವ ಸ್ಥಾನದಲ್ಲಿದ್ದವನಲ್ಲ. ಹಾಗಾಗಿ ನಾನು ನನ್ನ ಭಾಷಣದ ಮೂಲಕ ನನ್ನ ಅನಿಸಿಕೆಗಳನ್ನು ನಿಮೆಲ್ಲರ ಮುಂದೆ ವಿನಮ್ರನಾಗಿ ಇಡುತ್ತಿದ್ದೇನೆ ಅಷ್ಟೆ. ನಿಮ ಹೆಚ್ಚು ಸಮಯ ತೆಗೆದುಕೊಳ್ಳದೇ, ಊರುದ್ದಕ್ಕೂ ಅಲೆಯದೇ ನೇರವಾಗಿ ಒಂದೆರಡು ಕೇಂದ್ರ ಅಂಶದ ಮೇಲೆ ನಾನು ಎರಡು ಭಾಗಗಳಲ್ಲಿ ಅಭಿಪ್ರಾಯವನ್ನು ಹಂಚಿಕೊಳ್ಳುತ್ತಿದ್ದೇನೆ. ಈ ಮುಂದೆ ನಾನು ಆಡಲಿರುವ ಮಾತುಗಳು ನನ್ನ ಸ್ವತಂತ್ರ ಚಿಂತನೆಯ ಫಲ ಮಾತ್ರ ಎಂದು ಮೊದಲಿಗೆ ತಿಳಿಸಲು ಬಯಸುತ್ತೇನೆ. ಮತ್ತು ನಾನು ಆಡಲಿರುವ ಮಾತುಗಳನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು ಎಂಬ ಹಠವಾಗಲಿ ಹಂಬಲವಾಗಲಿ ನನಗೆ ಇಲ್ಲ. ಅಭಿಪ್ರಾಯಗಳು ಇರಬೇಕಾದದ್ದೇ ಹಾಗೆ. ಭಿನ್ನತೆಯು ಸಮುದಾಯದ ಆರೋಗ್ಯದ ಲಕ್ಷಣ ಕೂಡ. ಆದರೆ ಆ ಕಾರಣದಿಂದ ಪರಸ್ಪರ ಮನಸ್ತಾಪಗಳು ಬರದಂತೆ ನಾವೆಲ್ಲರೂ ವಿಷಯ ಮಾತ್ರಕ್ಕೆ ನಮ ಭಿನ್ನತೆಯನ್ನು ಸೀಮಿತಗೊಳಿಸಿಕೊಳ್ಳಬೇಕು ಅಷ್ಟೆ. ಪರಸ್ಪರ ಎದುರುಬದುರು ಅಭಿಪ್ರಾಯ ವಿನಮಿಯ ಮಾಡಿಕೊಳ್ಳಬೇಕು, ಬಿಟ್ಟರೆ, ಬೇರೆ ಯಾವ ದಾರಿಯಾದರೂ ಅದು ಅಪೇಕ್ಷಣೀಯವಲ್ಲ, ಸೌಜನ್ಯವೂ ಅಲ್ಲ.

ಭಾಗ-1= ವಲಸೆ-ವೈಷಮ್ಯ

ಖ್ಯಾತ ಕವಿ ಗೋಪಾಲ ಕೃಷ್ಣ ಅಡಿಗರ ಕವಿತೆಯ ಸಾಲುಗಳನ್ನು ಇಲ್ಲಿ ನೆನಪಿಸಿಕೊಂಡು ಅಭಿಪ್ರಾಯ ಮಂಡನೆಗೆ ತೊಡಗುತ್ತಿದ್ದೇನೆ. ಅವರು ಹೀಗೆ ಬರೆಯುತ್ತಾರೆ:

ಸಾಮಾನ್ಯನೆಂದೆಯ? ತಪ್ಪು, ತಿಳಿದಿರು ಜೋಕೆ:
ಬೇಡಿಗೆ ಕೈಯೊಡ್ಡದವ, ಕತ್ತಿಗೆ ಇಕ್ಕಿದುರುಳನ್ನೆ
ಕಚ್ಚುತ್ತ ಕಡಿಯುತ್ತ ಸಿಗಿಯುತ್ತ ಅಗೆಯುತ್ತ
ಬಗೆಯುತ್ತಲೇ ಕಣ್ಣ ಮುಚ್ಚುವವ, 'ತಾಳಕ್ಕೆ ಸರಿ ಹೆಜ್ಜೆ'
ಹೂಂಕರಿಸುತ್ತಲಿದ್ದರೂ ನಿನ್ನ ಪಿಸ್ತೂಲು
ಮನಸ್ಸಿನಲ್ಲೇ ಬೇರೆ ತಾಳ ಲಯ ನಿಭಾಯಿಸುವ
ಹುಟ್ಟಾ ಸ್ವತಂತ್ರ ಪರಮಾಣುದೇಹಿ.

ಯಾವಾಗೆಲ್ಲ ನಾವು ಕರೆಯುವ ಈ ಸಾಮಾನ್ಯ ದುರುಪಯೋಗದ ವಸ್ತುವಾಗುತ್ತಾನೋ, ಯಾವಾಗೆಲ್ಲ ಆತ ಅನ್ಯಾಯದ ವಿರುದ್ಧ ಮೌನ ತಾಳುತ್ತಾನೋ ಆವಾಗೆಲ್ಲ ಇತಿಹಾಸ ಚಕ್ರ ತಾನು ತಿರುಗುವುದನ್ನು ನಿಲ್ಲಿಸಿಬಿಡುತ್ತದೆ. ಕಂಭದೊಳಗಿದ್ದ ಈ ಸಾಮಾನ್ಯ 'ನರ' ಸಂದರ್ಭ ಬಂದಾಗ 'ಸಿಂಹ'ನಾಗುವುದು ಕಾಲ ಕಾಲದ ಅಗತ್ಯವೆಂದು ಮತ್ತೆ ಹೇಳಬೇಕಾಗಿಲ್ಲ. ಆದರೆ ಇತ್ತೀಚಿನ ಇತಿಹಾಸವೆಲ್ಲ ಈ ಸಾಮಾನ್ಯರು ಸ್ವಾರ್ಥಿಗಳ ದಾಳವಾಗುತ್ತ ಸಿಂಹವಾಗುವುದನ್ನು ಮರೆತ ನರರ ಕತೆಯೇ ಆಗುತ್ತಿದೆ. ಅನ್ಯಾಯ, ಅತ್ಯಾಚಾರ, ದೌರ್ಜನ್ಯಗಳು ಘಟಿಸುತ್ತಲೇ ಇದ್ದರೂ ಈ 'ಪರಮಾಣುದೇಹಿ' ಸಿಡಿಯುವುದನ್ನು ಮರೆತೇ ಬಿಟ್ಟಿದ್ದಾನೇನೋ ಅನಿಸುತ್ತದೆ. ಎಂದರೆ ಆತನಿಗೆ ಅದು ಯಾವುದೂ ಜಾಗೃತವಾಗದಂತೆ ಸಾಧ್ಯವಿರುವ ಎಲ್ಲ ಮಾರ್ಗಗಳನ್ನೂ ಬಲವಂತವಾಗಿ, ಬುದ್ಧಿವಂತಿಕೆಯಿಂದ ಮುಚ್ಚಿಸಿ, ಮುಚ್ಚಿಸಿದವರು ಸುರಕ್ಷಿತವಾಗಿದ್ದಾರೆ.

ಹೀಗೆ ಈ ಅಭಿಪ್ರಾಯದ ಆಧಾರದ ಮೇಲೆ ನಾನು ನನ್ನ ಮಾತಿನ ಪ್ರಬಂಧ ಕಟ್ಟುತ್ತೇನೆ. ನಾನು ನನ್ನ ಮಾತುಗಳನ್ನು ಮುಂದುವರಿಸುವ ಮೊದಲು ಅದಕ್ಕೊಂದು ಅಡಿಪಾಯ ಹಾಕಬೇಕಾಗುತ್ತದೆ. ಈಗ ನಿಮ ಮುಂದೆ ಉಲ್ಲೇಖಿಸಿದ ನಂತರದಲ್ಲಿನ ಸಂಗತಿಗಾಗಿ ಈ ಅಡಿಪಾಯದ ಅಗತ್ಯವಿದೆ. ಮತ್ತೆ ಒಟ್ಟು ಮೂರು ಉಧೃತಿಗಳನ್ನು ದಾಖಲಿಸುತ್ತೇನೆ. ಮೊದಲನೆಯದು ಇದು:

1. 'ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್?
ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್?

ವಿವರವಾದ ಅರ್ಥ ವ್ಯಾಖ್ಯಾನಕ್ಕೆ ಹೋಗುವುದು ಈಗ ಅಗತ್ಯವಿಲ್ಲ. ಸಂದರ್ಭದ ಅಗತ್ಯಕ್ಕೆಷ್ಟು ಅಗತ್ಯವೋ ಅಷ್ಟನ್ನು ಹೇಳುತ್ತೇನೆ. 'ಇವನು ತನ್ನವನು, ಅವನು ಅನ್ಯನು ಎಂಬ ಎಣಿಕೆ ಸಣ್ಣ ಮನಸ್ಸಿನವರದು; ಆದರೆ ಉದಾರ ಚರಿತರಿಗೆ, ಎಂದರೆ ವಿಶಾಲ ಮನಸ್ಸಿನವರಿಗೆ, ಭೂಮಿಯೇ ಕುಟುಂಬ'. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಇವನು ನಮ ಧರ್ಮದವನು, ಇವನು ಅನ್ಯ; ಇವನು ನಮ ಜಾತಿ, ಇವನು ಅನ್ಯ; ಇವನು ಬೇರೆ ಊರಿನವನು, ದೇಶದವನು ಅಂತೆಲ್ಲ ತಿಳಿಯುವವರು ಸಣ್ಣ ಮನಸ್ಸಿನವರು. ಆದರೆ ಜಗತ್ತೇ ಒಂದು ಕುಟುಂಬದಂತೆ ಎಂದಾದ ಮೇಲೆ ಎಲ್ಲರೂ ನಮವರೇ ಎಂದು ಉದಾತ್ತ ಗುಣವುಳ್ಳವರು ತಿಳಿಯುತ್ತಾರೆ. ಈ ಶ್ಲೋಕವು ಮಹಾ ಉಪನಿಷತ್ತಿನಿಂದ ತೆಗೆದುಕೊಂಡಿದ್ದು. ಸ್ವಾರಸ್ಯವೆಂದರೆ ಈ ಶ್ಲೋಕವನ್ನು ಲಾಗಾಯ್ತಿನಿಂದಲೂ ತಿರುತಿರುಗಿ ಉಚ್ಚರಿಸಿ ಹಳೆ ಕಾಲದ ಗ್ರಾಮಫೋನ್ ಪ್ಲೇಟ್ ಸವೆದು ಹೋಗುವಂತೆ ಸವೆದು ಹೋಗಿಬಿಟ್ಟಿದೆ, ಕ್ಲೀಷೆಯಾಗಿಬಿಟ್ಟಿದೆ. ಆದರೆ ವಾಸ್ತವದಲ್ಲಿ ಆ ಶ್ಲೋಕದ ಆದರ್ಶ ನಮ ನಡವಳಿಕೆಯಲ್ಲಿದೆಯೇ? ಇವನು ನಮವನಲ್ಲ, ಇವನು ಹೊರಗಿನವನು, ಬೇರೆ ಧರ್ಮದವನು, ಇವನು ಈ ದೇಶದವನಲ್ಲ, ಹೊರಗಿನಿಂದ ಬಂದವನು ಅಂತೆಲ್ಲ ಶ್ಲೋಕದ ಭಾವನೆಗೆ ವಿರುದ್ಧವಾದ ನಡವಳಿಕೆಯಿದೆ, ಮತ್ತು ಹಾಗಿರುವುದಕ್ಕಾಗಿಯೇ ತೀವ್ರ ಸಂಘರ್ಷಗಳು ಘಟಿಸುತ್ತಲೇ ಇರುತ್ತವೆ.

ಮತ್ತೆ ಎರಡು ಪದ್ಯದ ಸಾಲನ್ನು ಉದ್ಧರಿಸುತ್ತೇನೆ:

ಒಂದೆ ಗಗನವ ಕಾಣುತೊಂದೆ ನೆಲವನು ತುಳಿಯು
ತೊಂದೆ ಧಾನ್ಯವನುಣ್ಣುತೊಂದೆ ನೀರ್ಗುಡಿದು?
ಒಂದೆ ಗಾಳಿಯನುಸಿರ್ವ ನರಜಾತಿಯೊಳಗೆಂತು?
ಬಂದುದೀ ವೈಷಮ್ಯ-ಮಂಕುತಿಮ ಮನುಜ
ಕುಲವೊಂದೊಬ್ಬನಿನ್ನೊಬ್ಬನಂತಿಲ್ಲ?
ತನುವಂಗಗಳೊಳೊಂದು, ರೂಪ ಗುಣ ಬೇರೆ?
ಮನದೊಳೊಬ್ಬೊಬ್ಬನೊಂದೊಂದು ಪ್ರಪಂಚವೀ?
ತನುವೇಕದೊಳ್ ಬಹುಳ- ಮಂಕುತಿಮ -ಮಂಕುತಿಮನ ಕಗ್ಗ

ಈ ಎರಡೂ ಪದ್ಯಗಳ ಮತಿತಾರ್ಥ ತುಂಬ ಸರಳವಾಗಿದೆ. ಈ ಆಕಾಶ, ಈ ನೀರು, ಈ ಗಾಳಿ ಹೀಗೆ ಏನೆಲ್ಲ ಪಂಚಭೂತಗಳು ಇವೆಯೋ ಅದೆಲ್ಲವನ್ನೂ ಎಲ್ಲರೂ ತಮತಮಗೆ ಬೇಕಾದ ಹದದಲ್ಲಿ ಬೇಕು ಬೇಕಾದಾಗ ಒಂದೇ ಸಮನಾಗಿ ಅನುಭವಿಸುತಾರೆ. ಆದರೆ ಹೀಗಿದ್ದರೂ ಅವರ ನಡುವೆ ಈ ವೈಷಮ್ಯ ಹೇಗೆ ಹುಟ್ಟಿಕೊಳ್ಳುತ್ತದೆ ಎಂಬ ಅಚ್ಚರಿ, ಪರೋಕ್ಷ ವ್ಯಾಕುಲತೆ ಮೊದಲ ಸಾಲುಗಳಲ್ಲಿ ವ್ಯಕ್ತವಾಗಿದೆ. ಎರಡನೆಯದರಲ್ಲಿ ಅದು ಇನ್ನಷ್ಟು ಸಾಂದ್ರವಾಗಿದೆ. ಮನುಷ್ಯರು ಒಬ್ಬರಂತೆ ಮತ್ತೊಬ್ಬರು ಇರುವುದಿಲ್ಲ, ಎಲ್ಲರ ಶರೀರದ ಅಂಗಗಳು ಒಂದೇ ಇದ್ದರೂ ರೂಪು ಗುಣ ಎಲ್ಲ ಬೇರೆ ಬೇರೆ ಇರುತ್ತದೆ; ಆದರೆ ಒಂದೇ ಶರೀರದಲ್ಲಿ ಬೇರೆ ಬೇರೆ ಅಂಗಗಳಿದ್ದರೂ ಅವೆಲ್ಲ ಕೂಡಿಕೊಂಡು ಒಂದೇ ತನುವಾಗುತ್ತದೆ. 'ತನುವೇಕದೊಳ್ ಬಹುಳ'. ಕೇಳಿದ್ದೇವೆ: 'ಅನೇಕತೆಯಲ್ಲಿ ಏಕತೆ', 'ನಾವೆಲ್ಲರು ಒಂದೆ ಜಾತಿ ಒಂದೆ ಮತ ನಾವು ಮನುಜರು' (ಅಡಿಗ).

ನಾನು ಈ ಮೂರು ಅಭಿಪ್ರಾಯಗಳನ್ನು ಉದ್ಧರಿಸಿದ್ದು ನಾನು ಮುಂದೆ ಹೇಳಲಿರುವ ಮಾತುಗಳಿಗೆ ಒತ್ತಾಸೆಯಾಗಿರಲಿ ಎಂಬುದಕ್ಕಾಗಿ. ಇವೆಲ್ಲವೂ ಆದರ್ಶಕ್ಕೆ ಸರಿ, ಆದರೆ ವಾಸ್ತವದ ಆಚರಣೆಯಲ್ಲಿ ಅಷ್ಟಾಗಿ ಇರುವುದಿಲ್ಲ. ಮತ್ತೆ ಎಷ್ಟೇ ಆದರ್ಶ ದೊಡ್ಡದಾಗಿದ್ದರೂ ಅದು ಆಚರಣೆಯಲ್ಲಿಲ್ಲವೆಂತಾದರೆ ಅವೆಲ್ಲ ಕಸ ಮಾತ್ರವಾಗುತ್ತದೆ. ಆ ಮಾತುಗಳು ಸದಾ ನಮನ್ನು ಅಣಕಿಸುತ್ತಿರುತ್ತವೆ. ಈ ವೈರುಧ್ಯವನ್ನು ನಿಜವಾಗಿ ಅರ್ಥ ಮಾಡಿಕೊಳ್ಳಬೇಕಾದದ್ದು ಸಾಮಾನ್ಯರು ಎಂದು ಕರೆಯುವ 'ನರ ಸಿಂಹ'ರು.ಕ್ಷಮಿಸಿರಿ, ನಾನು ನನ್ನ ಮಾತುಗಳನ್ನು ಸಾಹಿತ್ಯ ಸಮೇಳನದಲ್ಲಿನ ಸಂಪ್ರದಾಯದಂತೆ ಆರಂಭ ಮಾಡಿಲ್ಲ. ಈ ವಿಷಯದಲ್ಲಿ ನಾನು ಕೊಂಚ ಭಿನ್ನ. ಹಾಗೆಯೇ ಕೊಂಚ ಮೊಂಡ, ಹೇಳಬೇಕೆನಿಸಿದ್ದನ್ನು ಹೇಳಿಬಿಡುತ್ತೇನೆ.

ಹೌದಲ್ಲವಾ, ಇದೆಲ್ಲ ಈಗ ಇದೆಯ? ಸಾಗರಕ್ಕೆ ಮೊದಲಿದ್ದ ಮುಗ್ಧತೆ ಈಗ ಇದೆಯ? ಆಗ ಇದ್ದ ಸಂತೋಷ ಸಂಭ್ರಮ ಈಗ ಇದೆಯ? ದೂರದ ಸಾಗರ ಪೇಟೆಯಿಂದ ಬಂದು ಒಂದೆಡೆ ಬೀಡು ಬಿಟ್ಟು ಮತ್ತೆ ಅದನ್ನೆಲ್ಲ ತಲೆಯ ಮೇಲೆ ಹೊತ್ತು ತಂದು ನಮಗೆಲ್ಲ ಖರ್ಜೂರ, ಕಿತ್ತಳೆ, ಮಂಡಕ್ಕಿ ಇತ್ಯಾದಿ ತಿನ್ನಿಸುತ್ತಿದ್ದ ಯಾರುಯಾರೋ ವ್ಯಕ್ತಿಗಳ ಪ್ರೀತಿ ಮುಗ್ಧತೆ ಈಗ ಇದೆಯ? ಹೀಗೆ ಪೇಟೆಯಿಂದ ಹೊತ್ತು ತರುತ್ತಿದ್ದ ಕೆಲವು ಸಾಹೇಬರು ನಾನು ಸಾಗರದಲ್ಲಿ ವಾಸಿಸಲು ತೊಡಗಿದ ಮೇಲೆ, ಎಷ್ಟೋ ವರ್ಷವಾದರೂ ಮರೆಯದೇ, ಕಂಡಾಗಲೆಲ್ಲ ನನ್ನ ಕುಟುಂಬದ ಎಲ್ಲರನ್ನೂ ಮನಸಾರೆ ನೆನೆದುಕೊಂಡು ಪ್ರೀತಿ ಹಂಚುತ್ತಿದ್ದ ವಾತಾವರಣ ಈಗ ಇದೆಯ? ಸಾಗರಕ್ಕೆ ಆಗ ಇದ್ದ ಮೌನಕ್ಕೂ ಬೆಲೆ ಇದ್ದಿತ್ತು. ಈಗ ಎಷ್ಟು ಮಾತಿದ್ದರೂ ಮೌಲ್ಯವೇ ಇಲ್ಲದಂತಾಗಿಬಿಟ್ಟಿದೆ. ಈಗ ಸದ್ದು ಸಂಗೀತವಾಗದೇ ಗದ್ದಲವಾಗಿಬಿಟ್ಟಿದೆ. ಆಗ ಸದ್ದಿಲ್ಲದೇ ಇದ್ದ ಸಾಗರದಲ್ಲಿ ಕೆಲವೇ ವರ್ಷಗಳ ಹಿಂದೆ ಹಗಲು ಹೊತ್ತೇ ದೊಂದಿ ಹೊತ್ತ ಕೊಳ್ಳಿ ದೆವ್ವಗಳು ಓಡಾಡಿ ಗುರಿ ಮಾಡಿ ಬೆಂಕಿ ಹಚ್ಚಿದಾಗ, ಈ ಸಂಬಂಧಗಳು, ಈ ಪ್ರೀತಿ, ಈ ಸೌಹಾರ್ದ, ಇವರೆಲ್ಲ ನಮವರು, ಇವರು ಯಾರೂ ಬೇರೆ ಅಲ್ಲ ಎಂದು ಬುದ್ಧಿಪೂರ್ವಕವಾಗಿ ಯೋಚಿಸದೇನೇ ಪರಸ್ಪರ ನಂಬಿಕೆ ವಿಶ್ವಾಸ ಪ್ರೀತಿಯಿಂದ ಇರುತ್ತಿದ್ದ ಸಂದರ್ಭದಲ್ಲಿಯೇ ಅದೆಲ್ಲ ಹೇಗೆ ಯಾರು ಯಾರದೋ ಸ್ವಾರ್ಥಕ್ಕೆ ಸುಟ್ಟುಹೋದವು ಎಂಬುದನ್ನು ನೆನೆದರೆ ದುಃಖವಾಗುತ್ತದೆ. ಈ ಹಿಂದೆ ಆರಂಭದಲ್ಲಿ ಪ್ರಸ್ತಾಪಿಸಿದ 'ಸಾಮಾನ್ಯ'ರೇ ಹಾಗೆ ಅಸಾಮಾನ್ಯವಾಗಿ ವರ್ತಿಸಿದ್ದು ಎಂಬುದನ್ನು ನೆನೆದರೆ ಯಾವುದೇ ಸಾಮಾನ್ಯ ಖಂಡಿತವಾಗೂ ಸಾಮಾನ್ಯನಲ್ಲವೆಂಬುದು ಅರ್ಥವಾಗುತ್ತದೆ. ಕಾಣದ ಕೈಗಳ ಆಯುಧಗಳಾದ ಈ ಸ್ಫೋಟಿಸುವ ಅದ್ಭುತ ಶಕ್ತಿ ಇರುವ 'ಪರಮಾಣು ದೇಹಿ' ಈ ಸಾಮಾನ್ಯರು ಅನ್ಯಾಯದ ವಿರುದ್ಧ 'ನರಸಿಂಹ'ಗಳಾಗಬೇಕಾಗಿದ್ದವರೇ ಹತಾರಗಳಾದದ್ದು ಈ ಪ್ರೀತಿಯ ಸಾಗರದ ವ್ಯಗ್ರ ರೂಪ. ಈಗಲೂ ಅಂತಹ ನರಸಿಂಹರಿರುತ್ತಾರೆ. ಆದರೆ ಜಾಗೃತ ಅವಸ್ಥೆಯಲ್ಲಿಲ್ಲ; ಅವರು ಕಂಭದೊಳಗೇ ಇದ್ದುಬಿಟ್ಟಿದ್ದಾರೆ. ಯಾರಾದರೂ ಆ ಕಂಭವನ್ನು ಸೀಳಬೇಕಾಗುತ್ತದೆ.

ನೆಮದಿಯ ಬದುಕಿಗೆ ಪ್ರಕೃತಿಯಲ್ಲಿ ಪಾಠವಿಲ್ಲವೇ? ಇದೆ, ಆದರೆ ಅದನ್ನು ಗಮನಿಸಬೇಕು ಅಷ್ಟೆ. ಸಾಗರ ತಾಲ್ಲೂಕಿನಲ್ಲಿ ಎರಡು ನದಿಗಳು ಹರಿಯುತ್ತವೆ. ಒಂದು ಶರಾವತಿ ಮತ್ತೊಂದು ವರದೆ. ಶರಾವತಿ ಪಶ್ಚಿಮ ಮುಖಿಯಾದರೆ ವರದೆ ಪೂರ್ವ ಮುಖಿ. ಒಂದು ಅರಬ್ಬೀ ಸಮುದ್ರ ಸೇರಿದರೆ ಮತ್ತೊಂದು ಬೇರೊಂದು ನದಿಯೊಂದಿಗೆ ಸಂಗಮವಾಗಿ ಬಂಗಾಳಕೊಲ್ಲಿ ಸೇರುತ್ತದೆ. ಶರಾವತಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಹುಟ್ಟಿ, ಹೊಸನಗರ ತಾಲ್ಲೂಕನ್ನು ತಬ್ಬಿ ಸಾಗರಕ್ಕೆ ಬರುತ್ತದೆ. ಮತ್ತೆ ಅದು ಜೋಗ ಜಲಪಾತವಾಗಿ ನೋಡುವವರ ಸಂತೋಷಕ್ಕೆ ಕಾರಣವಾಗಿ ಮುಂದೆ ಹೊನ್ನಾವರ ತಾಲ್ಲೂಕಿನಲ್ಲಿ ಸಮುದ್ರ ಸೇರುತ್ತದೆ. ಶರಾವತಿಯ ನೀರು ಯಾವುದು, ಸಮುದ್ರದ ಈ ಮೊದಲ ನೀರು ಯಾವುದು ಎಂದು ಬೇರ್ಪಡಿಸಲು ಸಾಧ್ಯವಾಗದೇ ಸೇರಿಕೊಂಡು ವಿಲೀನವಾಗಿಬಿಡುತ್ತದೆ. ಹಾಗೆಯೇ ವರದೇ ಸಾಗರ ತಾಲ್ಲೂಕಿನಲ್ಲಿ ಹುಟ್ಟಿ ಸೊರಬ ತಾಲ್ಲೂಕು ತಬ್ಬಿಕೊಂಡು, ಬೇರೆ ಬೇರೆ ತಾಲ್ಲೂಕು ಜಿಲ್ಲೆಯನ್ನು ತಟಾದು ಮುಂದೆ ಸಮುದ್ರದಲ್ಲಿ ಯಾವ ನೀರೆಂದು ಗುರುತು ಸಿಗದಂತೆ ಬಂಗಾಳಕೊಲ್ಲಿಯಲ್ಲಿ ಲೀನವಾಗಿಬಿಡುತ್ತದೆ. ಈ ಮೊದಲಿದ್ದ ಸಮುದ್ರದ ನೀರಿನೊಂದಿಗೆ ಸೇರಿದ ನೀರು ಜಗಳ ಆಡುವುದಿಲ್ಲ, ನೀನು ನಮವನಲ್ಲ ಹೊರಗೆ ಹೋಗು ಎಂದು ಮೊದಲೇ ಇದ್ದ ನೀರು ಕೂಡ ಹೇಳುವುದಿಲ್ಲ. ಈ ನದಿಗಳು ಕೂಡ ತಾವು ಹೋಗುವ ಹಾದಿಯಲ್ಲೆಲ್ಲಾ ಬಂದು ಬಂದು ಸೇರುವ ಸಣ್ಣ ಸಣ್ಣ ಹಳ್ಳಕೊಳ್ಳಗಳ ನೀರನ್ನು ತಕರಾರು ಮಾಡದೇ ತಮದಾಗಿಸಿಕೊಳ್ಳುತ್ತವೆ ಕೂಡ.

ಇದರಲ್ಲೇನಿದೆ ಪಾಠ ಎಂದು ಕೇಳಬಹುದು. ಈ ಎರಡೂ ನದಿಗಳೂ ಒಂದು ರೀತಿಯಲ್ಲಿ ವಲಸಿಗರು. ಎಂದರೆ ಹುಟ್ಟಿದ ಜಾಗ ಬಿಟ್ಟು ಬೇರೆ ಬೇರೆ ಜಾಗಗಳಲ್ಲಿ ಬಂದು ಸೇರುವ ನೀರನ್ನೆಲ್ಲ ಸೇರಿಸಿಕೊಂಡು ಜೀವಂತಗೊಳ್ಳುತ್ತ ಮುಂದೆ ವಿಶಾಲ ಸಾಗರದಲ್ಲಿ ಲೀನವಾಗುತ್ತವೆ. ಹುಟ್ಟಿದ ಜಾಗದಲ್ಲಿ ಸದಾ ನೀರು ಇದ್ದರೂ ಅದು ಹೊಸ ನೀರೇ ಆಗಿರುತ್ತದೆಯಷ್ಟೆ. ಮನುಷ್ಯರು ಪ್ರೀತಿ ಹಂಚುವಂತೆ ಈ ನದಿಗಳು ಬದುಕನ್ನೇ ಹಂಚುತ್ತವೆ. ಈ ನೀರು ನಮಗೆ ಬೇಡ, ಇದು ನಮದಲ್ಲ ಎಂದು ಬೇರೆ ಪ್ರದೇಶದವರು ಯಾರಾದರೂ ಹೇಳುತ್ತಾರೆಯೇ? ಆದೇ ಈ ನೀರು ವಿವಿಧ ಅಗತ್ಯಗಳಿಗೆ ಬೇಕು.

ಒಂದಲ್ಲ ಒಂದು ಕಾರಣಕ್ಕಾಗಿ ನಾವು, ಅಥವಾ ನಮ ಪೂರ್ವಜರು, ವಲಸಿಗರಾಗಿದ್ದು ಈಗ ಹೊಸ ವಲಸಿಗರ ಮೇಲೆ ದರ್ಪ ತೋರಿಸುವುದು ನಮೆದುರೇ ನಡೆಯುತ್ತದೆ. ವಲಸಿಗರನ್ನು ಹೊರಹಾಕುವುದಕ್ಕಾಗಿ ಕಾನೂನುಗಳನ್ನು ಮಾಡುತ್ತೇವೆ, ಮಾವೀಯತೆ ಇತ್ಯಾದಿ ಯಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೇ ಬಲವಂತವಾಗಿ ಹೊರಗೆ ದಬ್ಬುತ್ತೇವೆ. ನಾವು ದಬ್ಬುತ್ತೇವೆ, ಅದೇ ಹೊತ್ತಿಗೆ ನಮವರನ್ನು ಮತ್ತೊಬ್ಬರು ದಬ್ಬಿದರೆ ಇದು ಅನ್ಯಾಯ ಎಂದು ಪರತಪಿಸುತ್ತೇವೆ. ಆ ಧರ್ಮ ಈ ಧರ್ಮ ಎಂಬುದರಿಂದ ಅನೇಕ ಅನಾಹುತಗಳನ್ನು ಕಂಡಿದ್ದೇವೆ. ಧರ್ಮದ ಮೂಲವು ದಯೆಯಾದರೂ ಧರ್ಮ ಕಾರಣದ ನಿರ್ದಯ ಹಿಂಸೆ ನಡೆಯುತ್ತಲೇ ಇರುತ್ತದೆ.

ದೇಶದ ಕಾಲ್ಪನಿಕ ಗಡಿಗೆರೆಗಳ ನಡುವೆಯೂ ಮಾನವೀಯ ನೆಲೆಯಲ್ಲಿ ಇದಕ್ಕೆಲ್ಲ ಪರಿಹಾರ ಕಂಡುಕೊಳ್ಳಬೇಕಲ್ಲವೇ? ನಾವು ಮೊದಲಿದ್ದವರು, ಹಾಗಾಗಿ ಇದು ನಮದು; ನೀನು ನಂತರ ಬಂದವನು ಮತ್ತು ನಮ ಸಮುದಾಯಕ್ಕೂ ಸೇರದವನು, ನೀನು ನಡೆ ಹೊರಗೆ ಎಂಬುದು ನಿಸರ್ಗ ನಿಯಮಕ್ಕೆ ವಿರುದ್ಧವಾದದ್ದು. ನಾವು ಆಧುನಿಕರಾಗುತ್ತ, ಹೊರಗಿಡುವವರ ಸಂಖ್ಯೆಯನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದೇವೆ. ನಮ ಸುತ್ತ ಇರುವವರೆಲ್ಲರೂ ನಮ ಶತ್ರುಗಳಂತೆಯೂ ಅವರು ನಮ ಸುಖ ಸಂತೋಷ ಸ್ವತ್ತುಗಳನ್ನು ಕಿತ್ತುಕೊಳ್ಳುವ ದರೋಡೆ ಕೋರರಂತೆಯೂ ಕಾಣಸಿಕೊಳ್ಳುವ ವಿಪರೀತ ಮನಃಸ್ಥಿತಿ ನಮದಾಗುತ್ತಿದೆ.

ಈ ಸಂದರ್ಭದಲ್ಲಿ ಈ ಮೊದಲು ಉದ್ಧರಿಸಿದ ವಸುಧೈವ ಕುಟುಂಬಕಂ ಎಂದರೆ ಭೂಮಿಯೇ ಕುಟುಂಬ ಎಂಬುದರ ಅರ್ಥವಿಸ್ತಾರವನ್ನು ಮಾಡಿಕೊಳ್ಳಬಹುದು ಅಂತ ಅಂದು ಕೊಳ್ಳುತ್ತೇನೆ. ಹಾಗೆಯೇ ಮಂಕುತಿಮನ ಕಗ್ಗದ ತನುವೇಕದೊಳ್ ಬಹುಳ, ಪಂಚಭೂತಗಳನ್ನು ಒಂದೇ ಸಮನಾಗಿ ಬಳಸಿಯೂ ಏಕೆ ಬೇರೆ ಬೇರೆ ಎಂಬುದನ್ನೂ ಕೂಡ ಅರ್ಥಮಾಡಿಕೊಳ್ಳುವುದು ಸಾಧ್ಯ ಅಂತಂದುಕೊಳ್ಳುತ್ತೇನೆ. ಆ ಎರಡು ಪದ್ಯಗಳು ಏನು ನಿಜವಾಗಿ ಯಾವ ಸಂದೇಶವನ್ನು ಕೊಡುತ್ತದೆ ಎಂಬುದನ್ನು ಕೂಡ ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ ಅಂತ ಅಂದುಕೊಂಡಿದ್ದೇನೆ. ಹೀಗಾಗಿ ಅವುಗಳನ್ನು ದಯವಿಟ್ಟು ಮತ್ತೆ ಓದಿಕೊಳ್ಳಿ.

ಕನ್ನಡದ ಪ್ರಾಚೀನ ಲಕ್ಷಣ ಗ್ರಂಥವಾದ 'ಕವಿರಾಜ ಮಾರ್ಗ'ದ ಒಂದು ಪದ್ಯವನ್ನು ಈ ಸಂದರ್ಭದಲ್ಲಿ ನೆನಪಿಗೆ ತಂದುಕೊಡುತ್ತೇನೆ. ಅದು ಹೀಗಿದೆ:

ಕಸವರವೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ?
ಕಸವೇನ್ ಕಸವರಮೇನುಬ್ಬುಸಮಂ ಬಸಮಲ್ಲದಿರ್ದು ಮಾಡುವುವೆಲ್ಲಂ?

ಯಾರೇ ಆಗಿರಲಿ, ಅವರ ನಡೆ ನುಡಿ ಆಚಾರ ವಿಚಾರ ಧರ್ಮ ಹೀಗೆ ಯಾವುದೇ ಇರಲಿ, ಆದರೆ ಅದನ್ನು ಸಹಿಸಿಕೊಳ್ಳುವುದೇ ಕಸವರ, ಎಂದರೆ ಅದೇ ಚಿನ್ನ ಮತ್ತು ಚಿನ್ನ. ಏನಾದರೂ ಸರಿ, ತಲೆಯಲ್ಲಿ ಹುಳ ಬಿಟ್ಟುಕೊಂಡವರರಿಗೆ, ಕಸ ಮತ್ತು ಕಸವರದ ವ್ಯತ್ಯಾಸ ಅರ್ಥವಾಗುವುದಿಲ್ಲ ; ಬರೇ ಉಬ್ಬಸಪಡುತ್ತಾರೆ. ಹೀಗೆ ಅದರ ಅರ್ಥ ವಿಸ್ತಾರ ಮಾಡಬಹುದು. ಒಟ್ಟು ಹೇಳುವುದೆಂದರೆ ಭಿನ್ನತೆ ಸಹಜ ಆದರೆ ಅದನ್ನು ಸಹಿಸಿಕೊಳ್ಳುವುದು ಕೂಡ ಸಹಜವಾಗಬೇಕು.

ಇಂತಹ ಎಷ್ಟೊಂದು ಮಾತುಗಳಿವೆ. 'ಕುಲಕುಲವೆಂದು ಹೊಡೆದಾಡದಿರಿ ನಿಮ ಕುಲದ ನೆಲೆಯನೇನಾದರೂ ಬಲ್ಲಿರಾ?' ಅಂತ ಕನಕದಾಸರು ಅರ್ಥ ಮಾಡಿಸಲು ಪ್ರಯತ್ನಿಸಿದರು. 'ಸತ್ಯ ಹರಿಶ್ಚಂದ್ರ' ಚಲನಚಿತ್ರದಲ್ಲಿ ಘಂಟಸಾಲ ಹಾಡಿದ ಹಾಡು, 'ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪ, ಮತದಲ್ಲಿ ಮೇಲ್ಯಾವುದೋ? ಹುಟ್ಟಿ ಸಾಯುವ ಮನ್ನಾಮನ್ನಾನ್ ಮಧ್ಯ, ಕೀಳ್ಯಾವ್ದು ಮೇಲ್ಯಾವ್ದು' ಎಂಬುದು ಎಷ್ಟು ಉನ್ನತ ಆದರ್ಶದ್ದು. ಹೀಗೆ ಬೇರೆ ಬೇರೆ ಎಂದು ಬಡಿದಾಡುವವರು ಸತ್ತ ವೆ??ಲೆ ಯಾವ ಪ್ರತ್ಯೇಕತೆಗಾಗಿ ಹೊಡೆದಾಡಿದ್ದರೋ ಆ ಪ್ರತ್ಯೇಕತೆಯೇ ಸುಟ್ಟು ನೀರ್ನಾಮವಾಗುತ್ತದೆ ಎಂಬ ಮಾತುಗಳನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕು. ಆದಿ ಕವಿ ಪಂಪನ ಕಾವ್ಯದ 'ಮನುಜಕುಲಂ ತಾನೊಂದೆ ವಲಂ' ಎಂಬ ಆ ಮಾತು, ಹೀಗೆ ಇಂತಹ ಅನೇಕ ಮಾತುಗಳಿವೆಯಾದರೂ ಪರಸ್ಪರ ವೈಯಕ್ತಿಕವಲ್ಲದ ಸಾಮಾಜಿಕ, ರಾಜಕೀಯ, ಧಾರ್ಮಿಕ ವೈಷಮ್ಯ ಹೆಚ್ಚುತ್ತಲೇ ಇದೆ ಎಂಬುದು ಅದೆಂತಹ ವಿಪರ್ಯಾಸ! ಆದರೆ, ಆದರ್ಶ ಕೇವಲ ಮಾತುಗಳಾಗಬಾರದು, ಕೃತಿಯಾಗಬೇಕು.

ಆದರೆ, ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ ಏನೆಂದರೆ ಈ ಆದರ್ಶಗಳೆಲ್ಲ ಈಗ ಇದೆಯಾ? 'ಇವನಾರವ ಇವನಾರವ ಎನ್ನಿಸದಿರಯ್ಯಾ, ಇವ ನಮ ಇವ ನಮವನೆಂದೆನಿಸಯ್ಯಾ' ಅಂತ ಹೇಳಿದ ಬಸವಣ್ಣನಂಥವರ ಆದರ್ಶ ಈಗ ಇದೆಯ? ಆದರೆ ಒಂದು ಮಾತು ನಿಜ, 10ನೇ ಶತಮಾನದ ಈ ಕವಿರಾಜಮಾರ್ಗಕಾರ ಹೇಳುತ್ತಿದ್ದಾನೆಂದರೆ, 12ನೇ ಶತಮಾನದ ಬಸವಣ್ಣ ಹೇಳುತ್ತಿದ್ದಾನೆಂದರೆ ಆ ಕಾಲಕ್ಕೂ ಇವರು ನಮವರು ಇವರು ನಮವರಲ್ಲ ಎಂಬಂಥದೊಂದು ಸಂಘರ್ಷವಿದ್ದಿತ್ತು ಅಥವಾ ಎಲ್ಲ ಕಾಲದಲ್ಲೂ ಈ ಕಿಚ್ಚು ಇತ್ತು, ಅದಕ್ಕಾಗೇ ಅದು ಹಾಗಲ್ಲ ಎಂದು ತಿಳಿ ಹೇಳುತ್ತಲೇ ಬಂದಿದ್ದಾರೆ ಎಂದು ಭಾವಿಸಿಕೊಳ್ಳಬೇಕು. ಹಾಗಾದರೆ ಕಾಲ ಬದಲಾಗಿದೆಯಾ? ಈ ಪ್ರಶ್ನೆಗೆ ನನ್ನಲ್ಲಿ ಉತ್ತರವಿಲ್ಲ. ಉತ್ತರಕ್ಕೆ ನಾನು ಮತ್ತೆ ಗೋಪಾಲ ಕೃಷ್ಣ ಅಡಿಗರ 'ಶ್ರೀರಾಮನವಮಿ ದಿನವಸ' ಎಂಬ ಕವಿತೆಯ ಸಾಲುಗಳನ್ನು ನೆನೆದುಕೊಳ್ಳುತ್ತೇನೆ:

ವಿಜೃಂಭಿಸಿತು ರಾಮಬಾಣ; ನಿಜ. ಕತ್ತಲಿಗೆ
ಹತ್ತೆ ತಲೆ? ನೂರಾರೆ? ಅದು ಅಸಂಖ್ಯ:
ಕತ್ತರಿಸಿದರೆ ಬೆಳೆವ, ಬೆಳೆದು ಕತ್ತಿಗೆ ಬರುವ
ಅನಾದಿ; ಕೋದಂಡ ದಂಡವೂ ಹೀಗೆ ದಂಡ .

ಭಾಗ-2 ಅಭಿವೃದ್ಧಿಯ ಯಾತನೆ

ಸ್ನೇಹಿತರೇ ಕ್ಷಮಿಸಿ, ಮತ್ತೆ ನಾನು ಅದೇ ಶರಾವತಿ ನದಿಯಿಂದಲೇ ಎರಡನೇ ಭಾಗವನ್ನು ಆರಂಭಿಸುತ್ತಿದ್ದೇನೆ.

ಒಬ್ಬಳು ಹೆಣ್ಣು ಮಗಳ ಮೇಲೆ ಅತ್ಯಾಚಾರ, ದೌರ್ಜನ್ಯ, ಶೋಷಣೆ ಆಯಿತೆಂದರೆ ಕೂಡಲೇ ನಮ ಮನಸ್ಸಿಗೆ ನೋವಾಗುತ್ತದೆ ಮತ್ತು ಸಾಧ್ಯವಿರುವ ಎಲ್ಲ ರೀತಿಯ ಅವಕಾಶವನ್ನೂ ಬಳಸಿಕೊಂಡು ಅದನ್ನು ಪ್ರತಿಭಟಿಸುತ್ತೇವೆ ಮತ್ತು ಅತ್ಯಾಚಾರಿಗಳಿಗೆ ಶಿಕ್ಷೆ ಕೊಡಿಸುವವರೆಗೂ ವಿಧವಿಧದ ಹೋರಾಟ ಮುಂದುವರಿಸುತ್ತೇವೆ. ನಿಜ, ಇದು ಪ್ರತಿಭಟಿಸಲೇಬೇಕಾದ ಸಂಗತಿ. ಆದರೆ ಪ್ರಕೃತಿಯ ಮೇಲೆ ಅತ್ಯಾಚಾರವಾಗುತ್ತಿದ್ದರೆ ಅದು ಪ್ರತಿಭಟಿಸಲೇಬೇಕಾದ ಒಂದು ಮುಖ್ಯ ವಿಷಯವಾಗುವುದಿಲ್ಲ; ಇಂತಹ ವಿದ್ಯಮಾನಗಳ ಕುರಿತೇ ಚಿಂತಿಸುವವರು, ಕಾಳಜಿ ವಹಿಸುವವರು ಯಾರೋ ಕೆಲವರು ಅದಕ್ಕೆ ಪ್ರತಿಕ್ರಿಯೆ ಕೊಡುತ್ತಾರೆ. ಆದರೆ ಅಂತಹದೊಂದು ಪ್ರತಿಭಟನೆ ಗಟ್ಟಿಯಾಗಬೇಕೆಂದರೆ ಸಾಮಾನ್ಯರು ಅದರಲ್ಲಿ ಪಾಲ್ಗೊಳ್ಳಬೇಕು. ಈ ಹಿಂದೆ ಸ್ವಾತಂತ್ರ್ಯ ಚಳವಳಿಯಲ್ಲಿ ನಾಯಕರು ನೇತೃತ್ವ ಕೊಟ್ಟಾಕ್ಷಣಕ್ಕೆ ಸ್ವಾತಂತ್ರ್ಯ ದೊರಕುವುದು ಸಾಧ್ಯವಾಗುತ್ತಿರಲಿಲ್ಲ. 'ಪರಮಾಣುದೇಹಿ'ಯಾದ ಸಾಮಾನ್ಯರು ಸ್ಫೋಟಿಸತೊಡಗಿದಾಗ ಅದರ ವ್ಯಾಪಕತೆ, ಗಾತ್ರ, ಇವೆಲ್ಲವೂ ಎದ್ದು ಕಂಡಂತಾಗಿ ಮತ್ತು ಸಾಮಾನ್ಯರನ್ನು ಎದುರು ಹಾಕಿಕೊಂಡು ಸರ್ಕಾರ ನಡೆಸುವುದು ಕಷ್ಟ ಎಂಬುದಕ್ಕಾಗಿ ನಮಗೆ ಸ್ವಾತಂತ್ರ್ಯ ಸಾಧ್ಯವಾಯಿತು. ಹಾಗಾಗಿಯೇ ನಾನು ಹೇಳಿದ್ದು ಸಾಮಾನ್ಯರೆಂಬುವವರು ಸಾಮಾನ್ಯರಲ್ಲ, ಅವರು 'ನರ ಸಿಂಹ'ರು. ಆದರೆ ಈಗಲಾದರೋ ಈ ಸಾಮಾನ್ಯರೆಂಬುವವರು ನಿಸರ್ಗದ ವೆ??ಲೆ ನಡೆಯುತ್ತಿರುವ ಈ ಅತ್ಯಾಚಾರವನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ.

ನಿಸರ್ಗದ ಮೇಲೆ ಯಾಕೆ ಇಂತಹ ಅತ್ಯಾಚಾರವಾಗುತ್ತದೆ ಎಂದು ಕೇಳಿದರೆ ಅದಕ್ಕೆ ಉತ್ತರ ಅಭಿವೃದ್ಧಿ ಎಂದಾಗಿರುತ್ತದೆ. ಅಭಿವೃದ್ಧಿ ಎಂಬುದು ಮುಂದೆ ಬಂದಾಗ ಬಾಕಿಯೆಲ್ಲವೂ ಹಿಂದಾಗಿಬಿಡುತ್ತದೆ. ಅಭಿವೃದ್ಧಿ ಎಂಬುದು ಆಧುನಿಕತೆಯ ಪರಿಭಾಷೆಯೇ ಆಗಿಬಿಟ್ಟಿದೆ. ಆಧುನಿಕತೆಗೂ ನಾಗರಿಕತೆಗೂ ಸಂಬಂಧವಿದೆಯಷ್ಟೇ. ಸೌಕರ್ಯಗಳೇ ಆಧುನಿಕತೆಯ ಗುರುತು ಎಂದು ತಿಳಿಯುತ್ತಾರಷ್ಟೇ. ಮಹಾತ ಗಾಂಧಿಯವರು ನಾಗರಿಕತೆಯನ್ನು ಆಕ್ಷೇಪಿಸಿ ಪರೋಕ್ಷವಾಗಿ ಆಧುನಿಕತೆಯನ್ನು ಟೀಕಿಸಿದ್ದಾರೆ. ಅವರು ಹೀಗೆ ಹೇಳುತ್ತಾರೆ:

ಮೊದಲು ಜನರು ಎತ್ತಿನ ಗಾಡಿಗಳಲ್ಲಿ ದಿನಕ್ಕೆ 2 ಗಾವುದ ಪ್ರಯಾಣ ಮಾಡುತ್ತಿದ್ದರು. ಈಗ ರೈಲಿನಲ್ಲಿ ನಾಲ್ಕೈದುನೂರು ಮೈಲಿ ಹಾರಿ ಬಿಡುತ್ತಾರೆ. ನಾಗರಿಕತೆಯ ಔನ್ನತ್ಯದ ಕುರುಹಂತೆ! ಇನ್ನೂ ಪ್ರಗತಿಯಾದರೆ ಜನರು ವಿಮಾನಗಳಲ್ಲಿ ಪ್ರಯಾಣ ಮಾಡಿ ನಾಲ್ಕು ಗಳಿಗೆಯಲ್ಲಿ ಯಾವ ದೇಶಕ್ಕಾದರೂ ಹೋಗಬಲ್ಲರಂತೆ. ಬರುಬರುತ್ತಾ ಜನರು ಕೈಕಾಲು ಬಳಸುವ ಅಗತ್ಯವೇ ಇಲ್ಲ. ಒಂದು ಗುಂಡಿ ಒತ್ತಿದರೆ ಅವರ ಉಡುಪೆಲ್ಲ ಸಿದ್ಧವಾಗಿ ಬಂದು ನಿಲ್ಲುತ್ತದೆ. ಇನ್ನೊಂದು ಗುಂಡಿ ಒತ್ತಿದರೆ ಪತ್ರಿಕೆ ಬರುತ್ತದೆ. ಮತ್ತೊಂದು ಗುಂಡಿ ಒತ್ತಿದರೆ ಮೋಟಾರು ಸಿದ್ಧ. ಸನ್ನೆ ಮಾಡಿದರಾಯಿತು, ಐವತ್ತಾರು ಬಗೆಯ ಷಡ್ರಸಾನ್ನ ಬಡಿಸಿ ಸಿದ್ಧವಾಗಿ ಕೈಗೆ ಬರುತ್ತದೆ ಎಲ್ಲವೂ ಯಂತ್ರಗಳಿಂದಲೇ..?

ಗಾಂಧಿಯವರ ಈ ಮಾತುಗಳನ್ನು ಹೀಗೆ ಕೂಡ ಸಂಗ್ರಹಿಸಬಹುದು: ಆಧುನಿಕ ನಾಗರಿಕತೆ ಎಂಬುದು ಹೆಚ್ಚು ಲೌಕಿಕವೂ ಭೌತಿಕವೂ ದುರಾಸೆಯದ್ದೂ ಮತ್ತು ಶೋಷಣಾತಕವಾದದ್ದು ಆಗಿರುತ್ತದೆ. ಈ ನಾಗರಿಕತೆಯು ಆತವನ್ನು, ವೈಯಕ್ತಿಕ ಮಾನಸಿಕ ತಳಮಳ ಮತ್ತು ನೀತಿಯನ್ನು ನಿರ್ಲಕ್ಷಿಸುತ್ತದೆ. ಅಭಿವೃದ್ಧಿಯನ್ನು ಈ ಮಾತುಗಳಿಗೆ ಜೋಡಿಸಿ ನೋಡಬಹುದು.

ಈ ಮುಂದೆ ನಾನು ಆಡುವ ಮಾತುಗಳು ಈ ಅಭಿಪ್ರಾಯದ ವೆ??ಲೆಯೇ ನಿಂತಿದೆ.

ಯಾಕೆ ಈ ಮಾತುಗಳನ್ನು ಇಲ್ಲಿ ಎತ್ತಿಕೊಂಡಿದ್ದೇನೆಂದರೆ ಅಭಿವೃದ್ಧಿ ಎಂಬುದು ಕೇವಲ ಸೌಕರ್ಯಗಳ ವಿಸ್ತರಣೆಯಷ್ಟೇ ಹೊರತು ಮನುಷ್ಯತ್ವದ ವಿಕಾಸವೋ ವಿಸ್ತರಣೆಯೋ ಅಲ್ಲ. ಮನುಷ್ಯರು, ಮನುಷ್ಯತ್ವ ಇಂಥವೆಲ್ಲಕ್ಕೂ ಈ 'ಅಭಿವೃದ್ಧಿಯೇ ಮಂತ್ರ' ಎಂಬಲ್ಲಿ ಜಾಗವಿರುವುದಿಲ್ಲ. ಒಂದು ವಿಷವೃತ್ತ ಸೃಷ್ಟಿಯಾಗುತ್ತದೆ. ಈ ಅಭಿವೃದ್ಧಿ ಮಂತ್ರದಲ್ಲಿ ಒಂದು ಸ್ವಾರಸ್ಯವಿದೆ. ಹತ್ತು ಜನರಿಗೆ ಸಂಕಷ್ಟ ಕೊಟ್ಟು ಮತ್ತೆ ನೂರು ಜನರಿಗೆ ಸೌಕರ್ಯವೃದ್ಧಿಯಾದರೆ ಅದು ಅಭಿವೃದ್ಧಿಯಂತೆ! ಎಂದರೆ ಅಭಿವೃದ್ಧಿಯಲ್ಲಿ ಕಡಿಮೆ ನಷ್ಟ ಹೆಚ್ಚು ಪ್ರಯೋಜನ ಎಂಬ ಪ್ರಮಾಣದ ಲೆಕ್ಕವಿದೆಯೆಂದಾಯಿತು. ಈ ಕಾರಣಕ್ಕಾಗಿಯೇ ಯಾವ ಸರ್ಕಾರವಾದರೂ ಅದು ಕೆಲವು ಜನರಿಗೆ ಮುಲಾಜಿಲ್ಲದೇ ತೊಂದರೆ ಕೊಟ್ಟು ಮತ್ತೆ ಕೆಲವು ನೂರು ಜನರಿಗೆ ಅನುಕೂಲ ಮಾಡಿಕೊಟ್ಟು ದೇಶದ ಅಭಿವೃದ್ಧಿಯಾಯಿತು ಎಂದು ಶಂಖ ಊದುತ್ತಿರುತ್ತದೆ. ಇಂತಹ ದೊಂದು ಸಿದ್ಧಾಂತದ ಕಾರಣದಿಂದಲೇ ಶರಾವತಿ ಮತ್ತೆ ಮತ್ತೆ ದೌರ್ಜನ್ಯಕ್ಕೆ, ಅತ್ಯಾಚಾರಕ್ಕೆ ಒಳಗಾಗುತ್ತಿರುವುದು. ಒಂದು ಲೆಕ್ಕ ಕೊಡುತ್ತೇನೆ:

ಹಿರೇಭಾಸ್ಕರ ಅಣೆ ಕಟ್ಟಿನಿಂದಾಗಿ 31.94 ಚದರ ಮೈಲು ಪ್ರದೇಶ ಮುಳುಗಡೆಯಾಯಿತು. ಇದರಲ್ಲಿ 9233 ಎಕರೆ ಕೃಷಿ ಪ್ರದೇಶವೂ 10,240 ಎಕರೆ ಅರಣ್ಯ ಪ್ರದೇಶವೂ ಮುಳುಗಡೆ ಯಾಯಿತು. ಲಿಂಗನಮಕ್ಕಿ ಅಣೆಕಟ್ಟೆಯಲ್ಲಿ ಒಟ್ಟು 16 ಚದರ ಮೈಲಿ ಪ್ರದೇಶದಲ್ಲಿ 15,165 ಎಕರೆ ಕೃಷಿ ಪ್ರದೇಶವೂ, 63,833 ಎಕರೆ ಅರಣ್ಯ ಪ್ರದೇಶವೂ ಮುಳುಗಡೆಯಾಯಿತು. ಲಿಂಗನಮಕ್ಕಿ ಅಣೆಕಟ್ಟೆಯ ಕಾರಣದಿಂದ 124 ಹಳ್ಳಿಗಳು ಮುಳುಗಡೆಯಾದವು. ಎಂದರೆ ಸಾವಿರಾರು ಸಂಖ್ಯೆಯ ಜನರು ನಿರ್ವಸಿತರಾದರು ಮತ್ತು ಇನ್ನೆಲ್ಲೋ ವಲಸಿಗರಾದರು. ಇದಲ್ಲದೇ ಆ ಅರಣ್ಯಗಳಲ್ಲಿದ್ದ ಪ್ರಾಣಿ, ಪಕ್ಷಿ, ಜಂತುಗಳ ವ್ಯಥೆಯ ಕಥೆ ಬೇರೆಯದ್ದೇ ಆಗಿರುತ್ತದೆ. ಯಾರೋ ತಾವು ಕಾಣದೇ ಇರುವ ಜನರ ಸೌಕರ್ಯಾಭಿವೃದ್ಧಿಗಾಗಿ ಇವರು ತ್ಯಾಗ ಮಾಡಬೇಕಾಯಿತು. ಇದನ್ನು ಬೇಕೆಂದೇ 'ತ್ಯಾಗ' ಎಂದು ಕರೆದೆ, ಅದನ್ನು ಹಾಗೆ ಕರೆದೇ ಜನರ ಮುಗ್ಧತೆಯನ್ನು ದುರುಪಯೋಗಪಡಿಸುಕೊಳ್ಳುವುದಕ್ಕೆ ಯಾವ ಸರ್ಕಾರವೂ ಸಂಕೋಚಪಡುವುದಿಲ್ಲ. ನಾನು ಆರು ಏಳನೇ ತರಗತಿಯಲ್ಲಿ ಓದುತ್ತಿದ್ದಾಗ ಲಾರಿಗಳಲ್ಲಿ ಮರದ ದಿಮಿಗಳನ್ನು, ಕಟ್ಟಿಗೆ ಸುಟ್ಟ ಮೂಟೆಮೂಟೆ ಇದ್ದಿಲನ್ನು ನಿರಂತರವಾಗಿ ಸಾಗಿಸುತ್ತಿದ್ದುದನ್ನು ಕಣ್ಣಾರೆ ಕಂಡಿದ್ದೇನೆ. ದಿನವೂ ಲೆಕ್ಕ ಸಾಧ್ಯವಾಗದಷ್ಟು ಪ್ರಮಾಣದಲ್ಲಿ ಸಾಗಣೆಯಾಗುತ್ತಿದ್ದವು. ಆಗ ಅದರ ಸಂಕಟ ನನಗೆ ಅರ್ಥವಾಗುತ್ತಿರಲಿಲ್ಲ, ಆ ಮಾತು ಬೇರೆ.

ಇಷ್ಟು ದೊಡ್ಡ ಪ್ರಮಾಣದಲ್ಲಿ ಅರಣ್ಯನಾಶವಾದದ್ದರಿಂದ ಘಾಸಿಗೊಂಡ ಪರಿಸರದ ಹಾನಿಯ ಲೆಕ್ಕ ಇದರಲ್ಲಿ ಸೇರಿಕೊಳ್ಳುವುದೇ ಇಲ್ಲ.

ಅದೆಲ್ಲ ಅಮೂರ್ತ, ಹಾಗಾಗಿ ಅಗಣ್ಯವೆನಿಸಿಬಿಡುತ್ತದೆ. ಯಾಕೆಂದರೆ ಅಭಿವೃದ್ಧಿ ಎಂಬುದು ಮನುಷ್ಯಕೇಂದ್ರಿತ. ಮನುಷ್ಯನ ಅಭಿವೃದ್ಧಿಯ ಮುಂದೆ ನಿಸರ್ಗದ ಬಾಕಿ ಎಲ್ಲವೂ ಗೌಣ. ಹಾಗಾಗಿ, ಈ ಅತ್ಯಾಚಾರ ಅಲ್ಲಿಗೇ ಮುಗಿಯಲಿಲ್ಲ. ನೀರಿನ ಸಂಗ್ರಹಕ್ಕಾಗಿ ಚಕ್ರ ಸಾವೆಹಕ್ಲು ಅಣೆಕಟ್ಟು ಕಟ್ಟಲಾಯಿತು. ಮತ್ತೆ ಕೃಷಿಭೂಮಿ, ಅರಣ್ಯ ಭೂಮಿ, ಜನರ ಸಂಕಟ ಇವೆಲ್ಲ ಪುನರಾವರ್ತನೆಯಾಯಿತು. ಒಂದು ಕೊಲೆ ಕಷ್ಟವಂತೆ, ಆದರೆ ಒಂದಾದ ವೆ??ಲೆ ಮತ್ತೆ ಎಷ್ಟಾದರೂ ಕೊಲೆ ಮಾಡುವುದಕ್ಕೆ ಹಿಂಜರಿಕೆಯಿರುವುದಿಲ್ಲವಂತೆ. ಹೀಗಾಯಿತು ಇದರ ಕಥೆ. ಈ ಅಭಿವೃದ್ಧಿಯ ತಪ್ಪು ವ್ಯಾಖ್ಯಾನ, ಅಭಿವೃದ್ಧಿಯೆಂಬುದು ಸೌಕರ್ಯಗಳ ವೃದ್ಧಿ ಎಂಬುದರಿಂದ ಜನಸಾಮಾನ್ಯರು ಎಷ್ಟೊಂದು ಸಂಕಟ ಅನುಭವಿಸಿದರು ಎಂಬುದರ ಲೆಕ್ಕ ಯಾರಿಗಾದರೂ ದೊರಕುತ್ತದೆಯ. ಅವರೆಲ್ಲ ತಾವಿದ್ದ ಜಾಗದಿಂದ ಮತ್ತೆಲ್ಲೆಲ್ಲಿಗೋ ವಲಸೆ ಹೋಗಿ ಅಲ್ಲಿಯೂ ನೆಲೆಗೊಳ್ಳಲಾಗದೇ ಎಷ್ಟೊಂದು ಕುಟುಂಬಗಳು ನಾಶವಾಗಿಹೋದವೋ ಯಾರಾದರೂ ಲೆಕ್ಕ ಇಟ್ಟಿದ್ದಾರ? ಈ ಅಣೆಕಟ್ಟೆ ಯಿಂದಾಗಿಯೇ ಮುಳುಗಡೆ ಸಂತ್ರಸ್ಥರಾದ ಕುಟುಂಬ ನಮದು. ಸ್ವಿಚ್ ಒತ್ತಿದಾಗ ಟಕ್ ಅಂತ ಬೆಳಗುವ ವಿದ್ಯುದ್ದೀಪದ ಹಿಂದಿನ ಈ ಸಂಕಟದ ಕರಾಳ ಕಥೆ ಆ ಬೆಳಕಿನಲ್ಲಿ ಯಾರಿಗೂ ಗೊತ್ತಾಗುವುದೇ ಇಲ್ಲ. ನಾವು ಅದೆಂತಹ ಮಾನಸಿಕ ತಳಮಳಕ್ಕೆ ಒಳಗಾಗಿದ್ದೆವು ಅದರಿಂದೆಲ್ಲ ಹೊರಗೆ ಬರುವುದಕ್ಕೆ ಎಷ್ಟು ಕಷ್ಟವಾಯಿತು ಎಂಬುದು ವಿವರಣೆಗೆ ನಿಲುಕುವುದಿಲ್ಲ. ಈ ಸಂಕಟವನ್ನೆಲ್ಲ ನೇರವಾಗಿ ಕಂಡುಂಡ ನಮಗೆ ನಾವಿರುವ ವರೆಗೂ ಮರೆತುಹೋಗುವುದಿಲ್ಲ. ನಾಗರಿಕತೆಯು ಶೋಷಣಾತಕ ಮತ್ತು ವೈಯಕ್ತಿಕ ಮಾನಸಿಕ ತಳಮಳವನ್ನು ನಿರ್ಲಕ್ಷಿಸುತ್ತದೆ ಎಂದು ಗಾಂಧಿ ಹೇಳಿದ ಮಾತು ಎಷ್ಟು ನಿಜ!

ಹಾಗಂತ ಶರಾವತಿಯ ಮೇಲಿನ ಅತ್ಯಾಚಾರ ಇಲ್ಲಿಗೇ ನಿಲ್ಲಲಿಲ್ಲ. ಶರಾವತಿ ಟೈಲರೀಸ್ ಎಂದರು. ಅದನ್ನು ಪರಿಸರಾಸಕ್ತರು ವಿರೋಧಿಸಿದರು. ಹಾಗಿದ್ದರೂ ಅದು ನಿಲ್ಲಲಿಲ್ಲ. ಹೋಗಲಿ ಇಷ್ಟೆಲ್ಲಾ ಆಯಿತಲ್ಲ ಇನ್ನಾದರೂ ಶರಾವತಿಯನ್ನು ತಣ್ಣಗೆ ಹರಿದುಹೋಗಲು ಬಿಡುವುದಕ್ಕೆ ಸರ್ಕಾರಗಳಿಗೆ ಸಾಧ್ಯವಾಗುವುದಿಲ್ಲ. ಕೆಲವೇ ವರ್ಷಗಳ ಹಿಂದೆ ಮತ್ತೊಂದು ಯೋಜನೆ ಸಿದ್ಧವಾಯಿತು. ಬೆಂಗಳೂರಿನ ಜನಕ್ಕೆ ಕುಡಿಯುವ ನೀರು ಕೊಡುವುದಕ್ಕೆ ಶರಾವತಿಯಿಂದ ನೀರನ್ನು ಕೊಂಡೊಯ್ಯುವ ಬೃಹತ್ ಯೋಜನೆ ಅದು. ವಾಸ್ತವವಾಗಿ ಇದೂ ಕೂಡ ಒಂದು ವಿಕೃತ ಯೋಜನೆ. ಈ ಯೋಜನೆಯ ಒಟ್ಟು ಪರಿಣಾಮಗಳ ಚಿಂತೆಯನ್ನೇ ಸರ್ಕಾರಗಳು ಮಾಡುವುದಿಲ್ಲವೆಂಬುದು ಮತ್ತೆ ಸಾಬೀತಾಯಿತು. ಅದು ಜನರ ವಿರೋಧದ ನಡುವೆ ಸ್ತಬ್ಧವಾಯಿತು. ಸ್ತಬ್ಧವಾಯಿತೋ ಅಥವಾ ಸದ್ಯಕ್ಕೆ ಸ್ತಬ್ಧವಾಯಿತೋ ಗೊತ್ತಾಗುತ್ತಿಲ್ಲ. ಈಗ ಇನ್ನೊಂದು ಅತ್ಯಾಚಾರಕ್ಕೆ ಸರ್ಕಾರ ಹೊರಟಿದೆ. ಜೋಗದಿಂದ ಬಿದ್ದು ಹರಿದುಹೋಗುವ ನೀರನ್ನು ಮತ್ತೆ ಮೇಲೆತ್ತಿ ವಿದ್ಯುತ್ ಉತ್ಪಾದಿಸುವ ಯೋಜನೆ ಅದು. 'ಶರಾವತಿ ಪಂಪ್?ಡ ಸ್ಟೋರೇಜ್ ಯೋಜನೆ' ಅಂತ ಹೆಸರು. ಈಗ ಹಾಲಿ ಇದು ಚರ್ಚೆಯ ಮತ್ತು ಆತಂಕದ ಸಂಗತಿಯಾಗಿದೆ. ಖ್ಯಾತ ಪರಿಸರ ಚಿಂತಕ ನಾಗೇಶ್ ಹೆಗಡೆಯವರು ಈಚೆಗೆ ಇಲ್ಲೇ ಸಾಗರದಲ್ಲೇ ಹೇಳಿದ್ದಾರೆ: 'ಶರಾವತಿ ಪಂಪ್?ಡ ಯೋಜನೆ ತೀರಾ ಅವೈಜ್ಞಾನಿಕವಾಗಿದೆ. ನೀರನ್ನು ಮೇಲಕ್ಕೆತ್ತಲು ಎಷ್ಟು ಪ್ರಮಾಣದ ವಿದ್ಯುತ್ ಅಗತ್ಯವಿದೆಯೋ ಅದಕ್ಕಿಂತ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯವಾಗದಿದ್ದರೆ ಅಂತಹ ಯೋಜನೆಯಿಂದ ಯಾವ ಪ್ರಯೋಜನ ಏದೆ'. ಅವರು ಮತ್ತೊಂದು ಮುಖ್ಯ ಮಾತು ಹೇಳಿದ್ದಾರೆ: 'ಪರಿಸರವನ್ನು ಕಾಪಾಡಿಕೊಂಡೇ ಅಭಿವೃದ್ಧಿ ಸಾಧಿಸುವ ಹಲವು ಪರ್ಯಾಯ ಮಾರ್ಗಗಳು ನಮೆದುರು ಇವೆ. ಅಭಿವೃದ್ಧಿ ಯೋಜನೆಗಳಿಗೆ ಕೋಟ್ಯಂತರ ರೂಪಾಯಿ ಖರ್ಚು ಮಾಡುವುದರಿಂದ ಸಿಗುವ ಲಾಭಗಳ ಬಗ್ಗೆ ಗುತ್ತಿಗೆದಾರರಿಗೆ, ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಹೆಚ್ಚು ಆಸಕ್ತಿ ಇದೆಯೇ ಹೊರತು ಪರಿಸರದ ಬಗ್ಗೆ ಅಲ್ಲ'. ಭ್ರಷ್ಟಾಚಾರ ಮತ್ತು ಉದ್ಯಮಿ ಹಿತಾಸಕ್ತಿಯ ಕರಾಳ ಸಂಬಂಧವನ್ನು ಈ ಮಾತು ತಿಳಿಸುತ್ತದೆಯಾದ ಕಾರಣ ಗಂಭೀರವಾಗಿ ಪರಿಗಣಿಸಬೇಕಾದ ಮಾತುಗಳು ಇವು.

ಅಭಿವೃದ್ಧಿಯ ಹುಚ್ಚು ಹತ್ತಿದ ಸರ್ಕಾರಗಳಿಗೆ ಜನಪರ ಜೀವಪರ ಪರಿಸರಪರ ಕಾಳಜಿ ಇರುವುದೇ ಇಲ್ಲವೆಂಬುದಕ್ಕೆ ಇದು ಒಂದು ಉದಾಹರಣೆಯಾಗಿದೆ. ಹೀಗಾಗಿ ಶರಾವತಿ ಲಾಗಾಯ್ತಿನಿಂದಲೂ ಅಭಿವೃದ್ಧಿಯ ವಿಕಾರದಿಂದ ಘಾಸಿಗೊಳ್ಳುತ್ತಲೇ ಬಂದಿದೆ, ಶೋಷಣೆ ಗೊಳಗಾಗುತ್ತಲೇ ಬಂದಿದೆ. ಮತ್ತೆ ಮತ್ತೆ ಅತ್ಯಾಚಾರ ನಡೆಯುತ್ತಲೇ ಬಂದಿದೆ. ಹೀಗೆ ನಿರಂತರ ಅತ್ಯಾಚಾರ ನಡೆಯುತ್ತಿದ್ದರೂ ಸಾಮಾನ್ಯರು ಮೌನವಾಗಿಯೇ ಇದ್ದಾರೆ. ರಾಮಾಯಣದಲ್ಲಿ ಹನುಮಂತನಿಗೆ ನೀನು ಸಮುದ್ರ ಹಾರು

, ನಿನ್ನಲ್ಲಿ ಆ ಶಕ್ತಿ ಇದೆ ಎಂದು ಪುಸಲಾಯಿಸುವುದಕ್ಕೆ ಜಾಂಬವಂತ ಇದ್ದ. ಮತ್ತು ಅದರಿಂದಾಗಿ ಹುರುಪುಗೊಂಡ ಹನುಮಂತ ಸಮುದ್ರೋಲ್ಲಂಘನೆ ಮಾಡಿ ಸೀತೆಯ ಇರವನ್ನು ಖಚಿತಪಡಿಸಿಕೊಂಡು ಆಕೆಗೆ ಸಂದೇಶವನ್ನೂ ಕೊಟ್ಟು ಬಂದ ನಂತರದಲ್ಲಿ ದುಷ್ಟನೂ ದುರ್ಜನನೂ ಆದ ರಾವಣ ಹತನಾಗಿ ಸೀತೆಯ ವಿಮೋಚನೆ ಸಾಧ್ಯವಾಯಿತು. ಈಗ ಈ ಸಾಮಾನ್ಯರನ್ನು ಜಾಗೃತಗೊಳಿಸುವುದಕ್ಕಾಗಿ ಎಲ್ಲಿಂದ ಜಾಂಬವಂತ ನನ್ನು ಹುಡುಕಿ ತರಬೇಕು? ಕಂಭದೊಳಗೆ ಇರುವ ಈ 'ನರ-ಸಿಂಹ'ನನ್ನು ಹೊರಗೆ ಬರುವಂತೆ ಮಾಡುವುದು ಹೇಗೆ?

ಒಂದೇ ಮಾತು, ಇಂತಹ ವಿಕಾರ ಯೋಜನೆಗಳನ್ನು ನಾವು ವಿರೋಧಿಸಲೇಬೇಕು. ಅಭಿವೃದ್ಧಿ ಎಂದರೆ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳುವುದು ಎಂದಾದರೆ ಅಂತಹ ಅಭಿವೃದ್ಧಿಯನ್ನು ಸಾಮಾನ್ಯರು ತಿರಸ್ಕರಿಸಬೇಕು. ಆದರೆ ಅದು

ಸಾಧ್ಯವಾಗುವುದು ಸ್ವಿಚ್ ಹಾಕಿದಾಗ ಹೊತ್ತಿಕೊಳ್ಳುವ ಬೆಳಕಿನ ಹಿಂದೆ ಅದೆಂತಹ ಕರಾಳ ಕತೆಯೂ ನೋವಿನ ಪ್ರಪಂಚವೂ ಇದೆ ಎಂಬುದು ಗೊತ್ತಾದಾಗ ಮಾತ್ರ. ಆದರೆ ಸುಖ ಯಾರಿಗೆ ಬೇಡ? ಆದರೆ, ನಮ ಊರಿಗೆ ಬಂಗಾರದ ಗಣಿ ಬೇಡ, ಆದರೆ ನಮಗೆ ಬಂಗಾರ ಬೇಕು ಎಂಬ ಮನಃಸ್ಥಿತಿಯಿಂದ ಹೊರಗೆ ಬರಬೇಕು. ಆ ಬಂಗಾರಕ್ಕಾಗಿ ಗಣಿಗಾರಿಕೆ ಮಾಡಲೇಬೇಕಾಗುತ್ತದೆ. ಆ ಕತ್ತಲ ಪ್ರಪಂಚದ ಅರಿವಿನಿಂದಾಗಿ ಗಣಿಗಾರಿಕೆ ಬೇಡ ಎಂತಾದಾರೆ ಬಂಗಾರವೇ ಬೇಡ ಎಂದಾಗಬೇಕು.

ಎಂದರೆ ಅತಿಯಾದ ಸುಖಸೌಕರ್ಯಗಳು ಜೀವಜಾಲಕ್ಕೆ ಪರಿಸರಕ್ಕೆ ಮಾರಕವೆಂತಾದರೆ ಅದನ್ನು ನಿಲ್ಲಿಸಲು ಆಗದಿದ್ದರೂ ಕಡಿಮೆಯಾದರೂ ಮಾಡುವಂತೆ ಸಾಮಾನ್ಯರು ಪ್ರೋತ್ಸಾಹಿಸಬೇಕು. ಕೃಷಿಯಲ್ಲಿ ಸುಸ್ಥಿರ ಕೃಷಿ ಎಂಬುದೊಂದು ಪರಿಕಲ್ಪನೆ ಇದೆ.

ಹಾಸನ ಪತ್ರಿಕೆ ವಿತರಕರ ಸಮ್ಮೇಳನದಲ್ಲಿ ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅಭಿಪ್ರಾಯ

# ಕೋಳಿ ಕೂಗುವ ಮೊದಲೇ ಎದ್ದು ಕೆಲಸಕ್ಕೆ ಹೊರಡುವ ವಿತಕರು ಪತ್ರಿಕಾ ಕ್ಷೇತ್ರದ ನರಮಂಡಲ



**ಹಾಸನ (ಚನ್ನರಾಯಪಟ್ಟಣ):** ನಿತ್ಯ ಬೆಳಗ್ಗೆ ಕೋಳಿ ಕೂಗುವ ಮೊದಲೇ ಎದ್ದು ಕೆಲಸಕ್ಕೆ ಹೊರಡುವ ಪತ್ರಿಕಾ ವಿತರಕರು ಪತ್ರಿಕಾ ಕ್ಷೇತ್ರದ ನರಮಂಡಲ ಇದ್ದಂತೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರು ನುಡಿದರು.

ರಾಜ್ಯ ಪತ್ರಿಕಾ ವಿತರಕರ ಸಂಘ, ಹಾಸನ ಜಿಲ್ಲಾ ಪತ್ರಿಕಾ ವಿತರಕರ ಸಂಘ, ಚನ್ನರಾಯಪಟ್ಟಣ ತಾಲೂಕು ಪತ್ರಿಕಾ ವಿತರಕರ ಸಂಘದ ಸಂಯುಕ್ತಾಶ್ರಯದಲ್ಲಿ ನಡೆದ ಹಾಸನ ಜಿಲ್ಲಾ ಪತ್ರಿಕಾ ವಿತರಕರ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಪತ್ರಿಕೋದ್ಯಮದ ನರಮಂಡಲ ಇದ್ದಹಾಗೆ. ನರ ಮಂಡಲ ಇದ್ದರಷ್ಟೆ ಮನುಷ್ಯನ ದೇಹ ಕೆಲಸ ಮಾಡುವುದು. ಹಾಗೆಯೇ ಪತ್ರಿಕಾ ವಿತರಕರು ಪತ್ರಿಕಾ ಕ್ಷೇತ್ರದ ನರಮಂಡಲ. ಇಡೀ ದೇಶದ ಬೀದಿ ಬೀದಿಗಳಲ್ಲಿ ಓಡಾಡಿ ಸುದ್ದಿ ವಿತರಣೆ ಮಾಡುವ ವಿತರಕರು ಇಲ್ಲದೆ ಮುದ್ರಣಗೊಂಡ ಪತ್ರಿಕೆಗಳಿಗೆ ಮೋಕ್ಷ ಸಿಗುವುದಿಲ್ಲ ಎಂದು ನುಡಿದರು.

ಈ ನರಮಂಡಲಕ್ಕೆ ಶಕ್ತಿ ತುಂಬುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರದ್ದು ಮಾತೃ ಹೃದಯ. ಈ ಬಾರಿಯ ಬಜೆಟ್ ನಲ್ಲೂ ಪತ್ರಿಕಾ ಕಾರ್ಮಿಕರಿಗೆ ಅನುಕೂಲ ಆಗುವ ಭರವಸೆ ಇದೆ ಎಂದು ತಿಳಿಸಿದರು.

ಕಾರ್ಮಿಕ ಇಲಾಖೆಯಿಂದ ಈಗಾಗಲೇ ಸಾಕಷ್ಟು ಸವಲತ್ತುಗಳು ಸಿಗುತ್ತಿವೆ. ಈಗ ಆರೋಗ್ಯ ವಿಮೆಯ ಬೇಡಿಕೆ ಕೂಡ ಈಡೇರಿದೆ. ವಿತರಕರು ಹೆಚ್ಚೆಚ್ಚು ಸಂಘಟಿತರಾದಷ್ಟೂ ತಮ್ಮ ಬೇಡಿಕೆಗಳಿಗೆ ಶಕ್ತಿ ಬರುತ್ತದೆ ಎಂದು ತಿಳಿಸಿದರು.

ಇದೆ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲಾ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷರಾದ ಎನ್. ಮಾಲತೇಶ್ ಭದ್ರಾವತಿ ತಾಲೂಕ್ ಅಧ್ಯಕ್ಷರಾದ ಮಲ್ಲಿಕಾರ್ಜುನ ಪ್ರಧಾನ ಕಾರ್ಯದರ್ಶಿಯಾದ ಪರಶುರಾಮ್ ರಾವ್ ಅವರಿಗೆ ಗೌರವಿಸಿ ಸನ್ಮಾನಿಸಲಾಯಿತು.

# ಅಹಿಂದ ಜನರ ಬದುಕು ಸುಧಾರಿಸಬೇಕು



**ಚಿತ್ರದುರ್ಗ :** ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು 78 ವರ್ಷಗಳು ಕಳೆದಿದ್ದರೂ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಶೋಷಿತರ ಬದುಕು ಇನ್ನು ಸುಧಾರಣೆಯಾಗಿಲ್ಲ ಎಂದು ಆಲ್ ಇಂಡಿಯಾ ಬಿ.ಎಸ್.ಪಿ.ರಾಜ್ಯಾಧ್ಯಕ್ಷ ಮಾರಸಂದ್ರ ಮುನಿಯಪ್ಪ ಹೇಳಿದರು.

ನವ ಕರ್ನಾಟಕ ನಿರ್ಮಾಣ ಆಂದೋಲನ ವತಿಯಿಂದ ನಗರದ ತರಾಸು ರಂಗಮಂದಿರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜನರ ನಡುವೆ ಜನತಾ ಪ್ರಣಾಳಿಕೆ ಚರ್ಚೆ ಉದ್ಘಾಟಿಸಿ ಮಾತನಾಡಿ, ಎಲ್ಲ ಪಕ್ಷಗಳು ಪರಸ್ಪರ ಆಪಾದನೆ ಮಾಡಿಕೊಂಡು ಕಾಲ ಕಳೆಯುತ್ತಿರುವುದರಿಂದ ಪರ್ಯಾಯ ಪಕ್ಷವೊಂದನ್ನು ಕಟ್ಟಬೇಕಿದೆ ಎಂದರು.

ಬಡವರು ಸ್ವಾಭಿಮಾನದಿಂದ ಬದುಕಲು ಏನು ಬೇಕೋ ಅದನ್ನು ಕೊಡುವ ಬದಲು ಸಿದ್ದರಾಮಯ್ಯ ಐದು ಗ್ಯಾರೆಂಟಿಗಳನ್ನು ನೀಡಿ ದಾರಿ ತಪ್ಪಿಸುತ್ತಿದ್ದಾರೆ. ಎಸ್‌ಸಿಎಸ್‌ಪಿ, ಟಿಎಸ್ಪಿ ಹಣವನ್ನು ಬೇರೆ ಬೇರೆ ಕಾಮಗಾರಿಗಳಿಗೆ ಬಳಸಲಾಗುತ್ತಿದೆ. ಅಟ್ರಾಸಿಟಿ ಜಾಸ್ತಿಯಾಗುತ್ತಿದೆ. ಮೀಸಲಾತಿ ಹೋಗಿದೆ ಎಂದು ಹೇಳಿದರು.

ಅನಾದಿ ಕಾಲದಿಂದಲೂ ಜೀವನೋಪಾಯಕ್ಕಾಗಿ ಭೂಮಿಗಳನ್ನು ಸಾಗುವಳಿ ಮಾಡಿಕೊಂಡು ಬರುತ್ತಿರುವವರಿಗೆ ಹಕ್ಕುಪತ್ರಗಳು ಸಿಗುತ್ತಿಲ್ಲ. 33 ಸಾವಿರ ಹಳ್ಳಿಗಳ ಪೈಕಿ 11 ಸಾವಿರ ಹಳ್ಳಿಗಳಲ್ಲಿ ಸ್ಮಶಾನಕ್ಕೆ ಇನ್ನು ಜಾಗವಿಲ್ಲದಂತಾಗಿದೆ. ಚುನಾವಣೆಯಲ್ಲಿ ಮತದಾರರಿಗೆ ಆಸೆ-ಆಮಿಷಗಳನ್ನು ತೋರಿಸಿ ಗೆದ್ದು ಹೋದವರು ಯಾರ ಕೈಗೂ ಸಿಗುತ್ತಿಲ್ಲ. ಅದಕ್ಕಾಗಿ ದಲಿತ ಸಂಘಟನೆಗಳು, ರೈತರು, ವಿವಿಧ ಹೋರಾಟಗಾರರು, ಮಹಿಳೆಯರು, ವಿದ್ಯಾರ್ಥಿಗಳು ಎಲ್ಲರೂ ಒಂದುಗೂಡಿ ಪರ್ಯಾಯ ಪಕ್ಷ ರಚನೆಗೆ ಕೈಜೋಡಿಸಿ ಎಂದು ಮನವಿ ಮಾಡಿದರು. ರೈತ ಸಂಘದ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿ, ರಾಜ್ಯ ಸರ್ಕಾರ ಐದು ಗ್ಯಾರೆಂಟಿಗಳನ್ನು ಕೊಟ್ಟಿರುವುದರಿಂದ ಸರ್ಕಾರ ದಿವಾಳಿಯಾಗಿದೆ. ಜನರ ಆಶೋತ್ತರಗಳಿಗೆ ಉತ್ತರ ಕೊಡಲು ಆಗದಂತ ಪರಿಸ್ಥಿತಿ ನಿರ್ಮಾಣವಾಗಿದೆ. ದೇಶಕ್ಕೆ ಅನ್ನ ಕೊಡುವ ರೈತ ಸಾಲದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಹಳ್ಳಿ ಹಳ್ಳಿಗೆ ಹೋಗಿ ಜನರನ್ನು ಜಾಗೃತಿಗೊಳಿಸಬೇಕಿದೆ. ವಿರೋಧ ಪಕ್ಷ ನಿತ್ರಾಣಗೊಂಡಿರುವುದರಿಂದ ಆಡಳಿತ ಪಕ್ಷದ ಅಕ್ರಮಗಳನ್ನು ಪ್ರಶ್ನಿಸಲು ಆಗುತ್ತಿಲ್ಲ ಎಂದು ಟೀಕಿಸಿದರು.

ಆರ್‌ಪಿಐ ರಾಷ್ಟ್ರೀಯ ಅಧ್ಯಕ್ಷ ಎನ್.ಮೂರ್ತಿ ಮಾತನಾಡಿ, ಅಂಬೇಡ್ಕರ್ ಯುಗ ಆರಂಭಗೊಂಡಿದೆ. ಎಲ್ಲ ಸಂಘಟನೆಗಳು ಒಂದಾಗಿ ಹಳ್ಳಿ ಹಳ್ಳಿಗೆ ತಿರುಗಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷದ ವಿರುದ್ಧ ಜನಜಾಗೃತಿ ಮೂಡಿಸಬೇಕು ಎಂದರು.

ಮಾಜಿ ಶಾಸಕ ಎಚ್.ಡಿ.ಬಸವರಾಜ್ ಮಾತನಾಡಿ, ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಅಟ್ಟಹಾಸ ಮಿತಿ ಮೀರಿದೆ. ಜನರಿಂದ ಮತ ಪಡೆದು ವಂಚಿಸುತ್ತಿರುವವರನ್ನು ಅಧಿಕಾರದಿಂದ ಇಳಿಸಬೇಕಿದೆ ಎಂದು ತಿಳಿಸಿದರು.

ಆಲ್ ಇಂಡಿಯಾ ಬಿಎಸ್‌ಪಿ ರಾಷ್ಟ್ರೀಯ ಸಂಯೋಜಕ ಎಂ.ಗೋಪಿನಾಥ್ ಮಾತನಾಡಿ, ದಲಿತರು, ಹಿಂದುಳಿದವರು, ಅಸ್ಪೃಶ್ಯರು, ಹೋರಾಟಗಾರರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ನಿರುದ್ಯೋಗ ಜಾಸ್ತಿಯಾಗಿದೆ. ರೈತರ ಆತ್ಮಹತ್ಯೆ ನಿಂತಿಲ್ಲ. ಕನ್ನಡ ನಾಡು, ನುಡಿ, ನೆಲ, ಜಲದ ಉಳಿವಿಗಾಗಿ ಹೊಸ ಪಕ್ಷ ಕಟ್ಟುವ ಕಾಲ ಬಂದಿದೆ ಎಂದರು.

ಜಿಲ್ಲಾಧ್ಯಕ್ಷ ಎನ್.ಪ್ರಕಾಶ್, ರಾಜ್ಯ ಕಾರ್ಯದರ್ಶಿಗಳಾದ ದೊಡ್ಡಟ್ಟಪ್ಪ, ನವೀದ್, ರೈತ ಮುಖಂಡ ರೆಡ್ಡಿಹಳ್ಳಿ ವೀರಣ್ಣ, ಕರುನಾಡ ವಿಜಯಸೇನೆ ಜಿಲ್ಲಾಧ್ಯಕ್ಷ ಕೆ.ಟಿ.ಶಿವಕುಮಾರ್, ಮಹಾಂತೇಶ್ ಕೂನಬೇವು, ಭೀಮನಕೆರೆ ಶಿವಮೂರ್ತಿ, ಸಿ.ಪಿ.ಐ. ಜಿಲ್ಲಾ ಸಹ ಕಾರ್ಯದರ್ಶಿ ದೊಡ್ಡುಳ್ಳಾರ್ತಿ ಕರಿಯಣ್ಣ ಇತರರಿದ್ದರು.

## 10ರಿಂದ ಲಿಂ.ಶ್ರೀಮೃತ್ಯುಂಜಯ ಶಿವಾಚಾರ್ಯ ಶ್ರೀಗಳ ಪುಣ್ಯಾರಾಧನೆ

**ಹೊನ್ನಾಳಿ:** ಮಾರ್ಚ್ 10 ಮತ್ತು 11 ರಂದು ಹೊನ್ನಾಳಿ ಹಿರೇಕಲ್ಮಠದಲ್ಲಿ ಲಿಂಗೈಕ್ಯ ಶ್ರೀಮೃತ್ಯುಂಜಯ ಶಿವಾಚಾರ್ಯ ಮಹಾಸ್ವಾಮಿಗಳ 55ನೇ ವಾರ್ಷಿಕ ಪುಣ್ಯಾರಾಧನೆ, ಹಾಗೂ ಲಿಂಗೈಕ್ಯ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಜಿಗಳ 10ನೇ ವಾರ್ಷಿಕ ಸಂಸ್ಮರಣೆ ಕಾರ್ಯಕ್ರಮಗಳ ನಿಮಿತ್ತ ವಿಶೇಷ ಪೂಜಾ ಕೈಂಕರ್ಯಗಳು, ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಹಿರೇಕಲ್ಮಠ ಡಾ. ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಜಿ ಹೇಳಿದರು.ಭಾನುವಾರ ಶ್ರೀಮಠದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮದ ಅಹ್ವಾನ ಪತ್ರಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಮಾ.10 ರಂದು ಬೆಳಗ್ಗೆ 9.20ಕ್ಕೆ ಶ್ರೀ ಜಗದ್ಗುರು ಪಂಚಾಚಾರ್ಯ ಧರ್ಮ ಧ್ವಜಾರೋಹಣವನ್ನು ಕೋಣಂದೂರು ಮಠದ ಪಟ್ಟದ ಅಭಿನಯ ಸಿದ್ದವೀರ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಜಿ ನೆರವೇರಿಸಲಿದ್ದಾರೆ ಎಂದು ಹೇಳಿದರು.ಸಂಜೆ 7 ಗಂಟೆಗೆ ಶ್ರೀಚನ್ನಪ್ಪಸ್ವಾಮಿ ಜನಕಲ್ಯಾಣ ಸೇವಾ ಟ್ರಸ್ಟ್ ಸಹಯೋಗದೊಂದಿಗೆ ಖ್ಯಾತ ಸಾಹಿತಿ ಲಿಂ.ಎಚ್. ತಿಪ್ಪೇರುದ್ರಸ್ವಾಮಿ, ಲಿಂ.ಶ್ರೀ ಎಚ್.ಎನ್. ಷಡಾಕ್ಷರ ಶಾಸ್ತ್ರಿ ಭಾವಿಕೆರೆ ದತ್ತಿ ಉಪನ್ಯಾಸ ಕಾರ್ಯಕ್ರಮಗಳು ಜರುಗಲಿವೆ. ನೇತೃತ್ವ ಹೊನ್ನಾಳಿ ಹಿರೇಕಲ್ಮಠದ ಸ್ವಾಮೀಜಿ ವಹಿಸಲಿದ್ದು, ಮೈಸೂರು ಬನ್ನಿಕೊಪ್ಪ ಮಠದ ಡಾ. ಸುಜ್ಞಾನದೇವ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ. ಅನೇಕ ಮಠಗಳ ಮಠಾಧೀಶರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.ದತ್ತಿ ಉಪನ್ಯಾಸವನ್ನು ಜಯಶೀಲಗಂಗಾಧರ ಸ್ವಾಮಿ, ಶಿಕ್ಷಕರು ಇವರು ಡಾ.ಎಚ್.ತಿಪ್ಪೇರುದ್ರಸ್ವಾಮಿಯವರು ಕದಳಿ ಕರ್ಪೂರ ಸಾಹಿತ್ಯ ಚಿಂತನೆ ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ.ಮಾ.11ರಂದು ಬೆಳಗ್ಗೆ 8.30 ಗಂಟೆಗೆ ಲಿಂಗೈಕ್ಯ ಗುರುಗಳ ಕೃರ್ತು ಗದ್ದುಗೆಗಳಿಗೆ ಮಹಾರುದ್ರಾಭಿಷೇಕ, ಬಿಲ್ವಾರ್ಚನೆ ಮಹಾಮಂಗಳಾರತಿ ಪೂಜಾ ಕೈಂಕರ್ಯಗಳು ಜರುಗಲಿದೆ. ನಂತರ 10.30 ಗಂಟೆಗೆ ಧರ್ಮಸಭೆ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಜರುಗಲಿವೆ. ಹಿರೇಕಲ್ಮಠ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಮುಷ್ಟೂರು ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಶಾಸಕ ಡಿ.ಜಿ.ಶಾಂತನಗೌಡ, ಎಂ.ಪಿ.ರೇಣುಕಾಚಾರ್ಯ, ಡಾ.ಡಿ.ಬಿ. ಗಂಗಪ್ಪ, ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಶ್ರೀಮಠದ ಏಜೆಂಟ್ ಎಂ.ಪಿ.ಎಂ. ಚನ್ನಬಸಯ್ಯ ಇದ್ದರು.

## ಗ್ರಾಮೀಣ ಪತ್ರಕರ್ತರಿಗೆ ಜಿಲ್ಲಾ ಬಸ್ ಪಾಸ್: ಆನ್‌ಲೈನ್ ಅರ್ಜಿ ಆಹ್ವಾನ

**ಚಿಕ್ಕಮಗಳೂರು: ಮಾ. 03:** ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಾಮೀಣ ಪತ್ರಕರ್ತರಿಗೆ ವೃತ್ತಿ ಸಂಬಂಧಿತ ಚಟುವಟಿಕೆಗಳಿಗೆ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಯಾಣಿಸಲು ಉಚಿತ ಬಸ್ ಪಾಸ್ ಯೋಜನೆಗೆ ಅರ್ಹ ಪತ್ರಕರ್ತರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.ಮುಖ್ಯಮಂತ್ರಿಗಳು 2024-25 ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆ ಘೋಷಿಸಿದ್ದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ವಿದ್ಯುನ್ಮಾನ ಅಥವಾ ಮುದ್ರಣ ಮಾಧ್ಯಮಗಳಲ್ಲಿ ಪೂರ್ಣಾವಧಿಗೆ ನೇಮಕಗೊಂಡು 4 ವರ್ಷಗಳ ಸೇವಾನುಭವ ಹೊಂದಿರುವ ಪತ್ರಕರ್ತರು ಅರ್ಜಿ ಸಲ್ಲಿಸಬಹುದು. ನೇಮಕಾತಿ ಆದೇಶ/ವೇತನ ಪತ್ರ/ಬ್ಯಾಂಕ್ ಸ್ಟೇಟ್‌ಮೆಂಟ್ ಗಳಲ್ಲಿ ಯಾವುದಾದರೂ ದಾಖಲೆಗಳನ್ನು ಸೇವಾನುಭವಕ್ಕಾಗಿ ಒದಗಿಸಬೇಕು.

ಜಿಲ್ಲಾ ವ್ಯಾಪ್ತಿಯಲ್ಲಿ ಸಂಚರಿಸುವ ಕರ್ನಾಟಕ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಜಿಲ್ಲಾ ವ್ಯಾಪ್ತಿಗೆ ಉಚಿತವಾಗಿ ಸಂಚರಿಸಬಹುದು.ತಹಸೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ ಒದಗಿಸಬೇಕು.

ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸುವ ವರದಿಗಾರರಿಗೆ ಪ್ರತಿ ತಾಲ್ಲೂಕಿಗೆ ಸಂಪಾದಕರು ಸೂಚಿಸುವ ಒಬ್ಬರಿಗೆ, ಜಿಲ್ಲಾ ಮಟ್ಟದ ಪತ್ರಿಕೆಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಒಬ್ಬರಿಗೆ, ಆರು ಪುಟಗಳಲ್ಲಿ ಪ್ರಕಟವಾಗುವ ಪ್ರಾದೇಶಿಕ ಪತ್ರಿಕೆಗಳು ಓರ್ವ ವರದಿಗಾರರು ಹಾಗೂ ಓರ್ವ ಫೋಟೋಗ್ರಾಫರ್ ಎಂಟು ಅಥವಾ ಹೆಚ್ಚು ಪುಟಗಳಲ್ಲಿ ಪ್ರಕಟವಾಗುವ ಪ್ರಾದೇಶಿಕ ಪತ್ರಿಕೆಗಳು ಇಬ್ಬರು ವರದಿಗಾರರು ಹಾಗೂ ಓರ್ವ ಫೋಟೋಗ್ರಾಫರ್‌ಗೆ ಬಸ್ ಪಾಸ್ ಪಡೆಯಲು ಅವಕಾಶವಿದೆ.

ಉಪಗ್ರಹ ಆಧಾರಿತ ವಿದ್ಯುನ್ಮಾನ ವಾಹಿನಿಗಳ ವರದಿಗಾರರು ತಾಲೂಕು ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ ಪ್ರತಿ ತಾಲ್ಲೂಕಿಗೆ ಓರ್ವ ಕ್ಯಾಮರಾಮ್ಯಾನ್ ಹಾಗೂ ಓರ್ವ ವರದಿಗಾರರು ಬಸ್ ಪಾಸ್ ಪಡೆಯಬಹುದಾಗಿದೆ.

## ಕಾಂಗ್ರೆಸ್ ಕಾರ್ಯಕರ್ತನ ಮೇಲೆ ಹಲ್ಲೆ: ಶಾಸಕ ವೇದವ್ಯಾಸ ಕಾಮತ್ ವಿರುದ್ಧ ಎಫ್‌ಐಆರ್ ದಾಖಲು

**ಮಂಗಳೂರು:** ಶಕ್ತಿನಗರ ಬಳಿಯ ಶ್ರೀ ಕೃಷ್ಣ ಭಜನಾ ಮಂದಿರದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತನ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಮಂಗಳೂರು ನಗರ ದಕ್ಷಿಣ ಶಾಸಕ ವೇದವ್ಯಾಸ ಕಾಮತ್ ಸೇರಿದಂತೆ 12 ಜನರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

# ಜಾನಪದ ಉಳಿವಿಗೆ ಜಾನಪದಾಸಕ್ತರು ಶ್ರಮಿಸಲಿ



**ಚಿಕ್ಕಮಗಳೂರು:** ಪೂರ್ವಜರ ಕಾಲದಿಂದ ಜನಿಸಿದ ಜಾನಪದ ಸಂಸ್ಕೃತಿ, ಆಧುನಿಕತೆ ಕಾಲ ಘಟ್ಟದಲ್ಲಿ ನಶಿಸುತ್ತಿರುವ ಹಿನ್ನೆಲೆಯಲ್ಲಿ, ಜಾನಪದಾಸಕ್ತರು ಸ್ವಯಂ ಪ್ರೇರಿತರಾಗಿ ಮುಂದಾಗಿ ಸಂಸ್ಕೃತಿ ಉಳಿವಿಗೆ ಶ್ರಮಿಸಬೇಕು ಎಂದು ಜಿಲ್ಲಾ ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಓಣಿತೋಟ ರತ್ನಾಕರ ಹೇಳಿದರು.

ತಾಲ್ಲೂಕಿನ ಮುಗುಳವಳ್ಳಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಜಿಲ್ಲಾ ಕನ್ನಡ ಜಾನಪದ ಪರಿಷತ್ ವತಿಯಿಂದ ಏರ್ಪಡಿಸಿದ್ದ ಶಾಲಾಮಕ್ಕಳಿಗೆ ಜಾನಪದ ಕಲೆಗಳ ಉಚಿತ ಶಿಬಿರ ಸಮಾರೋಪ ಸಮಾರಂಭ ಹಾಗೂ ಶಾಲಾ ಮುಖ್ಯೋಪಾಧ್ಯಾಯರ ಬೀಳ್ಕೊಡಿಗೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಜಾನಪದಗಳಲ್ಲಿ ರಂಗಗೀತೆ, ಲಾವಣಿ, ಗೀಗೀಪದ, ಸಣ್ಣಾಟ, ಡೊಳ್ಳುಕುಣಿತ ಹಲವಾರು ಪ್ರಕಾರಗಳನ್ನು ಹಿಂದಿನ ಕಾಲದಲ್ಲೇ ಹಿರಿಯರು ಅಕ್ಷರಾಭ್ಯಾಸವಿಲ್ಲದೇ ಸೃಷ್ಟಿಸಿ, ಸಮಾಜದ ಆಗು-ಹೋಗುಗಳನ್ನು ಜಾನಪದ ಸೊಗಡಿನ ಮೂಲಕವೇ ಜನಸಾಮಾನ್ಯರಿಗೆ ತಿಳಿಸುವ ಕಾಯಕ ಮಾಡುತ್ತಿದ್ದರು ಎಂದರು.

ಜಿಲ್ಲಾ ಕಜಾಪ ಮಹಿಳಾ ಘಟಕದ ಅಧ್ಯಕ್ಷೆ ವಿಶಾಲಕ್ಷಮ್ಮ ಮಾತನಾಡಿ, ಇತ್ತೀಚಿನ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಮಕ್ಕಳು ವಚನ, ಕೀರ್ತನೆ ಹಾಗೂ ಜಾನಪದಗಳ ಕಲಿಕೆಯಿಂದ ಹಿಂದು ಳಿಯುತ್ತಿರುವ ಪರಿಣಾಮ ಸಂಸ್ಕೃತಿ ನಶಿಸುವ ಹಾದಿಯಲ್ಲಿದೆ. ಹೀಗಾಗಿ ಶಾಲಾ ಶಿಕ್ಷಕರು ಪಠ್ಯದ ಜೊತೆಗೆ ನಾಡಿನ ಸಂಸ್ಕೃತಿ ಪ್ರತಿಬಿಂಬಿಸುವ ಜಾನಪದ ಗೀತೆಗಳನ್ನು ಪರಿಚಯಿಸಬೇಕು ಎಂದು ಸಲಹೆ ಮಾಡಿದರು.

ಜಿಲ್ಲಾ ಜಾನಪದ ಯುವಬ್ರಿಗೇಡ್ ಡಾ.ವಿಜಯ್‌ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಜಾಪ ತಾಲ್ಲೂಕು ಅಧ್ಯಕ್ಷ ಅಶೋಕ್ ರಾಜರತ್ನಂ, ಮಹಿಳಾ ಘಟಕದ ಅಧ್ಯಕ್ಷರಾದ ಚೈತ್ರ ಎಸ್.ಗೌಡ, ಎಸ್.ಕೆ. ವಿಜಯಲಕ್ಷ್ಮೀ, ಯುವಬ್ರಿಗೇಡ್ ಸದಸ್ಯರಾದ ಜೋಯಲ್ ಮಿಕಾ, ಮನು, ಸಚಿನ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು, ಶಾಲೆಯ ಶಿಕ್ಷಕರು ಸೇರಿದಂತೆ ಮತ್ತಿತರರಿದ್ದರು.

# ರಾಜ್ಯದಲ್ಲಿ ತ್ರಿಭಾಷಾ ಸೂತ್ರದ ಶಿಕ್ಷಣ ಅಬಾಧಿತ

**ಶಿವಮೊಗ್ಗ:** ರಾಜ್ಯದ ಶಾಲಾ ಶಿಕ್ಷಣದಲ್ಲಿ ಈಗಿರುವ ತ್ರಿಭಾಷಾ ಸೂತ್ರದ ಶಿಕ್ಷಣ ಅಬಾಧಿತ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾ ರಪ್ಪ ಸ್ಪಷ್ಟಪಡಿಸಿದರು.

ಭಾನುವಾರ ತಮ್ಮ ಹುಟ್ಟುಹಬ್ಬದ ನಿಮಿತ್ತ ಅಭಿಮಾನಿಗಳು ಆಯೋಜಿಸಿದ್ದ ಪೌರ ಕಾರ್ಮಿಕರಿಗೆ ಸೀರೆ ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ತಮಿಳುನಾಡಿನ ಸರ್ಕಾರ ಶಿಕ್ಷಣದಲ್ಲಿ ತ್ರಿಭಾಷಾ ಸೂತ್ರಕ್ಕೆ ನಿರಾಕರಣೆ ಮಾಡು ತ್ತಿದೆ. ಆದರೆ ಕರ್ನಾಟಕದಲ್ಲಿ ಹೊರಗಿನ ರಾಜ್ಯದ ವಿದ್ಯಾರ್ಥಿಗಳೂ ಬರು ತ್ತಾರೆ. ಏಕಾಏಕಿ ಹಿಂದಿಯನ್ನು ತೆಗೆದುಹಾಕಿದರೆ ಹೊರಗಿನ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಅದಕ್ಕಾಗಿ ಈ ಮುಂಚಿನಂತೆಯೇ ಭಾಷಾ ಸೂತ್ರ ಮುಂದುವರೆಯಲಿದೆ ಎಂದು ತಿಳಿಸಿದರು.

ಬರುವ ಬಜೆಟ್ ಮಂಡನೆಗೆ ಸಂಬಂಧಿಸಿದಂತೆ, ಮುಖ್ಯಮಂತ್ರಿ ಸಿದ್ದರಾ ಮಯ್ಯ ಅವರು ಈ ಬಾರಿ ದಾಖಲೆ ಬಜೆಟ್ ಮಂಡಿಸುತ್ತಿದ್ದಾರೆ. ಸರ್ಕಾರದ ಆರ್ಥಿಕ ಸ್ಥಿತಿ ಸ್ವಲ್ಪ ಕಷ್ಟದಲ್ಲಿದ್ದರೂ ಅವಶ್ಯವಿರುವ ಅನುದಾನಗಳಿಗೆ ತೊಂದರೆ ಇಲ್ಲ. ಜಿಲ್ಲೆಯ ನೀರಾವರಿ ಇತರ ಅಭಿವೃದ್ಧಿ ಯೋಜನೆಗಳಿಗೆ ಬೇಕಾದಷ್ಟು ಹಣ ಸಿಗುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.



ಎಚ್.ಡಿ.ಕೋಟೆಯಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರನ್ನು ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ ಎಂದ ಸಚಿವರು, ಬೆಳಗಾವಿಯಲ್ಲಿ ಮರಾಠಿಗರ ಪುಂಡಾಟಿಕೆ ವಿರುದ್ಧ ಸರ್ಕಾರ ಕ್ರಮ ಕೈಗೊಂಡು ಕನ್ನಡವನ್ನು ಉಳಿಸುವ ಕೆಲಸ ಮಾಡುತ್ತದೆ ಎಂದು ಹೇಳಿ ದರು.

ಶರಾವತಿ ಸಂತ್ರಸ್ತರ ಪರವಾಗಿ ಕೇಂದ್ರ ಸರ್ಕಾರವೂ ಸಹಕಾರ ನೀಡುತ್ತಿದೆ. ರಾಜ್ಯ ಸರ್ಕಾರವೂ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಯಾವುದೇ ಕಾರ ಣಕ್ಕೂ ಸಂಸತ್ರಸ್ತರಿಗೆ ಅನ್ಯಾಯವಾಗಲು ಬಿಡುವುದಿಲ್ಲ ಎಂದು ತಿಳಿಸಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಬಗ್ಗೆ ಮಾತನಾಡದ ಸಚಿವರು, ಪಕ್ಷದ ರಾಷ್ಟ್ರಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ತಮಗೆ ಬಾಯಿ ಮುಚ್ಚಿಕೊಂಡು ಇರಲು ಆದೇಶಿಸಿದ್ದಾರೆ. ಯಾರು ಏನೇ ತಿಪ್ಪರಲಾಗ ಹಾಕಿದರೂ ಮಧು ಬಂಗಾರಪ್ಪ ಈ ವಿಷಯದ ಬಗ್ಗೆ ಬಾಯಿಗೆ ಬೀಗ ಹಾಕಿಕೊಂಡು ಇರುತ್ತಾ-ರೆ ಎಂದು ಕಡ್ಡಿ ಮುರಿದಂತೆ ಪ್ರತಿಕ್ರಿಯಿಸಿದರು.

ಇದೇ ಸಂದರ್ಭದಲ್ಲಿ ಸಚಿವ ಮಧು ಬಂಗಾರಪ್ಪ ಪೌರ ಕಾರ್ಮಿಕರಿಗೆ ಪುಷ್ಪಾರ್ಚನೆ ಮಾಡಿ ಗೌರವಿಸುವುದರ ಮೂಲಕ ತಮ್ಮ ಹುಟ್ಟುಹಬ್ಬಕ್ಕೆ ವಿಶೇಷ ಅರ್ಥ ತಂದುಕೊಂಡರು.

## ಟೇಕ್ ಆಫ್ ಆಗದ ವಿಮಾನ: ಪ್ರಯಾಣಿಕರ ಪ್ರತಿಭಟನೆ

**ಶಿವಮೊಗ್ಗ:** ಸ್ಪೈಸ್ ಜೆಟ್ ವಿಮಾನವೊಂದು ತಾಂತ್ರಿಕ ಕಾರಣಗಳಿಂದ ಟೇಕ್-ಆಫ್ ಆಗದೆ ಅದರಲ್ಲಿ ಪ್ರಯಾಣಿಸಲಿದ್ದ 60 ಪ್ರಯಾಣಿಕರು ಪರದಾಡುವಂಥಹ ಪರಿಸ್ಥಿತಿ ನಿರ್ಮಾಣವಾಗಿ ಪ್ರಯಾಣಿಕರು ಪ್ರತಿಭಟಿಸಿದ ಘಟನೆಯೂ ಇಲ್ಲಿಯ ವಿಮಾನ ನಿಲ್ದಾಣದಲ್ಲಿ ನಡೆದಿದೆ.ಶನಿವಾರ ಮಧ್ಯಾಹ್ನ 3.30ಕ್ಕೆ ಶಿವಮೊಗ್ಗದಿಂದ ಹೈದರಾಬಾದಿಗೆ ಈ ವಿಮಾನ ಹೊರಡಬೇಕಾಗಿತ್ತು. ಸುಮಾರು 60 ಜನ ಪ್ರಯಾಣಿಕರು ಇದರಲ್ಲಿ ಪ್ರಯಾಣ ಕೈಗೊಳ್ಳಲು ನಿಗಧಿತ ಸಮಯಕ್ಕೂ ಮುಂಚಿನೇ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. ಆದರೆ ಪ್ರಯಾಣಿಕರ ದುರ್ದೈವ. ತಾಂತ್ರಿಕ ಕಾರಣಗಳಿಂದ ವಿಮಾನ ಹೊರಡುವುದಿಲ್ಲ ಎಂಬ ಪ್ರಕಟಣೆ ಹೊರಬಿತ್ತು. ಪ್ರಯಾಣಿಕರೆಲ್ಲ ಆಕ್ರೋಶಗೊಂಡು ನಿಲ್ದಾಣದ ಅಧಿಕಾರಿಗಳ ವಿರುದ್ಧ ಪ್ರತಿಭಟನೆಗೂ ಇಳಿದರು. 4 ಗಂಟೆಯವರೆಗೂ ವಿಮಾನ ದುರಸ್ತಿಗೆ ನಿಲ್ದಾಣದ ತಂತ್ರಜ್ಞರು ಹರ ಸಾಹಸ ಪಟ್ಟರು. ಕೊನೆಗೂ ವಿಮಾನ ದುರಸ್ತಿಯಾಗ ಲಿಲ್ಲ.ಪ್ರಯಾಣಿಕರು ಪ್ರತಿಭಟನೆಗೆ ಮುಂದಾದಾಗ ತಕ್ಷಣ ಬೇರೆ ಬಸ್ ತರಿಸಿ ಬದಲಿ ವ್ಯವಸ್ಥೆ ಮಾಡಿಕೊಡುವುದಾಗಿ ನಿಲ್ದಾಣಾಧಿಕಾರಿಗಳು ಪ್ರಯಾಣಿಕರನ್ನು ಸಮಾಧಾನ ಪಡಿಸಿದ್ದಾರೆ. ಅವರಿಗೆ ಕಾಫಿ-ಚಹಾ, ಲಘು ತಿಂಡಿ ವ್ಯವಸ್ಥೆಯನ್ನು ವಿಮಾನ ಪ್ರಾಧಿಕಾರದವರು ಮಾಡಿದ್ದಾರೆ.

# ವಿಧಾನಪರಿಷತ್ ಚುನಾವಣೆ ಫಲಿತಾಂಶ: ಎಲ್ಲರಚಿತ್ತ ನ್ಯಾಯಾಲಯದತ್ತ



**ಚಿಕ್ಕಮಗಳೂರು:** ಜಿಲ್ಲೆಯಲ್ಲಿ ಕಳೆದ 2021ರಲ್ಲಿ ನಡೆದ ವಿಧಾನಪರಿಷತ್ ಚುನಾವಣಾ ಫಲಿತಾಂಶಕ್ಕೆ ಸಂಬಂಧಿಸಿದಂತೆ ಶುಕ್ರವಾರ ಮತಗಳ ಮರು ಎಣಿಕೆಯಾಗಿದ್ದು, ಚುನಾವಣಾ ಆಯೋಗ ಮರು ಮತ ಎಣಿಕೆ ನಡೆಸಿ ಮುಚ್ಚಿದ ಲಕೋಟೆಯಲ್ಲಿ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗೆ ಸಲ್ಲಿಕೆ ಮಾಡಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾ. 4 ರಂದು ಹೈಕೋರ್ಟ್‌ನಿಂದ ಯಾವ ತೀರ್ಪು ಬರಲಿದ್ದು ಗೆಲ್ಲುವವರು ಯಾರು ಹಾಗೂ ಸೋಲುವವರು ಯಾರು ಎಂಬ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆಗಳು ಆರಂಭಗೊಂಡಿವೆ.ಬಿಜೆಪಿ ಅಭ್ಯರ್ಥಿ ಎಂ.ಕೆ.ಪ್ರಾಣೇಶ್ ಕೇವಲ 6 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಅವರ ವಿರುದ್ಧ ಸ್ಪರ್ಧೆ ಮಾಡಿದ್ದ ಕಾಂಗ್ರೆಸ್ ಅಭ್ಯರ್ಥಿ ಗಾಯತ್ರಿ ಶಾಂತೇಗೌಡ ಅವರು ಇಷ್ಟೇ ಮತಗಳ ಅಂತರದಿಂದ ಪರಾಭವಗೊಂಡಿದ್ದರು. ಇದೇ ವೇಳೆ ಕಾಂಗ್ರೆಸ್ ಅಭ್ಯರ್ಥಿ ಗಾಯತ್ರಿ ಶಾಂತೇಗೌಡ ಸರ್ಕಾರದ ನಾಮ ನಿರ್ದೇಶಿತ ಸದಸ್ಯರಿಗೆ ಮತದಾನದ ಹಕ್ಕಿಲ್ಲ ಎಂದು ಕೋರ್ಟ್ ಮೊರೆ ಹೋಗಿದ್ದರು. ವಿಧಾನಪರಿಷತ್ ಚುನಾವಣೆಯ ಫಲಿತಾಂಶಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಮೆಟ್ಟಿಲು ಏರಿದ ಪ್ರಥಮ ಪ್ರಕರಣ ಜಿಲ್ಲೆಯಲ್ಲಿ ಇದಾಗಿದೆ. 2021ರ ಡಿಸೆಂಬರ್ 10 ರಂದು ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಎಂ.ಕೆ. ಪ್ರಾಣೇಶ್, ಕಾಂಗ್ರೆಸ್ ಅಭ್ಯರ್ಥಿ ಗಾಯತ್ರಿ ಶಾಂತೇಗೌಡ, ಪಕ್ಷೇತರ ಅಭ್ಯರ್ಥಿ ಡಾ. ಸುಂದರೇಗೌಡ, ಬಿ.ಟಿ. ಚಂದ್ರಶೇಖರ್ ಹಾಗೂ ಜಿ.ಐ. ರೇಣುಕುಮಾರ್ ಸ್ಪರ್ಧೆ ಮಾಡಿದ್ದರು.ಅಂದು 2,410 ಮತಗಳು ಚಲಾವಣೆಯಾಗಿದ್ದು, ಈ ಪೈಕಿ 39 ಮತಗಳು ತಿರಸ್ಕೃತಗೊಂಡಿದ್ದರೆ, ಎಂ.ಕೆ. ಪ್ರಾಣೇಶ್ ಅವರು 1188, ಗಾಯತ್ರಿ ಶಾಂತೇಗೌಡ 1182, ಡಾ. ಸುಂದರೇಗೌಡ 1 ಮತಗಳನ್ನು ಪಡೆದಿದ್ದರು. ಗಾಯತ್ರಿ ಶಾಂತೇಗೌಡ ಅವರು 6 ಮತಗಳ ಅಂತರದಿಂದ ಪರಾಭವಗೊಂಡಿದ್ದರು. ನಾಮ ನಿರ್ದೇಶನ ಸದಸ್ಯರಿಗೆ ಮತದಾನ ಮಾಡಲು ಅವಕಾಶ ಇಲ್ಲ. ಹಾಗಿದ್ದರೂ ಕೂಡ ಜಿಲ್ಲಾ ಚುನಾವಣಾಧಿಕಾರಿಗಳು 12 ಮಂದಿ ನಾಮ ನಿರ್ದೇಶಕರಿಗೆ ಮತದಾನಕ್ಕೆ ಅವಕಾಶ ನೀಡಿದ್ದಾರೆ. ಅವರುಗಳನ್ನು ಕೈ ಬಿಟ್ಟು ಮರು ಮತ ಎಣಿಕೆ ಮಾಡಬೇಕೆಂದು ಗಾಯತ್ರಿ ಶಾಂತೇಗೌಡ ಅವರು ಹೈಕೋರ್ಟ್‌ನ ಮೊರೆ ಹೋಗಿದ್ದರು. ನ್ಯಾಯಾಲಯವೂ ಕೂಡ ಈ ವಾದವನ್ನು ಒಪ್ಪಿಕೊಂಡಿತ್ತು. ಹೈಕೋರ್ಟ್‌ನ ತೀರ್ಪು ಪ್ರಶ್ನಿಸುವ ಜತೆಗೆ ನಾಮ ನಿರ್ದೇಶನದ ಸದಸ್ಯರಿಗೂ ಮತದಾನದ ಹಕ್ಕಿದೆ ಎಂದು ಎಂ.ಕೆ. ಪ್ರಾಣೇಶ್ ಅವರು ಸುಪ್ರೀಂ ಕೋರ್ಟ್‌ನ ಮೊರೆ ಹೋಗಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಕಳೆದ ಜನವರಿ 24 ರಂದು ಹೈಕೋರ್ಟ್‌ಗೆ ಮರು ಮತ ಎಣಿಕೆ ನಡೆಸಿ ಮುಚ್ಚಿದ ಲಕೋಟೆಯಲ್ಲಿ ಫಲಿತಾಂಶದ ಮಾಹಿತಿಯನ್ನು ಪಡೆಯುವಂತೆ ನಿರ್ದೇಶನ ನೀಡಿತ್ತು. ಈ ಹಿನ್ನಲೆಯಲ್ಲಿ ಹೈಕೋರ್ಟ್ ಕಳೆದ ಜ.29 ರಂದು ಕೇಂದ್ರ ಚುನಾವಣಾ ಆಯೋಗಕ್ಕೆ ನಾಮ ನಿರ್ದೇಶನದ ಸದಸ್ಯರನ್ನು ಕೈ ಬಿಟ್ಟು ಉಳಿದ ಮತಗಳನ್ನು ಮರು ಎಣಿಕೆ ಮಾಡುವಂತೆ ಸೂಚನೆ ನೀಡಿತ್ತು. ಗಾಯತ್ರಿ ಶಾಂತೇಗೌಡ ಅವರು 6 ಮತಗಳ ಅಂತರದಿಂದ ಪರಾಭವಗೊಂಡಿದ್ದರು. ಆದರೆ, ಶುಕ್ರವಾರ ನಡೆದ ಮರು ಮತ ಎಣಿಕೆಯಲ್ಲಿ ಸಂದರ್ಭದಲ್ಲಿ 12 ನಾಮ ನಿರ್ದೇಶನ ಸದಸ್ಯರ ಮತಗಳನ್ನು ಕೈ ಬಿಡಲಾಗಿದೆ. ಜಿಲ್ಲೆಯ ರಾಜಕಾರಣಿಗಳು ಹಾಗೂ ಜನರು ಮರು ಮತ ಎಣಿಕೆಯಲ್ಲಿ ಯಾರು ಗೆಲ್ಲುತ್ತಾರೆ ಎಂಬ ಬಗ್ಗೆ ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನ ಮಾಡಿದರೂ ಇದೆಲ್ಲವೂ ಮುಂದೆ ಸುಪ್ರೀಂ ಕೋರ್ಟ್ ನೀಡುವ ತೀರ್ಪಿನ ಮೇಲೆ ಆಧಾರಿತವಾಗಿದೆ. ಇಲ್ಲಿ ಇರುವುದು ಒಂದೇ ಪ್ರಶ್ನೆ. ಸರ್ಕಾರದಿಂದ ನಾಮನಿರ್ದೇಶಿತವಾಗಿದ್ದವರಿಗೆ ಮತದಾನದ ಹಕ್ಕು ಇದೆಯೇ ಅಥವಾ ಇಲ್ಲವೇ ಎಂಬುದಾಗಿದೆ.ಮಾ. 4ರಂದು ಸುಪ್ರೀಂ ಕೋರ್ಟ್‌ನಲ್ಲಿ ಈ ಪ್ರಕರಣದ ವಿಚಾರಣೆ ನಡೆಯಲಿದ್ದು, ನ್ಯಾಯಾಲಯ ಸರ್ಕಾರದ ನಾಮನಿರ್ದೇಶಿತ ಸದಸ್ಯರಿಗೆ ಮತದಾನದ ಹಕ್ಕು ಇದೆ ಎಂದು ತೀರ್ಪು ನೀಡಿದೇ ಆದಲ್ಲಿ ಇದೀಗ ನಡೆದಿರುವ ಮರು ಮತ ಎಣಿಕೆಗೆ ಯಾವುದೇ ಮೌಲ್ಯ ಇರುವುದಿಲ್ಲ. ಅದೇ ಸುಪ್ರೀಂ ಕೋರ್ಟ್ ಸರ್ಕಾರದಿಂದ ನಾಮನಿರ್ದೇಶಿತರಾಗಿರುವ ಸದಸ್ಯರಿಗೆ ಮತದಾನದ ಹಕ್ಕಿಲ್ಲ ಎಂದು ತೀರ್ಪು ನೀಡಿದೇ ಅದಲ್ಲಿ ಮರು ಮತ ಎಣಿಕೆ ಹೆಚ್ಚು ಮೌಲ್ಯ ಪಡೆಯಲಿದೆ.

## ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ವಿರುದ್ಧ ಪೋಕ್ಸೋ ಕೇಸು: ಮಾರ್ಚ್ 15ರಂದು ವಿಚಾರಣೆ

**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಮತ್ತು ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ಮುಂದೆ ವಿಚಾರಣೆಗೆ ಹಾಜರಾಗುವಂತೆ ಬೆಂಗಳೂರಿನ 1 ನೇ ತ್ವರಿತಗತಿ ನ್ಯಾಯಾಲಯ ಸೂಚಿಸಿ ಸಮನ್ಸ್ ಜಾರಿ ಮಾಡಿದೆ.

ಯಡಿಯೂರಪ್ಪ ಅವರ ಜೊತೆ ಸಹ-ಆರೋಪಿಗಳಾದ ವೈ.ಎಂ. ಅರುಣಾ, ರುದ್ರೇಶ ಮತ್ತು ಮರುಳಸಿದ್ಧಯ್ಯ ಜಿ. ಮರಿಸ್ವಾಮಿ ಅವರಿಗೆ ಸಹ ಸಮನ್ಸ್ ಜಾರಿ ಮಾಡಿ ಮಾರ್ಚ್ 15ರಂದು ವಿಚಾರಣೆ ನಿಗದಿಪಡಿಸಿದೆ.

ಪೋಕ್ಸೋ ಪ್ರಕರಣದಲ್ಲಿ ಇತ್ತೀಚೆಗೆ ಮಾಜಿ ಸಿಎಂ ಯಡಿಯೂರಪ್ಪ ಅವರಿಗೆ ಹೈಕೋರ್ಟ್ ನಿರೀಕ್ಷಣಾ ಜಾಮೀನು ನೀಡಿತ್ತು.

ಬಿ.ಎಸ್. ಯಡಿಯೂರಪ್ಪ ಅವರಿಗೆ ದೊಡ್ಡ ರಿಲೀಫ್ ನೀಡಿದ ಹೈಕೋರ್ಟ್, ಯಡಿಯೂರಪ್ಪ ಅವರನ್ನು ಬಂಧಿಸದಂತೆ ಸೂಚಿಸಿತ್ತು. ವಿಚಾರಣೆಗೆ ಮೊದಲು ಹಾಜರಾತಿಯಿಂದ ವಿನಾಯಿತಿ ನೀಡಲಾಗಿತ್ತು.

ಪ್ರಕರಣ ರದ್ದತಿ ಕೋರಿ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್ ಧಾರವಾಡ ಪೀಠ, ನಿರೀಕ್ಷಣಾ ಜಾಮೀನು ನೀಡಿತ್ತು. ಆದರೆ, ಪ್ರಕರಣ ರದ್ದು ಮಾಡಲು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಪೀಠ ನಿರಾಕರಿಸಿತ್ತು. ಹೀಗಾಗಿ ಯಡಿಯೂರಪ್ಪ ಬಂಧನದಿಂದ ಪಾರಾದರೂ ವಿಚಾರಣೆ ಎದುರಿಸಲೇಬೇಕಾಗಿದೆ. ಆದ್ದರಿಂದ ಇದೀಗ ಬೆಂಗಳೂರಿನ ನ್ಯಾಯಾಲಯ ವಿಚಾರಣೆಗೆ ದಿನ ನಿಗದಿಪಡಿಸಿದೆ.

## ಊರಮ್ಮ ದೇವಿ ಜಾತ್ರೆಗೆ ಕಾಣಿಕೆ

**ಹರಿಹರ:** ಮಾ.18 ರಿಂದ 22ರ ವರೆಗೆ ಇಲ್ಲಿನ ಗ್ರಾಮ ದೇವತೆ ಊರಮ್ಮನ ಜಾತ್ರೋತ್ಸವ ನಡೆಯಲಿದ್ದು, ಭಕ್ತರಿಂದ ಕಾಣಿಕೆ ಹರಿದು ಬರುತ್ತಿದೆ. ನಿತ್ಯ ನಗರದ ಫುಟ್‌ಪಾತ್‌ನಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುವ, ಗ್ರಾಮ ದೇವತೆ ಎಗ್ ಫ್ರೈ ಚಿಕ್ಕನ್ ವ್ಯಾಪಾರಸ್ಥರ ಸಂಘದ ಎಲ್ಲಾ ಸದಸ್ಯರು ಸಂಗ್ರಹಿಸಿದ್ದ 10 ಸಾವಿರ 1 ರೂ ಹಣವನ್ನು ಭಾನುವಾರ ಚೆಕ್ ಮೂಲಕ ಉತ್ಸವ ಸಮಿತಿಗೆ ನೀಡಿದರು.ಗ್ರಾಮ ದೇವತೆ ಎಗ್ ಫ್ರೈ ಚಿಕ್ಕನ್ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಕಾರ್ಮಿಕ ಮುಖಂಡ ಎಚ್.ಕೆ.ಕೊಟ್ರಪ್ಪ ಮಾತನಾಡಿ, ನಿತ್ಯ ಕಷ್ಟಪಟ್ಟು ದುಡಿದ ಹಣದಲ್ಲಿ ಸಂಘದ ಸದಸ್ಯರು ತೆಗೆದುಕೊಂಡ ನಿರ್ಣಯದಂತೆ ಊರಮ್ಮ ದೇವಿ ಜಾತ್ರೆಗೆ ಕಾಣಿಕೆ ನೀಡುವ ಮೂಲಕ ನಮ್ಮ ಸಂಘ ಹಾಗೂ ಸಂಘದ ಎಲ್ಲಾ ಸದಸ್ಯರು, ಇತರರಿಗೆ ಮಾದರಿಯಾಗಿದ್ದಾರೆ ಎಂದು ಹೇಳಿದರು. ನಗರಸಭೆ ಸದಸ್ಯ ಕೆ.ಬಿ.ರಾಜಶೇಖರ್ ಮಾತನಾಡಿ, 2025-27ನೇ ಸಾಲಿನ ಊರಮ್ಮನ ಜಾತ್ರಾ ಉತ್ಸವ ಸಮಿತಿಯ ಅಧ್ಯಕ್ಷ ಮಂಜುನಾಥ್ ಹಾರ್ನಳ್ಳಿ ಅವರು ಯುವಕರಾಗಿದ್ದು, ಯುವಕರ, ಹಿರಿಯರ ಜೊತೆಗೆ ಉತ್ಸುಕರಾಗಿ ಜಾತ್ರಾ ಮಹೋತ್ಸವವನ್ನು ಯಶಸ್ವಿಯಾಗಿ ನಡೆಸಲು ಶ್ರಮಿಸುತ್ತಿದ್ದಾರೆ.

Published and Owned by : **PRATHIBHA M.S.,** Published at : No. 900/A2, Opp-Banashankri Temple Arch, Main Road, Shakti Nagara, Davanagere, Karnataka-577004. Printed by : **MALLIKARJUNAPPA H.G.** Printed at : SHIVA MEDIA HOUSE, No.900/A2, Opp-Banashankari Temple Arch, Main Road, Davanagere, Karnataka-577004. Editor: **MALLIKARJUNAPPA H.G.**